## ಅಧ್ಯಾಯ 18

# ಬಾಬೆಲೆಂಬ ನಗರಿಯು ಬಿದ್ದಳು

ಬಾಬೆಲಿನ ಅರಸನಾದ ಬೇಲ್ಶಚ್ಚರನು ತನ್ನ ರಾಜ್ಯದ ಒಂದು ಸಾವಿರ ಮುಖಂಡರಿಗೆ ಔತಣವನ್ನು ಏರ್ಪಡಿಸಿದ್ದನು. ಈ ವಿಧವಾದ ಔತಣಗಳು ಬಹು ಗದ್ದಲದಿಂದ ಕೂಡಿದ ವ್ಯವಹಾರಗಳಾಗಿದ್ದು ಅನೇಕ ದಿನಗಳು ಅಥವಾ ವಾರಗಳ ಕಾಲ ಮುಂದುವರೆಯುತ್ತಿದ್ದು ಈ ಕಾರ್ಯಕ್ರಮವನ್ನು "ಒಂದು ಕುಡಿತದ ಸ್ವಚ್ಛಂದ ಸಮಾರಂಭ" ಎಂದು ಕರೆದರೆ ತಪ್ಪಾಗುವದಿಲ್ಲ. ಔತಣವು ಉಚ್ಛಘಟ್ಟವನ್ನು ತಲುಪಿದಾಗ, ಅರಸನು ಯೆರೂಸಲೇಮಿನ ದೇವಾಲಯದಿಂದ ಕೊಳ್ಳೆ ಹೊಡೆದು ತಂದಿದ್ದ ಬಂಗಾರದ ಹಾಗೂ ಬೆಳ್ಳಿ ಪಾತ್ರೆಗಳನ್ನು ತರುವಂತೆ ಆಜ್ಞಾಪಿಸಿದನು. ಔತಣದಲ್ಲಿ ಭಾಗಿಯಾಗಿರುವವರು ಪವಿತ್ರ ಪಾತ್ರೆಗಳಲ್ಲಿ ಮದ್ಯವನ್ನು ಸೇವಿಸುತ್ತಾ ಇಬ್ರಿಯರ ದೇವರನ್ನು ಅಪಹಾಸ್ಯಮಾಡುತ್ತಾ ಇರುವಾಗ ಅಲ್ಲೊಂದು ಅಣಕಿಸುವ ನಗು ಪ್ರತಿಧ್ವನಿಸಿರಬಹುದಾಗಿದೆ. ಈ ಆವಹೇಳನವು ದಾನಿಯೇಲ 5:4ನೇ ವಚನದ ಮಾತುಗಳಲ್ಲಿ ಸೂಚಿಸಲ್ಪಟ್ಟಿರುತ್ತದೆ: ಯೆರೂಸಲೇಮಿನಲ್ಲಿನ ದೇವಾಲಯವು ನಾಶಗೊಳಿಸಲ್ಪಟ್ಟಿದ್ದರಿಂದ, ಇಸ್ರಾಯೇಲ್ಯರ ದೇವರು *ತಮ್ಮ* ದೇವರುಗಳಿಗಿಂತ ಕಡಿಮೆಯಾದವನೆಂದು ಅವರು ಭಾವಿಸಿಕೊಂಡಿದ್ದರು. ಹೇಗೂ, ಒಂದು ದೇಹದಿಂದ ಪ್ರತ್ಯೇಕವಾದ ಹಸ್ತವು ಮಾತ್ರವೇ ಕಾಣಿಸಿಕೊಂಡು ಗೋಡೆಯ ಮೇಲೆ ಬರೆಯಲಾರಂಭಿಸಿದಾಗ, ಅವರ ನಗೆಯಲ್ಲಾ ನಿಂತುಹೋಗಿತ್ತು: "ಮೆನೇ, ಮೆನೇ, ತೆಕೇಲ್ ಉಫರ್ಸಿನ್" (ದಾನಿಯೇಲ 5:25). "ಮೆನೇ" ಎಂಬುದು מְנֵא (*menē*) ಎಂಬ ಆರಾಮಿಕ್ ಪದದ ಕ್ರಿಯಾರೂಪವಾಗಿದ್ದು "ಲೆಕ್ಕಿಸು" ಎಂದರ್ಥವನ್ನು ಹೊಂದಿದೆ. "ತೆಕೇಲ್" ಎಂಬುದು תְּקֵל (*teqel*) ಎಂಬ ಅರಾಮಿಕ್ ಪದದ ಕ್ರಿಯಾಪದರೂಪವಾಗಿದ್ದು, "ತೂಕ ಮಾಡು" ಎಂರ್ಥವಾಗಿದೆ. "ಉಫರ್ಸಿನ್" ಎಂಬುದು פְּרֵס (*peres*) ಎಂಬ ಅರಾಮಿಕ್ ಕ್ರಿಯಾಪದರೂಪವಾಗಿದ್ದು "ವಿಭಾಗಿಸು" ಎಂದರ್ಥವಾಗಿರುತ್ತದೆ, ಮತ್ತು "ಪಾರಸಿಯರು" (ದಾನಿಯೇಲ 5:28) ಅರ್ಥಬರುವ פָּרָס (*Paras*) ಎಂಬ ಪದವನ್ನು ಹೋಲುತ್ತದೆ.

ಈ ಪದಗಳಿಗೆ ಮೂರು ಅರ್ಥಗಳಿರುತ್ತವೆಂದು ಅರಸನಿಗೆ ತಿಳಿಸಲಾಯಿತು: (1) ದೇವರ ಆತನ ರಾಜ್ಯದ ದಿನಗಳನ್ನು ಲೆಕ್ಕ ಮಾಡಿದ್ದಾನೆ, ಮತ್ತು ಅದು ಕೊನೆಯ ಗಳಿಗೆಯಲ್ಲಿದೆ (ದಾನಿಯೇಲ 5:26); (2) ಆತನು "ತಕ್ಕಡಿಯಲ್ಲಿ ತೂಗಲ್ಪಟ್ಟು ಕಡಿಮೆಯಾಗಿ ಕಂಡು ಬಂದಿದ್ದನು" (ದಾನಿಯೇಲ 5:27; KJV); ಮತ್ತು (3) ಆತನ ರಾಜ್ಯವು ಮೇದ್ಯಯರು ಹಾಗೂ ಪಾರಸಿಯರ ಕೈಗೆ ಒಪ್ಪಿಸಲ್ಪಡುವದು (ದಾನಿಯೇಲ 5:28). "ಅದೇ ರಾತ್ರಿಯಲ್ಲಿ ಕಸ್ದೀಯ ರಾಜನಾದ ಬೇಲ್ಶಚ್ಚರು ಕೊಲ್ಲಲ್ಪಟ್ಟನು" (ದಾನಿಯೇಲ 5:30; NLT). ಪ್ರವಾದನೆಯಾಗಿ ಹೇಳಲ್ಪಟ್ಟಿದ್ದ ಪ್ರಕಾರವೇ, ಬಾಬೆಲ್ ನಗರವು ಮೇದ್ಯ-ಪಾರಸಿಯರ ವಶವಾಯಿತು (ದಾನಿಯೇಲ 5:31).

ಪ್ರಾಚೀನ ಬಾಬೆಲಿಗೆ ಸಮಾನವಾದ ಹೊಸ ಒಡಂಬಡಿಕೆಯ ನಗರವು ರೋಮ್

ನಗರವಾಗಿದೆ, ಅದು ಪ್ರಕಟನೆ ಪುಸ್ತಕದಲ್ಲಿ "ಮಹಾ ಬಾಬೆಲೆಂಬ ನಗರಿ" ಎಂದು ಕರೆಯಲ್ಪಟ್ಟಿದೆ (17:5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ರೋಮ್ ನಗರಿಯ ಕುರಿತು "ಗೋಡೆಯ ಮೇಲಿನ ಬರಹವು" ಪ್ರಕಟನೆ 18ನೇ ಅಧ್ಯಾಯದಲ್ಲಿ ಸಿಕ್ಕುತ್ತದೆ. Daniel Russellನು ಹೇಳಿದ್ದೇನೆಂದರೆ "ಇದು ಅರ್ಥಮಾಡಿಕೊಳ್ಳುವದಕ್ಕೆ ಅತ್ಯಂಥ ಸುಲಭವಾದ ಅಧ್ಯಾಯಗಳಲ್ಲೊಂದಾಗಿದೆ."[1] ಒಂದೇ ಸಂದೇಶವನ್ನು ಪದೇ ಪದೇ ಪುನರಾವರ್ತಿಸಲಾಗಿರುತ್ತದೆ: "ಬಾಬೆಲೆಂಬ ನಗರಿಯು (ಅಂದರೆ, ರೋಮ್ ನಗರಿ) ನಾಶವಾದಳು." 18ನೇ ಅಧ್ಯಾಯದಲ್ಲಿ ಕೊಡಲಾಗಿರುವ ವಿವರಗಳು ರೋಮ್ ನಗರಕ್ಕೆ ಪರಿಪೂರ್ಣವಾಗಿ ಸರಿಹೊಂದುತ್ತವೆ - ಪ್ರಕಟನೆ ಪುಸ್ತಕದಲ್ಲಿ "ಬಾಬೆಲೆಂಬ ಮಹಾ ನಗರಿ" ಎಂಬುದು ರೋಮ್ ನಗರಿಯನ್ನು ಪ್ರತಿನಿಧಿಸುತ್ತದೆಂಬುದನ್ನು ಇನ್ನಷ್ಟು ಪುರಾವೆಯಾಗಿರುತ್ತದೆ.

Bruce Metzgerನು ಪ್ರಕಟನೆ 17 ಮತ್ತು 18 ಅಧ್ಯಾಯಗಳನ್ನು "ಕಲ್ಪನಾತ್ಮಕ ಶಕ್ತಿಯ ಒಂದು ಅಕ್ಷರಶಃ ಜಯ"[2] ಎಂದು ಬಣ್ಣಿಸಿದನು. Russellನು ಹೇಳಿದ್ದೇನೆಂದರೆ ಪ್ರಕಟನೆ 18ನೇ ಅಧ್ಯಾಯವು "ಪ್ರಕಟನೆ ಪುಸ್ತಕದಲ್ಲಿ ಅತ್ಯಂಥ ಶ್ರೇಷ್ಠ ಅಧ್ಯಾಯಗಳಲ್ಲೊಂದಾಗಿದೆ ... ಗಟ್ಟಿಯಾಗಿ ಓದಿರಿ, ಈ ಅಧ್ಯಾಯವು ಉದಾತ್ತವಾದ, ಸುಂದರವಾದ, ಭಯಂಕರವಾದ, ಮನಃಸೆಳೆಯುವ ಪದ್ಯವಾಗಿರುತ್ತದೆ."[3]

18ನೇ ಅಧ್ಯಾಯದ ಸಂದೇಶವು ಹಳೆಯ ಒಡಂಬಡಿಕೆಯಲ್ಲಿ ಘೋಷಿಸಲಾಗಿರುವ ವಿನಾಶದ ಸಂದೇಶದ ಮಾದರಿಯಲ್ಲಿರುತ್ತದೆ, ಉದಾಹರಣೆಗೆ ನಿನೇವೆ ಕುರಿತಾದ (ಚೆಪನ್ಯ 2), ಏದೋಮ್ (ಯೆಶಾಯ 34), ಮತ್ತು ಇಸ್ರಾಯೇಲ್ (ಆಮೋಸ 5) ಕುರಿತಾದ ಸಂದೇಶ. ವಾಕ್ಯಭಾಗವು ವಿಶೇಷವಾಗಿ ನಮಗೆ ಬಾಬೆಲ್ ಹಾಗೂ ತೂರ್ ಪಟ್ಟಣಗಳ ಚರಮಗೀತೆಗಳನ್ನು ನೆನಪಿಸುತ್ತದೆ (ಯೆಶಾಯ 13; 14; 21; ಯೆರೆಮೀಯ 50:51; ಯೆಹೆಜ್ಕೇಲ 26; 27). ಹಳೆಯ ಒಡಂಬಡಿಕೆಯ ಪರಿಭಾಷೆಯ ಬಳಕೆಯು ಅಧ್ಯಾಯವು ಹೇಗಿರಲಿದೆ ಎಂಬುದಕ್ಕೆ ಮುನ್ನೋಡಿಯನ್ನು ಬರೆಯುತ್ತದೆ; ಹೇಗೂ, ಹೆಚ್ಚು ಪ್ರಾಮುಖ್ಯವಾಗಿ, ಇದು ಮೊದಲ ಶತಮಾನದ ವಾಚಕರಿಗೆ ದೇವರ ವಾಗ್ದಾನ ಮಾಡಿದ್ದ ಪ್ರಕಾರವೇ ನಿಖರವಾಗಿ ಸಂಭವಿಸಿದ್ದ ಹಳೆಯ ಒಡಂಬಡಿಕೆಯ ಮುಂತಿಳಿಸುವಿಕೆಗಳನ್ನು ಜ್ಞಾಪಿಸುತ್ತದೆ. ಹೀಗೆ ಬಾಬೆಲ್ (ಅಂದರೆ, ರೋಮ್) ಬೀಳುವದೆಂದು ದೇವರು ಹೇಳಿದನೆಂದರೆ, ಆಕೆಯು *ಬೀಳುವಳು* ಅಷ್ಟೆ.

ಈ ನಾಶನದ ಅಧ್ಯಾಯದೊಳಗೆ, ಅತ್ಯಂಥ ದುಸ್ವಪ್ನದಂತೆ ಕಾಡುವ ದೃಶ್ಯವಾಗಿ ಬಣ್ಣಿಸಲ್ಪಟ್ಟಿರುವ ನಿರ್ಜನವಾಗಿರುವ ನಗರ ಎಂಬುದೆ: ಇನ್ನು ಮೇಲೆ ಮಾನವರು ವಾಸವಾಗಿರದಂಥ ನಮಗೆ (ವಚನಗಳು 22, 23), ಅದು ಕೇವಲ ಅಸಹ್ಯವಾಗಿರುವ ಜೀವಿಗಳಿಗೆ ನಿವಾಸ (ವ. 2) ಆಗಿರುವದು. ಬಾಬೆಲಿಗೆ ಹೀಗೆ ಹೇಳಲಾಯಿತು, "ದೀಪದ ಬೆಳಕು ನಿನ್ನಲ್ಲಿ ಇನ್ನೆಂದಿಗೂ ಕಾಣಿಸುವದಿಲ್ಲ" (ವ. 23). ಒಂದು ಕಾಲದಲ್ಲಿ ಗರ್ವದ ನಗರವಾಗಿದ್ದ ಅದರೊಳಗೆ ಈಗ ಅಂಧಕಾರ ಹಾಗೂ ಏಕಾಂಗಿತನಗಳಷ್ಟೇ ಕವಿದಿರುವವು.

ಮೊದಲ ಶತಮಾನದ ವಾಚಕರಿಗೆ ರೋಮ್ ನಗರವು ಬಿದ್ದು ಹೋಗುವದೆಂಬುದಾಗಿ ನಂಬುವದಕ್ಕೆ ಕಷ್ಟಕರವಾಗಿದ್ದಿರಬಹುದು. ಒಂದು ಪ್ರಾಚೀನ ಜ್ಞಾನೋಕ್ತಿಯು ಹೀಗೆ ಹೇಳುತ್ತದೆ, "ಎಲ್ಲಾ ರಸ್ತೆಗಳು ರೋಮಿಗೆ ನಡಿಸುತ್ತವೆ." ಪ್ರಾಚೀನ ರೋಮಿನ ಸಭಾಸ್ಥಾನದ ಹೃದಯಭಾಗದಲ್ಲಿ, "ಚಿನ್ನದ ಮೈಲಿಕಂಬ"ದ ಪಳೆಯುಳಿಕೆಯು ಇರುತ್ತದೆ. ಈ ಮೈಲಿಕಂಬದ ಮೇಲೆ ಸಾಮ್ರಾಜ್ಯದ ಪ್ರಮುಖ ಹೊರಠಾಣೆಗಳಿಗೆ ಇರುವ ದೂರದ ವಿವರಗಳನ್ನು ಕೆತ್ತಲಾಗಿತ್ತು, ಅವೆಲ್ಲವೂ ಕೇಂದ್ರ ನಗರಕ್ಕೆ ಸಂಪರ್ಕ ಹೊಂದಿದ್ದವು. ರೋಮ್ ನಗರವು ಲಕ್ಷಾಂತರ ಜನರು ಹೋಗಲಿಚ್ಛಿಸುವ ಸ್ಥಳವಾಗಿತ್ತು.

ರೋಮ್ ನಗರವು ಕಲೆಗಳಿಗೆ ಕೇಂದ್ರವಾಗಿತ್ತು, ವಿಶ್ವದಲ್ಲೆಡೆಯಿರುವ ಸಾಹಿತ್ಯಕ ಹಾಗೂ ಕಲೆಯ ಪ್ರತಿಭೆಗಳನ್ನು ಆಕರ್ಷಿಸುತ್ತಿತ್ತು. ಪಟ್ಟಣದುದ್ದಕ್ಕೂ "ವೀಣೆಗಾರರೂ ವಾದ್ಯಗಾರರೂ ಕೊಳಲೂದುವವರೂ ತುತೂರಿಯವರೂ ಮಾಡುವ ಧ್ವನಿ" ಕೇಳಿಸಬಹುದಿತ್ತು (ವ. 22). ನುರಿತ ಕೈಗಾರಿಕೆಗಾರರು ಮಾಡಿದ ವಸ್ತುಗಳು ಕಣ್ಣಿಗೆ ವಿಸ್ಮಯವನ್ನುಂಟು ಮಾಡಿ ಇಂದ್ರಿಯಗಳನ್ನು ಪ್ರಚೋದಿಸುತ್ತಿದ್ದವು (ವ. 22). ರೋಮ್ ನಗರವು ದೀಪಗಳಿಂದ ಉರಿಯುತ್ತಾ, ಸದಾ ಚಟುವಟಿಕೆಯಿಂದ ತುಡಿಯುತ್ತಿತ್ತು, ಮತ್ತು ನಗುವು ಆ ನಗರದಲ್ಲಿ ತುಂಬಿಕೊಂಡಿತ್ತು (ವಚನಗಳು 22, 23). ಪ್ರವಾಸಿಗಳಿಗಾದರೋ, ಪ್ರತಿಯೊಂದು ಮೂಲೆಯಲ್ಲಿಯೂ ಒಂದು ಹೊಸ ಅಚ್ಚರಿಯು ಕಾದಿರುತ್ತಿತ್ತು.

ರೋಮ್ ನಗರ ಪ್ರಭಾವವು ಎಷ್ಟೊಂದು ವ್ಯಾಪಕವಾಗಿ ಹರಡಿತ್ತೆಂಬುದು 17, 18, ಮತ್ತು 19 ಅಧ್ಯಾಯಗಳಲ್ಲಿ ಸಾಭಿತುಗೊಳ್ಳುತ್ತದೆ: ಆಕೆಯು ಭೂಲೋಕದ ಜನಾಂಗಗಳ ಮೇಲೆ ಆಳ್ವಿಕೆ ಮಾಡುತ್ತಿದ್ದಳು (17:1, 15); ಯಾರಿಗೆ ಅಧಿಕಾರದ ಸ್ಥಾನ ಸಿಗಬೇಕು ಹಾಗೂ ಯಾರಿಗೆ ಸಿಗಬಾರದೆಂಬುದು ಆಕೆಯು ಹೇಳಿದಂತೆಯೇ ನಿರ್ಧಾರವಾಗುತ್ತಿತ್ತು (17:18). ರೋಮನ್ ಸಭಾಸ್ಥಾನದಲ್ಲಿ ಮಾಡಲ್ಪಟ್ಟ ತೀರ್ಮಾನಗಳು ಸಾಮ್ರಾಜ್ಯದ ಪ್ರತಿಯೊಂದು ಮೂಲೆಗಳಲ್ಲಿಯೂ ಪರಿಣಾಮವನ್ನುಂಟು ಮಾಡುತ್ತಿತ್ತು. ನಗರವು ವಿಶ್ವದ ವಾಣಿಜ್ಯದ ಮೇಲೆ ಸಹ ಪಾರುಪತ್ಯವನ್ನು ಹೊಂದಿತ್ತು (18:11–17). "ರೋಮಿನ ಬಂದರು ಆಗಿರುವ Ostia ಎಂಬ ಸ್ಥಳದಲ್ಲಿ, ವಸಾಹತುಗೊಳಿಸಲ್ಪಟ್ಟ ಸಾಲುಕಂಬಗಳಿದ್ದು ಅಲ್ಲಿ ವ್ಯಾಪಾರಿಗಳು ... ತಮ್ಮ ಕಛೇರಿಗಳನ್ನು ಇಟ್ಟುಕೊಂಡಿದ್ದರು, ಮತ್ತು ಇದು ಸಾಮ್ರಾಜ್ಯದಲ್ಲಿ ಅತ್ಯಂಥ ದೊಡ್ಡ ಶಕ್ತಿಯ ಕೇಂದ್ರಗಳಲ್ಲೊಂದಾಗಿರಬಹುದು."[4] ತೀಬೆರಿಯ ನದಿಯು ಸಮುದ್ರವನ್ನು ಸೇರುವ ಜಾಗದಲ್ಲಿದ್ದ Ostiaವು ರೋಮಿನ ಸರಕುಸಾಗಾಟಕ್ಕಾಗಿದ್ದ ಪ್ರಮುಖ ಬಂದರು ಆಗಿತ್ತು. ಪೌಲನು ಹಡುಗು ರೋಮಿನ ಬಂದರು ಆಗಿ ಸೇವೆ ಸಲ್ಲಿಸುತ್ತಿದ್ದ ಮತ್ತೊಂದು ಬಂದರಿನಲ್ಲಿ ನಿಲುಗಡೆಗೊಂಡಿತ್ತು: ಪೊತಿಯೋಲ (ಅಪೊಸ್ತಲರ ಕೃತ್ಯಗಳು 28:13). ಪೊತಿಯೋಲವು ಐಗುಪ್ತ್ಯದೇಶ ಮತ್ತು ಮೂಡಣ ದೇಶಗಳಿಂದ ಬರುವ ಪ್ರಯಾಣಿಕರು ಇಳಿಯುವ ಸ್ಥಳವಾಗಿತ್ತು.

ಒಳ್ಳೇ ರೋಮಿಗೆ ಇದ್ದ ಶಕ್ತಿ ಎಂಥದ್ದಾಗಿರಬಹುದು! ಹೇಗೂ, ದೇಶಗಳನ್ನು ಮೇಲಕ್ಕೆ ಎತ್ತುವದರ ಬದಲಾಗಿ, ಆಕೆಯು ಅವುಗಳನ್ನು ಕೆಳಕ್ಕೆ ಎಳೆದಳು. ದೇವದೂತನು ಹೀಗೆ ಹೇಳಿದನು, "ಎಲ್ಲಾ ಜನಾಂಗಗಳು ಅವಳ ಅತಿಜಾರತ್ವವೆಂಬ ದ್ರಾಕ್ಷಾರಸವನ್ನು ಕುಡಿದರು; ಅವಳೊಂದಿಗೆ ಭೂರಾಜರು ಜಾರತ್ವ ಮಾಡಿದರು; ಅವಳು ಸುಖಭೋಗಿನಿಯಾಗಿದ್ದದರಿಂದ ಭೂಲೋಕದ ವರ್ತಕರು ಐಶ್ವರ್ಯವಂತರಾದರು" (18:3; ನೋಡಿರಿ ವ. 9). ರೋಮ್ ನಗರವು ಶಾರೀರಿಕ ಹಾಗೂ ಆತ್ಮೀಕ ಎರಡೂ ಜಾರತ್ವವನ್ನು ಮಾಡಿದ ಅಪರಾಧಕ್ಕೊಳಗಾಗಿತ್ತು, ವಿಶೇಷವಾಗಿ ಚಕ್ರವರ್ತಿಯ ಆರಾಧನೆಗೆ ಸಂಬಂಧ ಪಟ್ಟಂತೆ - ಮತ್ತು ಆಕೆಯು ತನ್ನ ಜಾರತ್ವದಿಂದ ಇಡೀ ಲೋಕವನ್ನು ಭ್ರಷ್ಟಗೊಳಿಸಿದ್ದಳು (ನೋಡಿರಿ 19:2). ದೇವರ ನ್ಯಾಯದ ತಕ್ಕಡಿಯು ತೂಕವನ್ನು ತೋರಿಸಿತ್ತು ಮತ್ತು ಈಗ ನ್ಯಾಯತೀರ್ಪು ನಡೆಯುವ ಸಮಯವಾಗಿತ್ತು. ಹೀಗಿರುವದರಿಂದ ಒಬ್ಬ ದೇವದೂತನು ರೋಮಿಗೆ ಸನ್ನಿಹಿತವಾಗಿದ್ದ ನಾಶನವನ್ನು, ಲೋಕದ ದೇಶಗಳುದ್ದಕ್ಕೂ ಕಂಪನವನ್ನುಂಟು ಮಾಡುವಂಥ ಒಂದು ಮಹಾ ಬೀಳುವಿಕೆ ಸಂಭವಿಸಲಿದೆ ಎಂಬುದನ್ನು ಘೋಷಿಸುತ್ತಾನೆ.

## ದೇವದೂತನ ಘೋಷಣೆ (18:1-3)

**[1]ಇದಾದ ಮೇಲೆ ಮಹಾ ಅಧಿಕಾರವುಳ್ಳ ಮತ್ತೊಬ್ಬ ದೇವದೂತನು ಪರಲೋಕದಿಂದ**

**ಇಳಿಯುವದನ್ನು ಕಂಡೆನು; ಅವನ ಪ್ರಭಾವದಿಂದ ಭೂಮಿಗೆ ಪ್ರಕಾಶವುಂಟಾಯಿತು. [2]ಅವನು ಗಟ್ಟಿಯಾದ ಶಬ್ದದಿಂದ ಕೂಗುತ್ತಾ - ಬಿದ್ದಳು, ಬಿದ್ದಳು, ಬಾಬೆಲೆಂಬ ಮಹಾನಗರಿಯು ಬಿದ್ದಳು; ದೆವ್ವಗಳ ವಾಸಸ್ಥಾನವೂ ಅಶುದ್ಧಾತ್ಮಗಳ ಆಶ್ರಯವೂ ಅಪವಿತ್ರವಾಗಿಯೂ ಅಸಹ್ಯವಾಗಿಯೂ ಇರುವ ಸಕಲ ವಿಧವಾದ ಪಕ್ಷಿಗಳ ಆಶ್ರಯವೂ ಆದಳು. [3]ಎಲ್ಲಾ ಜನಾಂಗಗಳು ಅವಳ ಅತಿಜಾರತ್ವವೆಂಬ ದ್ರಾಕ್ಷಾರಸವನ್ನು ಕುಡಿದರು; ಅವಳೊಂದಿಗೆ ಭೂರಾಜರು ಜಾರತ್ವ ಮಾಡಿದರು; ಅವಳು ಸುಖಭೋಗಿನಿಯಾಗಿದ್ದದರಿಂದ ಭೂಲೋಕದ ವರ್ತಕರು ಐಶ್ವರ್ಯವಂತರಾದರು ಎಂದು ಹೇಳಿದನು.**

**ವಚನ 1.** ಯೋಹಾನನು ಹೀಗೆ ಆರಂಭಿಸುತ್ತಾನೆ, **ಇದಾದ ಮೇಲೆ ಮಹಾ ಅಧಿಕಾರವುಳ್ಳ ಮತ್ತೊಬ್ಬ ದೇವದೂತನು ಪರಲೋಕದಿಂದ ಇಳಿಯುವದನ್ನು ಕಂಡೆನು; ಅವನ ಪ್ರಭಾವದಿಂದ ಭೂಮಿಗೆ ಪ್ರಕಾಶವುಂಟಾಯಿತು. ದೇವದೂತನು ಅಧಿಕಾರವುಳ್ಳವನು** ಎಂದು ಹೇಳುವ ಪ್ರಕಟನೆ ಪುಸ್ತಕದಲ್ಲಿನ ಕೆಲವೇ ಸ್ಥಳಗಳಲ್ಲೊಂದಾಗಿದೆ. ದೇವದೂತನು ಸಾರಿ ಹೇಳಿದ್ದು ಬಹಳವಾದ ಮಹತ್ವವನ್ನು ಹೊಂದಿರುವದಾಗಿತ್ತು, ಯಾಕೆಂದರೆ ಆತನು ದೇವರ ಸಮ್ಮುಖದೊಳಗಿಂದ, ಆತನ ಅಧಿಕಾರ ಹಾಗೂ ಆತನ **ಪ್ರಭಾವದಿಂದ** ಪ್ರಕಾಶಿಸುವವನಾಗಿ ಬಂದವನಾಗಿದ್ದನು (ನೋಡಿರಿ ವಿಮೋಚನಕಾಂಡ 34:29–35; ಕೀರ್ತನೆ 104:2; ಯೆಹೆಜ್ಕೇಲ 43:1–5; 1 ತಿಮೊಥೆ 6:16).

**ವಚನ 2.** ಎಲ್ಲರಿಗೂ ಕೇಳಿಸುವಂತೆ **ಅವನು ಗಟ್ಟಿಯಾದ ಶಬ್ದದಿಂದ ಕೂಗುತ್ತಾ - ಬಿದ್ದಳು, ಬಿದ್ದಳು, ಬಾಬೆಲೆಂಬ ಮಹಾನಗರಿಯು ಬಿದ್ದಳು** ಎಂದು ಕೂಗಿ ಹೇಳಿದನು. (ನೋಡಿರಿ ಯೆಶಾಯ 21:9.) ನ್ಯಾಯತೀರ್ಪು ಈ ಮುಂಚೆ ಘೋಷಿಸಲ್ಪಟ್ಟಿತ್ತು (14:8); ಈಗ ತೀರ್ಪನ್ನು ಜಾರಿಗೆ ತರಬೇಕಾಗಿತ್ತು. ದೇವದೂತನು ಘಟನೆಯು ಈಗಾಗಲೇ ಸಂಭವಿಸಿದೆಯೆಂಬಂತೆ ಮಾತಾಡಿದನು, ಹಾಗಿದ್ದರೂ "ಯೋಹಾನನು ಈ ತೀಕ್ಷ್ಣವಾಗಿ ಹೃದಯ ಕಲುಕುವ ಅಧ್ಯಾಯಗಳನ್ನು ಬರೆಯುವ ವೇಳೆ ... ರೋಮ್ ನಗರಿಯು ಇನ್ನೂ ಬಹಳವಾಗಿ ಸಜೀವವಾಗಿತ್ತು, ಇನ್ನೂ ವಿವಾದಾತೀತವಾದ ಸಾರ್ವಭೌಮತೆಯನ್ನು ಮತ್ತು ಮಂದವಾಗದ ಅಂತಸ್ತನ್ನು ಅನುಭವಿಸುತ್ತಿತ್ತು."[5] ನ್ಯಾಯತೀರ್ಪು ಮೊದಲು ದೇವರ ಮನಸ್ಸಿನಲ್ಲಿ ಸಂಭವಿಸುತ್ತದೆ. ಆತನ ಪ್ರಕಾರವಾದರೋ, ಬಾಬೆಲಿನ ಬೀಳುವಿಕೆಯು ಈಗಾಗಲೇ ನೆರವೇರಿರುವಂಥ ವಾಸ್ತವಾಂಶವಾಗಿತ್ತು. 8ನೇ ವಚನದಲ್ಲಿ, ರೋಮಿನ ನಾಶನವನ್ನು ಕುರಿತು ಮಾತಾಡುವಾಗ ಭವಿಷ್ಯತ್ಕಾಲರೂಪವನ್ನು ಬಳಸಲಾಗುವದು. ಅಧ್ಯಾಯದುದ್ದಕ್ಕೂ, ಕಾಲರೂಪವು ವರ್ತಮಾನ, ಭೂತ, ಮತ್ತು ಭವಿಷ್ಯತ್ಕಾಲಗಳಿಗೆ ಹಿಂದಕ್ಕೆ ಹಾಗೂ ಮುಂದಕ್ಕೆ ಹೋಗುತ್ತಲಿರುತ್ತದೆ: ಅದೊಂದು ಅತ್ಯಂಥ ನಿಶ್ಚಯವಾದ ಸಂಗತಿಯಾಗಿದ್ದರಿಂದ ಈಗಾಗಲೇ ಸಂಭವಿಸಿದೆಯೋ ಎಂಬಂತೆ ಮಾತಾಡುವದಕ್ಕೆ ಸಾಧ್ಯವಿತ್ತು; ನಾಶನದ ಮಧ್ಯವರ್ತಿಗಳು ಈಗಾಗಲೇ ಸಿದ್ಧವಾಗಿಡಲ್ಪಟ್ಟಿದ್ದರಿಂದ ಅದರ ಕುರಿತಾಗಿ ಅದು ಸಂಭವಿಸುತ್ತಿದೆಯೆಂಬಂತೆ ಮಾತಾಡಬಹುದಾಗಿತ್ತು; ಆದಾಗ್ಯೂ ವಾಸ್ತವಿಕವಾದ ಘಟನೆಯು ಇನ್ನೂ ಭವಿಷ್ಯದಲ್ಲಿ ನಡೆಯುವದಾಗಿತ್ತು.

ಬಿದ್ದು ಹೋಗಿದ್ದ ಬಾಬೆಲಿನ ಬಣ್ಣನೆಯು ವ್ಯಾಕುಲತೆಯಿಂದ ಕೂಡಿದ್ದಾಗಿತ್ತು: **ದೆವ್ವಗಳ ವಾಸಸ್ಥಾನವೂ ಅಶುದ್ಧಾತ್ಮಗಳ ಆಶ್ರಯವೂ ಅಪವಿತ್ರವಾಗಿಯೂ ಅಸಹ್ಯವಾಗಿಯೂ ಇರುವ ಸಕಲ ವಿಧವಾದ ಪಕ್ಷಿಗಳ ಆಶ್ರಯವೂ ಆದಳು** (ನೋಡಿರಿ ಯೆಶಾಯ 13:20–22; 34:10–15; ಯೆರೆಮೀಯ 51:37). **ವಾಸಸ್ಥಾನ** κατοικητήριον (*katoikētērion*) ಚಿತ್ರಣವು **ಸೆರೆಮನೆ** φυλακή (*phulakē*) ಎಂಬ ಪದದಿಂದ ಪುನರಾವರ್ತಿಸಲ್ಪಟ್ಟಿದ್ದು ಈ ಪದವು ಎರಡು ಸಾರಿ

ಕಾಣಿಸಿಕೊಳ್ಳುತ್ತದೆ. *Phulakē* ಎಂಬ ಪದದ ಅರ್ಥವು "ಆಶ್ರಯ" ಅಥವಾ "ಪಂಜರು" ಎಂದು ಸಹ ಆಗಿರಬಲ್ಲದು. ಕೆಲವು ಹಸ್ತಪ್ರತಿಗಳು ಮೂರನೆಯ ಪುನರಾವರ್ತನೆಯನ್ನು ಸೇರ್ಪಡೆಗೊಳಿಸುತ್ತವೆ: "ಮತ್ತು ಪ್ರತಿಯೊಂದು ಅಶುದ್ಧ ಮೃಗದ ಸರೆಮನೆ." ಇಲ್ಲಿ ದೃಶ್ಯವು ಒಂದು ನಿರ್ಜನ ಪಟ್ಟಣದ್ದು, ಅದು ಧ್ವಂಸಗೊಂಡು ಅತ್ಯಂಥ ಹೇಸಿಗೆಕರವಾದ ಜೀವಿಗಳಿಂದ ವಾಸಿಸಲ್ಪಡುತ್ತಿರುವಂಥದ್ದು.

***ದೆವ್ವಗಳು*** ಹಾಗೂ ***ಅಶುದ್ಧಾತ್ಮಗಳ*** ವಿಷಯವಾಗಿ ನೋಡುವದಾದರೆ, ಚಿತ್ರಣವು ಮತ್ತಾಯ 12:43ರಲ್ಲಿ ಸಿಕ್ಕುವಂತದ್ದಕ್ಕೆ ಸಾಮ್ಯತೆಯನ್ನು ಹೊಂದಿರಬಹುದಾಗಿದೆ: ಅವು "ನೀರಿಲ್ಲದ [ನಿರ್ಜನ] ಸ್ಥಳಗಳಲ್ಲಿ" (ಬಿದ್ದು ಹೋಗಿರುವ ಬಾಬೆಲ) "ವಿಶ್ರಾಂತಿಯನ್ನು ಹುಡುಕುತ್ತಾ" ತಿರುಗಾಡಿದವು. ಪರಿಭಾಷೆಯು "ವಿಕೃತಗೊಳಿಸಲ್ಪಟ್ಟಿರುವ ಆರಾಧನೆ ಹಾಗೂ ಆಚಾರಗಳಲ್ಲಿ ಏನೋ ಪೈಶಾಚಿಕವಾದದ್ದು ಇರುತ್ತದೆಂಬ ... ಹೊಸ ಒಡಂಬಡಿಕೆಯ ವಿವಾದವನ್ನು"[6] ಪ್ರತಿಫಲಿಸುತ್ತದೆ (ನೋಡಿರಿ 1 ಕೊರಿಂಥ 10:20). ದೇವದೂತನು ನೀಡಿದ ಸಾಂಕೇತಿಕತೆಯಲ್ಲಿ, "ತಮ್ಮ ಆಳ್ವಿಕೆಯಿಂದ ಗಡಿಪಾರುಗೊಳಿಸಲ್ಪಟ್ಟಿರುವ ಅನ್ಯಧರ್ಮಿಯರ ದೇವರುಗಳು ತಮ್ಮ ಶಕ್ತಿಯು ಒಂದು ಕಾಲದಲ್ಲಿ ಸರ್ವೋಚ್ಛವಾಗಿದ್ದಂಥ ಪಾಲು ಬಿದ್ದಿರುವ ದೇವಾಲಯಗಳನ್ನು ಹುಡುಕುತ್ತಲಿರುತ್ತವೆ."[7]

ನಮ್ಮಲ್ಲಿ ಅನೇಕರು ***ಅಪವಿತ್ರವಾಗಿಯೂ ಅಸಹ್ಯವಾಗಿಯೂ*** ಇರುವ ಪಕ್ಷಿಗಳ ಬಿದ್ದಿರುವ ಬಾಬೆಲಿನಲ್ಲಿ ವಾಸಿಸುವದನ್ನು ಕುರಿತು ಮಾತಾಡುವ ಚಿತ್ರಣದೊಂದಿಗೆ ಚೆನ್ನಾಗಿ ಅರ್ಥಮಾಡಿಕೊಳ್ಳಬಹುದಾಗಿದೆ. ಮುರಿದು ಹಾಳು ಬಿದ್ದಿರುವ ಕಟ್ಟಡಗಳನ್ನು ನೋಡಿರುತ್ತೇವೆ, ಅವುಗಳು ಈಗ ಕೇವಲ ಪಕ್ಷಿಗಳಿಂದ ಹಾಗೂ ಕಾಡು ಮೃಗಗಳಿಂದ ಮಾತ್ರವೇ ಆಕ್ರಮಿಸಿಕೊಳ್ಳಲ್ಪಟ್ಟಿರುತ್ತವೆ - ಅವುಗಳಲ್ಲಿ ಕೆಲವೊಂದನ್ನು ನಾವು ರಾತ್ರಿಯಲ್ಲಿ ಎದುರುಗೊಳ್ಳುವದಕ್ಕೆ ಬಯಸದವುಗಳಾಗಿರುತ್ತವೆ. ಪ್ರಕಟನೆ ಪುಸ್ತಕದಲ್ಲಿ ಅನೇಕ ಸಾರಿ ಇರುವ ಪ್ರಕಾರವೇ, ಹಳೆಯ ಒಡಂಬಡಿಕೆಯ ಪರಿಭಾಷೆಯು ಬಳಸಲ್ಪಟ್ಟಿರುತ್ತದೆ. ಹಳೆಯ ಒಡಂಬಡಿಕೆಯು "ಅಶುದ್ಧ" ಪಕ್ಷಿಗಳ ವಿಷಯದಲ್ಲಿ ಕೆಲವೊಂದು ನಿಯಮಗಳನ್ನು ಹೊಂದಿತ್ತು (ಯಾಜಕಕಾಂಡ 11). ಮೂಲಭೂತವಾಗಿ, ಇವುಗಳು ಬೇಟೆ ಪಕ್ಷಿಗಳು, ಸಾಮಾನ್ಯವಾಗಿ ಸೇವಿಸಬಾರದ ಪಕ್ಷಿಗಳಾಗಿದ್ದವು.

ಬಾಬೆಲಿನ ನಾಶನದ ಈ ಚಿತ್ರವು ಆ ದಿನದ ಸರಾಸರಿ ನಾಗರಿಕನಿಂದ ಅರ್ಥಮಾಡಿಕೊಳ್ಳಲ್ಪಟ್ಟಿರಬಹುದಾಗಿದೆ. "ಪ್ರಾಚೀನ ಮಧ್ಯಪ್ರಾಚ್ಯದಲ್ಲಿ ವಾಸಿಸುತ್ತಿದ್ದ ಜನರು ಗಾಳಿಗಳು ಹಾಗೂ ಬೀಸುವ ಮರಳಿನಿಂದ ಕೂಡಿದ, ಅತಿಕ್ರಮಿಸುವ ಮರುಭೂಮಿಯೊಂದಿಗೆ ನಿರಂತರವಾದ ಕಾದಾಟವನ್ನು ನಡಿಸುತ್ತಿದ್ದರು. ಒಂದು ನಿರ್ಜನ ಪ್ರದೇಶವು ಶೀಘ್ರದಲ್ಲೇ ಒಂದು ಪಿಶಾಚಗ್ರಸ್ತ ಸ್ಥಳವಾಗಿ ಮಾರ್ಪಡುತ್ತಿತ್ತು."[8] ದೇವರ ವಾಕ್ಯವನ್ನು ಚೆನ್ನಾಗಿ ಅರಿತಿರುವವರಿಗೆ, ಪದಗಳ ಬಳಕೆಯು ಹೆಚ್ಚಿನ ಮಹತ್ವವನ್ನು ನೀಡಿರಬಹುದಿತ್ತು: ಪ್ರಾಚೀನ ಬಾಬೆಲಿನ ಬೀಳುವಿಕೆ ಕುರಿತಾದ ಪ್ರವಾದನೆಯಲ್ಲಿ ಇದೇ ರೀತಿಯ ಪದಗಳು ಬಳಸಲ್ಪಟ್ಟಿದ್ದವು (ನೋಡಿರಿ ಯೆಶಾಯ 13:19-22), ಮತ್ತು ಆ ಪ್ರವಾದನೆಯ ನಾಟಕೀಯವಾಗಿ ನೆರವೇರಿತ್ತು.

> ಐತಿಹಾಸಿಕ ಬಾಬೆಲಿನ ಪತನವು ಪ್ರಾಚೀನತೆಯ ಪ್ರಮುಖ ವಿನಾಶತೆಗಳಲ್ಲೊಂದಾಗಿತ್ತು ... ಪಾರಸಿಯರಿಂದ, ಮಕೆದೋನ್ಯರಿಂದ, ಮತ್ತು ಪಾರ್ಥಿಯನ್ನರಿಂದ ಸತತವಾಗಿ ಗೆದ್ದುಕೊಳ್ಳಲ್ಪಡುವದರ ಮೂಲಕ ಅದು ನಿಧಾನವಾಗಿ ಕ್ಷೀಣಿಸುತ್ತಾ ಸಾಗಿತ್ತು, ಕ್ರಿ.ಶಕದ ಹೊತ್ತಿಗೆ ಅದು ಒಂದು ಗ್ರಾಮಕ್ಕಿಂತಲೂ ಕಡೇ ಆಗಿತ್ತು. ಒಂದು ಫಲವತ್ತಾದ ಭೂಮಿಯಲ್ಲಿ ಅದು ಕಾರ್ಯತಾಂತ್ರಿಕ ಸ್ಥಾನದಲ್ಲಿದ್ದಾಗಿಯೂ ... ಅದು

ಶೀಘ್ರವೇ ತನ್ನ ಪ್ರಾಬಲ್ಯತೆಯನ್ನು ಕಳೆದುಕೊಂಡಿತ್ತು ಮತ್ತು ನಿರ್ಜನ ಪಳೆಯುಳಿಕೆಗಳ ರಾಶಿಯಾಗಿ ಮಾರ್ಪಟ್ಟಿತ್ತು.[9]

2ನೇ ವಚನವು ಪ್ರಾಚೀನ ಬಾಬೆಲ ಹೇಗೆ ನಿಶ್ಚಯವಾಗಿ ಬಿದ್ದು ಹೋಯಿತೋ, ಅಷ್ಟೇ ನಿಶ್ಚಯತೆಯೊಡನೆ ಪ್ರಕಟನೆ ಪುಸ್ತಕದಲ್ಲಿರುವ ಬಾಬೆಲ್ - ರೋಮ್ - ಶೀಘ್ರದಲ್ಲೇ ಬೀಳಲಿತ್ತದೆಂಬುದನ್ನು ಘೋಷಿಸಿತು.

**ವಚನ 3.** ರೋಮ್ ಏಕೆ ನಾಶನಕ್ಕೆ ನೇಮಿಸಲ್ಪಟ್ಟಿತ್ತೆಂಬ ಕಾರಣವು ವಾಚಕನಿಗೆ ತಿಳಿಸಲ್ಪಡುತ್ತದೆ. ದೇವದೂತನು ಈ ಮಾತುಗಳಿಂದ ಆರಂಭಿಸುತ್ತಾನೆ: **ಎಲ್ಲಾ ಜನಾಂಗಗಳು ಅವಳ ಅತಿಜಾರತ್ವವೆಂಬ ದ್ರಾಕ್ಷಾರಸವನ್ನು ಕುಡಿದರು; ಅವಳೊಂದಿಗೆ ಭೂರಾಜರು ಜಾರತ್ವ ಮಾಡಿದರು; ಅವಳು ಸುಖಭೋಗಿನಿಯಾಗಿದ್ದದರಿಂದ ಭೂಲೋಕದ ವರ್ತಕರು ಐಶ್ವರ್ಯವಂತರಾದರು** (ನೋಡಿರಿ 14:8; 17:2). ಈ ವಚನವು ರೋಮ್ ನಗರಿಯು, ವಿಶೇಷವಾಗಿ ಚಕ್ರವರ್ತಿಯ ಆರಾಧನೆಯ ವಿಷಯದಲ್ಲಿ ಹೊಂದಿದ್ದ ಭಕ್ತಿಹೀನ ಪ್ರಭಾವವನ್ನು ಸೂಚಿಸುತ್ತದೆ. **ಭಾವೋದ್ರೇಕ** (ಅತಿಜಾರತ್ವ) ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದ θυμός (*thumos*) ಎಂಬುದರ ಅರ್ಥವು "ಕೋಪ" (KJV) ಎಂದು ಸಹ ಆಗಿರಬಲ್ಲದು.

ದೇವದೂತನ ಬಳಿಕ ಒಂದು ಹೊಸ ಯೋಚನೆಯನ್ನು ಕೂಡಿಸಿ ಹೇಳುತ್ತಾನೆ: **ಅವಳು ಸುಖಭೋಗಿನಿಯಾಗಿದ್ದದರಿಂದ ಭೂಲೋಕದ ವರ್ತಕರು ಐಶ್ವರ್ಯವಂತರಾದರು. ಅವಳು ಸುಖಭೋಗಿನಿಯಾದದ್ದರಿಂದ** (τῆς δυνάμεως τοῦ στρήνους αὐτῆς, *tēs dunameōs tou strēnous autēs*) ಎಂಬ ಪದಗುಚ್ಛವು "ಆಕೆಯ ಸುಖಭೋಗದ *ಶಕ್ತಿಯಿಂದ*" ಎಂದು ಸಹ ಅನುವಾದಿಸಲ್ಪಡಬಹುದಾಗಿದೆ. **ವರ್ತಕರು** ಎಂದು ಪ್ರಸ್ತಾಪಿಸಲ್ಪಟ್ಟಿದ್ದು ಇದೇ ಮೊದಲನೆಯದಾಗಿದೆ (ನೋಡಿರಿ ವಚನಗಳು 15, 23) ಮತ್ತು ಪುರುಷರು ಏಕೆ ರೋಮಿನಿಂದ ಮೋಹಕ್ಕೊಳಪಡುವದಕ್ಕೆ ಸಾಲುಗಟ್ಟಿ ನಿಂತಿದ್ದರೆಂಬುದನ್ನು ತಿಳಿಸುವ ಪ್ರೇರಿತ ವಿವರಣೆಯಾಗಿರುತ್ತದೆ. "ರೋಮ್ ನಗರಿಯು ಲೋಕಕ್ಕೆ ಸಮಾಧಾನ ಹಾಗೂ ಸುರಕ್ಷತೆಯನ್ನು [ಒದಗಿಸಿತ್ತು], ಹೀಗೆ ವ್ಯಾಪಕವಾದ ಸುಖಭೋಗದ ವ್ಯಾಪರವನ್ನು ಸಾಧ್ಯವಾಗಿಸಿತ್ತು ಮತ್ತು ವ್ಯಾಪಕವಾದ ಸಮೃದ್ಧಿಯನ್ನು ತಂದು ಕೊಟ್ಟಿತ್ತು."[10] ವರ್ತಕರು ರೋಮಿನೊಂದಿಗೆ ಹೊಂದಿದ್ದ ಭಕ್ತಿಹೀನ ನೆಂಟಸ್ತಿಕೆಯು ಐಶ್ವರ್ಯವಂತರ ಹಾಗೂ ಪ್ರಬಲರ ಬ್ಯಾಂಕ್ ಖಾತೆಗಳನ್ನು ತುಂಬಿಸಿದ್ದವು. ಪೌಲನು ಹೇಳಿದ ಹಾಗೆ, "ಹಣದಾಸೆಯು ಸಕಲ ವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ" (1 ತಿಮೊಥೆ 6:10).

## ಆಕೆಯ ಪಾಪಗಳು ರಾಶಿಯಾಗಿ ಶೇಖರಣೆಗೊಂಡಿರುತ್ತವೆ (18:4-8)

**4ಪರಲೋಕದಿಂದ ಬಂದ ಮತ್ತೊಂದು ಶಬ್ದವನ್ನು ಕೇಳಿದೆನು; ಅದು ಹೇಳಿದ್ದೇನಂದರೆ - ನನ್ನ ಪ್ರಜೆಗಳೇ, ಅವಳನ್ನು ಬಿಟ್ಟುಬನ್ನಿರಿ; ನೀವು ಅವಳ ಪಾಪಗಳಲ್ಲಿ ಪಾಲುಗಾರರಾಗಬಾರದು; ಅವಳಿಗಾಗುವ ಉಪದ್ರವಗಳಿಗೆ ಗುರಿಯಾಗಬಾರದು. 5ಅವಳ ಪಾಪಗಳು ಒಂದರ ಮೇಲೊಂದು ಸೇರಿ ಆಕಾಶದ ಪರ್ಯಂತರಕ್ಕೂ ಬೆಳೆದವೆ. ದೇವರು ಅವಳ ಅನ್ಯಾಯಗಳನ್ನು ಜ್ಞಾಪಿಸಿಕೊಂಡನು. 6ಇತರರಿಗೆ ಅವಳು ಮಾಡಿದ ಪ್ರಕಾರ ಅವಳಿಗೆ ಮಾಡಿರಿ; ಅವಳ ಕೃತ್ಯಗಳಿಗೆ ಸರಿಯಾಗಿ ಅವಳಿಗೆ ಎರಡರಷ್ಟು ಕೊಡಿರಿ; ಅವಳು ಕಲಸಿದ ಪಾತ್ರೆಯಲ್ಲಿ ಅವಳಿಗೆ ಎರಡರಷ್ಟು ಕಲಸಿಕೊಡಿರಿ. 7ಅವಳು ಎಷ್ಟು ಮಟ್ಟಿಗೆ ತನ್ನನ್ನು ಘನಪಡಿಸಿಕೊಂಡು ಭೋಗಿನಿಯಾಗಿದ್ದಾಳೋ ಅಷ್ಟು ಮಟ್ಟಿಗೆ ಅವಳಿಗೆ ಯಾತನೆಯನ್ನೂ ದುಃಖವನ್ನೂ ಕೊಡಿರಿ.**

**ಅವಳು ತನ್ನ ಹೃದಯದಲ್ಲಿ - ನಾನು ರಾಣಿಯಾಗಿ ಕೂತುಕೊಂಡಿದ್ದೇನೆ, ನಾನು ವಿಧವೆಯಲ್ಲ, [8]ದುಃಖವನ್ನು ಕಾಣುವದೇ ಇಲ್ಲ ಎಂದು ಹೇಳಿಕೊಳ್ಳುವದರಿಂದ ಅವಳಿಗೆ ಕೊಲೆ ದುಃಖ ಕ್ಷಾಮ ಎಂಬೀ ಉಪದ್ರವಗಳು ಒಂದೇ ದಿನದಲ್ಲಿ ಸಂಭವಿಸುವವು; ಅವಳು ಬೆಂಕಿಯಿಂದ ಸುಟ್ಟುಹೋಗುವಳು; ಅವಳಿಗೆ ದಂಡನೆಯನ್ನು ವಿಧಿಸಿದ ದೇವರಾಗಿರುವ ಕರ್ತನು ಬಲಿಷ್ಠನಾಗಿದ್ದಾನೆ.**

**ವಚನ 4.** ಯೋಹಾನನು **ಪರಲೋಕದಿಂದ ಮತ್ತೊಂದು ಶಬ್ದವನ್ನು ಕೇಳಿದನು.** ಶಬ್ದವು ದೇವರ ಪರವಾಗಿ ಮಾತಾಡಿತು, ಅದು "ನನ್ನ ಪ್ರಜೆಗಳೇ" ಎಂಬ ಪದಗುಚ್ಛದಲ್ಲಿ ಸ್ಪಷ್ಟವಾಗಿರುತ್ತದೆ. ಆ ಶಬ್ದವು ಸ್ವತಃ ದೇವರದ್ದೇ ಆಗಿರಬಹುದಾಗಿದೆ. 5ನೇ ವಚನದಲ್ಲಿ ಪ್ರಥಮ ಪುರುಷ ("ದೇವರು") ಬಳಸಲ್ಪಟ್ಟಿದೆ, ಆದರೆ ಹಳೆಯ ಒಡಂಬಡಿಕೆಯಲ್ಲಿ ದೇವರು ಕೆಲವು ಸಾರಿ ತನ್ನ ಕುರಿತು ಪ್ರಥಮ ಪುರುಷ ರೂಪದಲ್ಲಿ ಮಾತಾಡಿದನು (ನೋಡಿರಿ ವಿಮೋಚನಕಾಂಡ 19:21-24). ಮಾತಾಡಿದವನು ದೇವರ ಪರವಾಗಿ ಒಬ್ಬ ದೇವದೂತನು ಆಗಿರುವ ಸಾಧ್ಯತೆಯು ಅಧಿಕವಾಗಿರುತ್ತದೆ. ಕೆಲವರು ಮಾತಾಡಿದವರನು ಕ್ರಿಸ್ತನೇ ಆಗಿದ್ದನೆಂಬುದಾಗಿ ಊಹೆಗಳನ್ನು ಮಾಡಿಕೊಳ್ಳುತ್ತಾರೆ.

ಆ ಶಬ್ದವು ಎರಡು ಸಂದೇಶಗಳನ್ನು ಹೊಂದಿತ್ತು. ಮೊದಲನೆಯದ್ದು ದೇವರ ಪ್ರಜೆಗಳಿಗಾಗಿ ಆಗಿತ್ತು: **ಅವಳನ್ನು ಬಿಟ್ಟು ಬನ್ನಿರಿ.** (ಈ ಮನವಿಯನ್ನು ಯೆರೆಮೀಯ 51:6, 45ರಲ್ಲಿನ ಮನವಿಯೊಂದಿಗೆ ಹೋಲಿಸಿ ನೋಡಿರಿ.) "ದೇವರ ವಿಮೋಚನಾತ್ಮಕ ಇತಿಹಾಸದುದ್ದಕ್ಕೂ ಹೊರಗೆ ಬಂದು ಪ್ರತ್ಯೇಕವಾಗಿರಿ ಎಂಬ ಕರೆಯು ಕಂಡು ಬರುತ್ತದೆ ಯೆಹೂದ್ಯ ಜನಾಂಗದ ಮೂಲವು ದೇವರು ಅಬ್ರಹಾಮನಿಗೆ ನೀಡಿದ ಆಜ್ಞೆಯಲ್ಲಿ ಇತ್ತು, 'ನೀನು ಸ್ವದೇಶವನ್ನೂ ಬಂಧು ಬಳಗವನ್ನೂ ತಂದೆಯ ಮನೆಯನ್ನೂ ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟುಹೋಗು' (ಆದಿಕಾಂಡ 12:1)."[11] ಹೀಗೆ, ಆದೇಶವು ಅದೇ ರೀತಿಯದ್ದಾಗಿತ್ತು; ತನ್ನ ಜನರು ಪ್ರತ್ಯೇಕವಾಗಿಯೂ ಭಿನ್ನವಾಗಿಯೂ ಇರಬೇಕೆಂದು ಕರ್ತನು ಯಾವಾಗಲೂ ಬಯಸಿದ್ದಾನೆ (ನೋಡಿರಿ 2 ಕೊರಿಂಥ 6:17). 4ನೇ ವಚನದ ಮೇಲೆ ವ್ಯಾಖ್ಯಾನ ಮಾಡುತ್ತಾ, Leon Morrisನು ಹೀಗೆ ಬರೆಯುತ್ತಾನೆ, "ದೇವರ ಜನರ ಕರೆಯು ಸರ್ವೋಚ್ಚವಾಗಿ ಪ್ರಾಮುಖ್ಯವಾಗಿರುತ್ತದೆ ... ಈ ಮನವಿಯು ಒಂದು ಅರ್ಥದಲ್ಲಿ ಇಡೀ ಅಧ್ಯಾಯಕ್ಕೆ ಮುಖ್ಯವಾದದ್ದಾಗಿದೆ."[12]

"ಬಿಟ್ಟು ಬನ್ನಿರಿ" ಎಂದು ನೀಡಲಾಗಿರುವ ಕರೆಯಲ್ಲಿ ಏನು ಅಡಕವಾಗಿರುತ್ತದೆ? 4ನೇ ವಚನದಲ್ಲಿ ಮನವಿಯೊಳಗೆ ಕ್ರೈಸ್ತರಯ ಶಾರೀರಿಕವಾಗಿ ರೋಮ್ ನಗರವನ್ನು ಬಿಟ್ಟು ಹೋಗಬೇಕೆಂಬ ವಿಚಾರವು ಇರುವ ಸಾಧ್ಯತೆಯಿದೆ. ಅವರು ಅದರ ಸೆಳೆತಕ್ಕೊಳಗಾಗುವರಾಗಿ ಕಂಡ ಬಂದಲ್ಲಿ - ಅಥವಾ ನಗರವು ಇನ್ನೇನು ನಾಶಗೊಳ್ಳಲಿದೆ ಎಂಬುದನ್ನು ಕಾಣುವಾಗ - ಅದು ಅಲ್ಲಿಂದ ಹೊರಡುವದಕ್ಕೆ ಸಮಯವಾಗುವದು.

ಹೇಗೂ, ವಚನದ ಪ್ರಾಥಮಿಕವಾದ ಒತ್ತು ಕ್ರೈಸ್ತರು ಭಾವನಾತ್ಮಕವಾಗಿ, ಮಾನಸಿಕವಾಗಿ, ಮತ್ತು ಆತ್ಮೀಕವಾಗಿ "ಬಾಬೆಲನ್ನು ಬಿಟ್ಟು ಹೋಗಬೇಕು" ಎಂದಾಗಿತ್ತು. William Hendriksenನು ಹೇಳಿದ್ದೇನೆಂದರೆ ಬಾಬೆಲಿನಿಂದ ಹೊರಡುವದೆಂದರೆ "ಆಕೆಯ ಪಾಪಗಳೊಂದಿಗೆ ಅನ್ಯೋನ್ಯತೆಯನ್ನಿಟ್ಟುಕೊಳ್ಳದಿರುವದು, ಆಕೆಯ ಪ್ರಲೋಭನೆಗಳಿಗೆ ಹಾಗೂ ಮಾಟಗಳ ಬಲೆಗೆ ಒಳಗಾಗದಿರುವದು"[13] ಎಂದಾಗಿದೆ. William Barclayನು ಅಭಿಪ್ರಾಯ ಪಟ್ಟದ್ದೇನೆಂದರೆ, "ಬಾಬೆಲನ್ನು ಬಿಟ್ಟು ಬನ್ನಿರಿ" ಎಂಬ ಮಾತುಗಳು "ಲೋಕದಿಂದ ಕ್ರೈಸ್ತರಿಗಿರುವ ಅತ್ಯಾವಶ್ಯಕವಾದ ಬೇರ್ಪಡುವಿಕೆಯನ್ನು"[14] ಬಣ್ಣಿಸುತ್ತದೆ.

ಯೋಹಾನ ವಾಚಕರು ಬಾಬೆಲಿನ್ನು "ಬಿಟ್ಟು ಬರುವದು" ಏಕೆ ಅಷ್ಟೊಂದು ಪ್ರಾಮುಖ್ಯವಾಗಿತ್ತು? ವಾಕ್ಯಭಾಗದಲ್ಲಿ ಎರಡು ಕಾರಣಗಳು ಕೊಡಲ್ಪಟ್ಟಿವೆ: ಮೊದಲನೆಯದಾಗಿ, ಶಬ್ದವು ಅವರಿಗೆ **ನೀವು ಅವಳ ಪಾಪಗಳಲ್ಲಿ ಪಾಲುಗಾರರಾಗಬಾರದು** ಎಂದು ಹೇಳಿತು. ನಮಗೆ ಅರಿಕೆ ಮಾಡುವದಕ್ಕೆ ಇಷ್ಟವಿದ್ದರೂ ಸರಿಯೇ ಅಥವಾ ಇಲ್ಲದಿದ್ದರೂ ಸರಿಯೇ, ಪಾಪವು ಒಂದು ವಿಧವಾದ ಆಕರ್ಷಣೆಯನ್ನು ಹೊಂದಿದೆ. ಮಹಾ ಜಾರಸ್ತ್ರೀಯ ಕುರಿತು ಮಾತಾಡುವವನಾಗಿ, Michael Wilcockನು ನಾವು ಆಕೆಗಿರುವ ಮನವೋಲಿಸುವ ಶಕ್ತಿಯನ್ನು ಕಡಿಮೆಯೆಂದು ಎಣಿಸಕೂಡದು ಎಂದು ಹೇಳುತ್ತಾನೆ:

> ನಾವು 17:4ರ ಸೊಬಗಿನ ಮೈಮಾಟಕ್ಕೆ ಜಿಗುಪ್ಸೆಯಿಂದ ಪ್ರತಿಕ್ರಿಯಿಸಬಹುದು - "ಎಷ್ಟು ಕೀಳುತನ, ಎಷ್ಟು ಥಳಕುಪಳಕು!" - ಯಾಕೆಂದರೆ ನಮ್ಮಿಂದ ನಿರೀಕ್ಷಿಸಲ್ಪಡುವದು ಅದನ್ನೇ ಎಂಬುದಾಗಿ ನಾವು ಯೋಚಿಸಿಕೊಂಡಿರುತ್ತೇವೆ. ಆದರೆ ಕಾರ್ಯರೂಪದಲ್ಲಿ, ದೈನಂದಿನ ಜೀವಿತದಲ್ಲಿ ನೋಡುವದಾದರೆ, ರತ್ನಗಳು, ನೆರಳೆ ಹಾಗೂ ಬಂಗಾರದ ಪಾತ್ರೆಗಳು ಒಂದು ಭಯಭರಿತ ವ್ಯಾಮೋಹವನ್ನು ಹೊಂದಿರುತ್ತವೆ.[15]

Mounceನು ಹೀಗೆ ಬರೆದನು, "ಹಿಂಸಿಸಲ್ಪಟ್ಟ ಸಭೆಯು ಯಾವಾಗಲೂ ಪ್ರಾಪಂಚಿಕತೆಯೊಂದಿಗೆ ರಾಜಿಮಾಡಿಕೊಳ್ಳುವ ಮೂಲಕ ಹಗೆತನವುಳ್ಳ ವಾತಾವರಣದಲ್ಲಿ ಜೀವಿಸುವ ಉದ್ವಿಗ್ನತೆಯನ್ನು ತಗ್ಗಿಸಬಹುದಾಗಿದೆ ಎಂಬ ಶೋಧನೆಯನ್ನು ಎದುರಿಸುತ್ತಾರೆ."[16] Morrisನು ಗಮನಕ್ಕೆ ತರುವದೇನೆಂದರೆ, "ಅಷ್ಟೊಂದು ಹಿಂಸೆ ಹಾಗೂ ಸೂರೆಗೊಳಗಾಗಿದ್ದ ದೇವರ ಜನರು ನಗರ ಶರತ್ತುಗಳಿಗನುಗುಣವಾಗಿ ಜೀವಿಸುವ ಶೋಧನೆಯನ್ನು ಘೋರವಾಗಿ ಎದುರಿಸಿರಬಹುದಾಗಿದೆ. ಅವರು ಹಾಗೆ ಮಾಡುವದಾಗಿದ್ದರೆ ಅವರಿಗಾಗುತ್ತಿದ್ದ ಹಿಂಸೆಯು ನಿಂತು ಹೋಗುವದು ಮಾತ್ರವೇ ಆಗಿರಲಿಲ್ಲ, ಆದರೆ ನಗರವು ಅವರನ್ನು ಐಶ್ವರ್ಯವಂತರನ್ನಾಗಿಯೂ ಸುಖಿಗಳನ್ನಾಗಿಯೂ ಮಾಡುತ್ತಿತ್ತು."[17]

ಯೋಹಾನನ ದಿನದಲ್ಲಿ ಕೆಲವು ಕ್ರೈಸ್ತರು "ಬಾಬೆಲಿನ ದುರ್ಗುಣಗಳೊಂದಿಗೆ ರಾಜಿ ಮಾಡಿಕೊಳ್ಳಲು ಸಿದ್ಧರಾಗಿರುವ"[18] ಸಾಧ್ಯತೆಯು ಇತ್ತು. ಹಾಗಿರುವದೇ ಆಗಿದ್ದಲ್ಲಿ, ಅವರು ಅದರಿಂದಾಗುವ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವದು ಸಾರಭೂತವಾಗಿ ಪ್ರಾಮುಖ್ಯವಾಗಿರುತ್ತದೆ. ಅವುಗಳಲ್ಲೊಂದು ಎಂದರೆ ಅವರು ಬಾಬೆಲಿನ ಪಾಪಗಳಲ್ಲಿ ಅನ್ಯೋನ್ಯತೆಯನ್ನು ಹೊಂದಿರುತ್ತಿದ್ದರೆ, ದೇವರ ಪ್ರಜೆಗಳು ಎಂದು ಕರೆಯಲ್ಪಡುವ ಹಕ್ಕನ್ನು ಅವರು ಕಳೆದುಕೊಳ್ಳುತ್ತಿದ್ದರು. ಪೌಲನು ಹೀಗೆ ಹೇಳಿದನು, "ಕತ್ತಲೆಗೆ ಸಂಬಂಧವಾದ ಕೃತ್ಯಗಳಿಂದ ಯಾವ ಪ್ರಯೋಜನವೂ ಬರಲಾರದು; ಅವುಗಳಲ್ಲಿ ಪಾಲುಗಾರರಾಗಿರದೆ ಅವುಗಳನ್ನು ಬೈಲಿಗೆ ತಂದು ಖಂಡಿಸಿರಿ" (ಎಫೆಸ 5:11), ಮತ್ತು ಪುನಃ, "ಮತ್ತೊಬ್ಬರ ಪಾಪಗಳಲ್ಲಿ ಪಾಲುಗಾರನಾಗಬೇಡ" (1 ತಿಮೊಥೆ 5:22; NIV).

ಬಾಬೆಲಿನ ಪಾಪಗಳಲ್ಲಿ ಪಾಲುಗಾರರಾಗುವದರ ಇನ್ನೊಂದು ಪರಿಣಾಮವು ಏನಾಗಿತ್ತೆಂದರೆ ಅವರು ಆಕೆಯ ನಾಶನದಲ್ಲಿ ಪಾಲುಗಾರರಾಗುವದು ಎಂಬುದೆ. "ಶಬ್ದವು ಬಂದು" ಹೇಳಿದ ಎರಡನೆಯ ಕಾರಣವು **ಅವಳಿಗಾಗುವ ಉಪದ್ರವಗಳಿಗೆ ಗುರಿಯಾಗಬಾರದು.** 8ನೇ ವಚನವು ಈ ಉಪದ್ರವಗಳನ್ನು ಸಂಕ್ಷಿಪ್ತವಾಗಿ ವಿವರಿಸುತ್ತದೆ: "ಅವಳಿಗೆ ಕೊಲೆ ದುಃಖ ಕ್ಷಾಮ ಎಂಬೀ ಉಪದ್ರವಗಳು ಒಂದೇ ದಿನದಲ್ಲಿ ಸಂಭವಿಸುವವು; ಅವಳು ಬೆಂಕಿಯಿಂದ ಸುಟ್ಟುಹೋಗುವಳು." ರೋಮಿನ ಅಂತ್ಯಾವಸ್ಥೆಯ ಕುರಿತು 18ನೇ ಅಧ್ಯಾಯವು ಯಾವ ಸಂದೇಹವನ್ನೂ ಉಳಿಸುವದಿಲ್ಲ. ಆಕೆಯು ನಾಶಗೊಳಿಸಲ್ಪಡುವಳು. ಅದೇ ಗತಿಯು

ಸಂಭವಿಸುವದರಿಂದ ತಪ್ಪಿಸಿಕೊಳ್ಳಬೇಕಾದರೆ, ಕ್ರೈಸ್ತರು ಆಕೆಯ ಮೋಹಕದ ಮೈಮಾಟವನ್ನು ವಿರೋಧಿಸಬೇಕಾಗಿತ್ತು.

"ಬಿಟ್ಟು ಬನ್ನಿರಿ" ಎಂಬ ಮನವಿಯು ಪ್ರಾಥಮಿಕವಾಗಿ ಕ್ರೈಸ್ತರನ್ನು ಸೂಚಿಸುತ್ತದೆ ಎಂಬುದನ್ನು ಬಹಳಷ್ಟು ಮಂದಿ ಒಪ್ಪಿಕೊಳ್ಳುತ್ತಾರೆ. ಕ್ರೈಸ್ತರಿಗೆ ಬರೆಯುವವನಾಗಿ, ಪೇತ್ರನು ಹೀಗೆ ಹೇಳಿದನು, "ನೀವಾದರೋ ... ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ. ಮೊದಲು ನೀವು ಪ್ರಜೆಯಾಗಿರಲಿಲ್ಲ, ಈಗ ದೇವರ ಪ್ರಜೆಯಾಗಿದ್ದೀರಿ" (1 ಪೇತ್ರ 2:9, 10). ರೋಮಿನಲ್ಲಿ ವಾಸಿಸುತ್ತಿದ್ದ ಕ್ರೈಸ್ತರಿಗೆ ಈ ಮನವಿಯು ವಿಶೇಷವಾದ ಮಹತ್ವವನ್ನು ಹೊಂದಿರಬಹುದಾಗಿದೆ. ಪೌಲನು ರೋಮಿನಲ್ಲಿದ್ದ (ರೋಮಾಪುರ) ಸಭೆಗೆ ಬರೆದ ವೇಳೆ, ಅನೇಕ ಕ್ರೈಸ್ತರು ಅಲ್ಲಿ ವಾಸಿಸುತ್ತಿದ್ದರು (ರೋಮಾ 16), ಮತ್ತು ಅವರು ಅಲ್ಲಿ "ಅನೇಕ ವರ್ಷಗಳಿಂದ" ನೆಲೆಸಿದ್ದರು (ರೋಮಾ 15:23). ಹೇಗೂ, ರೋಮಿನ ಪ್ರಭಾವವು ಲೋಕದೊಳಗೆ ನುಸುಳಿತ್ತಾದ್ದರಿಂದ, ಅವಳನ್ನು "ಬಿಟ್ಟು ಬನ್ನಿರಿ" ಎಂಬ ಆದೇಶವು ಆ ನಗರಲ್ಲಿದ್ದ ಕ್ರೈಸ್ತರಿಗೆ ಮಾತ್ರವೇ ಅಲ್ಲ, ಆದರೆ ಎಲ್ಲೆಡೆಯೂ ಇದ್ದ ಕ್ರೈಸ್ತರಿಗೆ ಸಹ ಕೊಡಲ್ಪಟ್ಟದ್ದಾಗಿತ್ತು.

ಕೆಲವು ವ್ಯಾಖ್ಯಾನಕಾರರು ಸಹ ಈ "ನನ್ನ ಪ್ರಜೆಗಳೇ" ಎಂಬ ಪದಗುಚ್ಛವನ್ನು ಸುವಾರ್ತೆಗೆ ತೆರೆದ ಮನಸ್ಸಿದ್ದಂಥ ರೋಮಿನಲ್ಲಿರುವ ಜನರು ಎಂಬದಾಗಿ ವ್ಯಾಖ್ಯಾನಿಸುತ್ತಾರೆ - ದೇವರು ಕೊರಿಂಥ ಪಟ್ಟಣದ ಕುರಿತು ಪೌಲನಿಗೆ ಹೇಳಿದ ರೀತಿಯಲ್ಲಿ, "ಈ ಪಟ್ಟಣದಲ್ಲಿ ನನಗೆ ಬಹಳ ಮಂದಿ ಇದ್ದಾರೆ" (ಅಪೊಸ್ತಲರ ಕೃತ್ಯಗಳು 18:10). ಮನುಷ್ಯರ ಹೃದಯಗಳನ್ನು ಬಲ್ಲವನಾದ ದೇವರು, ಕೊರಿಂಥದಲ್ಲಿ ಪ್ರಾಮಾಣಿಕವಾದ ಹಾಗೂ ಉತ್ತಮ ಹೃದಯಗಳುಳ್ಳವರು ಇದ್ದಾರೆಂಬುದನ್ನು ಬಲ್ಲವನಾಗಿದ್ದನು (ಲೂಕ 8:15). ಆದದರಿಂದ, ಪೌಲನು ಅಲ್ಲಿ ಬೋಧಿಸುವದನ್ನು ಮುಂದುವರೆಸುವದಾದರೆ, ಅನೇಕರು ರಕ್ಷಣೆ ಹೊಂದುವರೆಂದು ಬಲ್ಲವನಾಗಿದ್ದಾನೆ. ಕೆಲವು ಲೇಖಕರು ಹೋಶೇಯ 2:23ರನ್ನು ಸಹ ಉಲ್ಲೇಖಿಸುತ್ತಾರೆ, ಅಲ್ಲಿ ದೇವರು "ನನ್ನ ಜನವಲ್ಲದ್ದಕ್ಕೆ," ಅನ್ಯಜನರಿಗೆ ಒಂದು ದಿನ "ನನ್ನ ಜನ" ಎನ್ನುವೆನು ಎಂದು ಹೇಳುತ್ತಾನೆ. ಈ ವಾಕ್ಯವು ರೋಮಾ 9:25, 26 ಮತ್ತು 1 ಪೇತ್ರ 2:9, 10ರಲ್ಲಿ ಉಲ್ಲೇಖಿಸಲ್ಪಟ್ಟಿದೆ. ಮಹಾನ್ ಹೃದಯ-ಶೋಧಿಸುವವನಿಗೆ (1 ಪೂರ್ವಕಾಲವೃತ್ತಾಂತ 28:9) ರೋಮಿನಲ್ಲಿ ಸಂಧಿಸಲ್ಪಡಬಲ್ಲವರು ಇದ್ದಾರೆಂಬುದು ಗೊತ್ತಿತ್ತು ಮತ್ತು ಆತನ ಮಾತುಗಳು ಅವರಿಗೆ ಬಾಬೆಲನ್ನು ತ್ಯಜಿಸಿ ಬಿಟ್ಟು ಆತನನ್ನು ಹಿಂಬಾಲಿಸುವದಕ್ಕೆ ನೀಡಿದ ಪ್ರೋತ್ಸಾಹದ ಮಾತುಗಳಾಗಿದ್ದವು.

ಅಪೊಸ್ತಲರ ಕೃತ್ಯಗಳು 18:10ರಲ್ಲಿ ದೇವರು ನನ್ನ "ಜನರು" ಎಂದು ಕರೆದದ್ದರ ಅರ್ಥವು ನಂಬಿಕೆ ಮತ್ತು ವಿಧೇಯತೆಗಳಿಲ್ಲದೆ ರಕ್ಷಣೆ ಹೊಂದುವವರಾಗಿದ್ದ ಜನರು ಎಂದಲ್ಲ ಎಂಬುದನ್ನು ನಾವು ಗಮನಕ್ಕೆ ತೆಗೆದುಕೊಳ್ಳತಕ್ಕದ್ದು. ಅವರು ರಕ್ಷಣೆ ಹೊಂದುವದಕ್ಕಾಗಿ ಆಗಲೂ ಆಲಿಸುವ, ನಂಬುವ ಹಾಗೂ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಅಗತ್ಯವಿತ್ತು (ಅಪೊಸ್ತಲರ ಕೃತ್ಯಗಳು 18:8). ಅದೇ ರೀತಿಯಲ್ಲಿಯೇ, ಪ್ರಕಟನೆ ಪುಸ್ತಕದಲ್ಲಿ "ನನ್ನ ಪ್ರಜೆಗಳೇ" ಎಂಬುದು ಸಂಭಾವ್ಯ ಕ್ರೈಸ್ತರನ್ನೊಳಗೊಂಡಿದ್ದಲ್ಲಿ, ಅವರು ರಕ್ಷಣೆ ಹೊಂದುವದಕ್ಕೆ ಮುಂಚೆ ಈಗಲೂ ಕರ್ತನಿಗೆ ಪ್ರತಿಕ್ರಿಯೆಯನ್ನು ತೋರಿಸಬೇಕಾಗಿತ್ತು.

ತನ್ನ ಜನರು *ಯಾವಾಗ* "ಬಿಟ್ಟು ಬರಬೇಕು" ಎಂದು ದೇವರು ಬಯಸುತ್ತಾನೆ? ಸ್ಪಷ್ಟವಾಗಿರುವ ಉತ್ತರವು "ತಕ್ಷಣವೇ!" ಎಂದಾಗಿರುತ್ತದೆ. ಅಧ್ಯಾಯದೊಳಗೆ ಒಂದು ತಕ್ಷಣತೆಯ ಅರ್ಥವು ಒಳವ್ಯಾಪಿಸಿಕೊಂಡಿರುತ್ತದೆ. Morrisನು ಅಭಿಪ್ರಾಯ ಪಟ್ಟದ್ದೇನೆಂದರೆ ಕನಿಷ್ಠ ಪ್ರಥಮ ಶತಮಾನದ ವಾಚಕರಲ್ಲಿ ಕೆಲವರು "ಪರಿಸ್ಥಿತಿಯ ತುರ್ತು ಸ್ಥಿತಿಯನ್ನು

ಗ್ರಹಿಸಿಕೊಳ್ಳಲಿಲ್ಲ"[19] ಎಂಬದೆ - ಮತ್ತು ಬಹುಶಃ ಅದು ಸರಿಯೇ ಆಗಿರಬಹುದಾಗಿದೆ. ಉಪದ್ರವಗಳು "ಒಂದೇ ದಿನದಲ್ಲಿ" (ವ. 8), "ಒಂದೇ ಗಳಿಗೆಯಲ್ಲಿ" (ವ. 10) ಬರಲಿದ್ದವು. ವಿನಾಶವು ಅಪ್ಪಳಿಸುವಾಗ ಸಿದ್ಧತೆ ಮಾಡಿಕೊಳ್ಳುವದಕ್ಕೆ ಯಾವ ಕಾಲಾವಕಾಶವು ಇರಲಿಕ್ಕೆ ಹೋಗುವದಿಲ್ಲ. ಸಿದ್ಧತೆಯನ್ನು ಮಾಡಿಕೊಳ್ಳಬೇಕಾದ ಸಮಯವು "ಈಗಲೇ" ಆಗಿತ್ತು.

**ವಚನ 5.** ರೋಮಿನ ಸಕಲ ಕೆಟ್ಟ ಕೃತ್ಯಗಳು ಕರ್ತನಿಂದ ಗಮನಿಸಲ್ಪಡದೆಯೇನೂ ಇದ್ದಿರಲಿಲ್ಲ. ಶಬ್ದವು ಹೀಗೆ ಆಶ್ಚರ್ಯಸೂಚಕವಾಗಿ ಹೇಳಿತ್ತು **ಅವಳ ಪಾಪಗಳು ಒಂದರ ಮೇಲೊಂದು ಸೇರಿ ಆಕಾಶದ ಪರ್ಯಂತರಕ್ಕೂ ಬೆಳೆದವೆ. ಒಂದರ ಮೇಲೊಂದು** ಎಂಬುದು ಗ್ರೀಕ್ ಭಾಷೆಯ κολλάω (*kollaō*) ಎಂಬ ಪದದ ಅನುವಾದವಾಗಿದ್ದು, ಇದು ಮೂಲತಃ "ಒಂದಾಗಿ ಜೋಡಿಸು" ಎಂದರ್ಥವನ್ನು ಹೊಂದಿತ್ತು. ವರ್ಷಗಳ ಮುಂಚೆ ಮನುಷ್ಯರು ಆಕಾಶವನ್ನು ಮುಟ್ಟುವಷ್ಟು ಎತ್ತರದ ಗೋಪುರವನ್ನು ಕಟ್ಟುವದಕ್ಕೆ ಪ್ರಯತ್ನಿಸಿದ್ದರು (ಆದಿಕಾಂಡ 11). ಬಾಬೆಲಿನ ನಿವಾಸಿಗಳು ಇಟ್ಟಿಗೆಗಳಿಂದ ಮಾಡಲು ಅಶಕ್ತರಾದದ್ದನ್ನು, "ಮಹಾ ಬಾಬೆಲಿನ" ನಾಗರಿಕರು ಪಾಪದಿಂದ ಸಾಧಿಸಿದ್ದರು: ಅವರು **ಆಕಾಶ ಪರ್ಯಂತರಕ್ಕೂ** ತಮ್ಮ **ಪಾಪಗಳಿಂದ** ಗೋಪುರವನ್ನು ಕಟ್ಟಿದ್ದರು. ಈ ವಚನದ ಭಾಷೆಯು ಹಳೆಯ ಒಡಂಬಡಿಕೆಯಲ್ಲಿ ಬಾಬೆಲಿನ ಕುರಿತು ಹೇಳಲಾಗಿರುವ ಪ್ರವಾದನೆಯನ್ನು ಪ್ರತಿಫಲಿಸುತ್ತದೆ: "ಬಾಬೆಲನ್ನು ಸ್ವಸ್ಥಮಾಡುವದಕ್ಕೆ ನಾವು ಪ್ರಯತ್ನಪಟ್ಟರೂ ಅದು ಸ್ವಸ್ಥವಾಗಲಿಲ್ಲ; ಬಾಬೆಲನ್ನು ಬಿಟ್ಟು ನಾವೆಲ್ಲರೂ ನಮ್ಮ ನಮ್ಮ ದೇಶಗಳಿಗೆ ಹೋಗೋಣ; ಅದು ಹೊಂದಬೇಕಾದ ದಂಡನೆಯು ಆಕಾಶವನ್ನು ಮುಟ್ಟುವಷ್ಟು ದೊಡ್ಡದಾಗಿದೆ, ಹೌದು, ಗಗನದವರೆಗೂ ಬೆಳೆದಿದೆ" (ಯೆರೆಮೀಯ 51:9). ಇದೇ ರೀತಿಯ ಭಾಷೆಯು ಎಜ್ರನು 9:6ರಲ್ಲಿ ಸಿಕ್ಕುತ್ತದೆ.

ಪೌಲನು ರೋಮಿನಲ್ಲಿ ವಾಸಿಸುತ್ತಿದ್ದ ಕ್ರೈಸ್ತರಿಗೆ ಬರೆದ ವೇಳೆ, ಆತನು ತನ್ನ ದಿನದ ಸಮಾಜದೊಳಗಿದ್ದ - ಹೆಚ್ಚು ಅಥವಾ ಕಡಿಮೆಯಾಗಿ ನಗರುವ ತೋರಿಸಿದ್ದ ದಾರಿಯನ್ನೇ ಅನುಸರಿಸಿದ್ದಂಥ ಸಮಾಜ - ಪಾಪತನದ ಕುರಿತಾಗಿ ಒಂದು ಪ್ರೇರಿತವಾದ ಬಣ್ಣನೆಯನ್ನು ಮಾಡಿದನು:

> ಆದಕಾರಣ ಅವರು ಮನಸ್ಸಿನ ದುರಾಶೆಗಳಂತೆ ನಡೆದು ತಮ್ಮ ದೇಹಗಳನ್ನು ಮಾನಹೀನಮಾಡಿಕೊಳ್ಳಲಿ ಎಂದು ದೇವರು ಅವರನ್ನು ಹೊಲಸಾದ ನಡತೆಗೆ ಒಪ್ಪಿಸಿದನು. ಅವರು ಸತ್ಯದೇವರನ್ನು ಬಿಟ್ಟು ಅಸತ್ಯವಾದದ್ದನ್ನು ಹಿಡಿದುಕೊಂಡು ಸೃಷ್ಟಿಕರ್ತನನ್ನು ಪೂಜಿಸದೆ ಸೃಷ್ಟಿವಸ್ತುಗಳನ್ನೇ ಪೂಜಿಸಿ ಸೇವಿಸುವವರಾದರು. ಸೃಷ್ಟಿಕರ್ತನೊಬ್ಬನೇ ನಿರಂತರ ಸ್ತುತಿಹೊಂದತಕ್ಕವನು. ಆಮೆನ್. ಅವರು ಇಂಥದನ್ನು ಮಾಡಿದ್ದರಿಂದ ದೇವರು ಅವರನ್ನು ಕೇವಲ ತುಚ್ಛವಾದ ಕಾಮಾಭಿಲಾಷೆಗೆ ಒಪ್ಪಿಸಿದನು. ಹೇಗಂದರೆ ಅವರ ಹೆಂಗಸರು ಸ್ವಾಭಾವಿಕವಾದ ಭೋಗವನ್ನು ಬಿಟ್ಟು ಸ್ವಭಾವಕ್ಕೆ ವಿರುದ್ಧವಾದ ಭೋಗವನ್ನು ಅನುಸರಿಸಿದರು. ಅದರಂತೆ ಗಂಡಸರು ಸಹ ಸ್ವಾಭಾವಿಕವಾದ ಸ್ತ್ರೀಭೋಗವನ್ನು ಬಿಟ್ಟು ಒಬ್ಬರ ಮೇಲೊಬ್ಬರು ತಮ್ಮ ಕಾಮಾತುರದಿಂದ ತಾಪಪಡುತ್ತಾ ಗಂಡಸರ ಸಂಗಡ ಗಂಡಸರು ಕೇವಲ ಅವಲಕ್ಷಣವಾದದ್ದನ್ನು ನಡಿಸಿ ತಮ್ಮ ಭ್ರಾಂತಿಗೆ ತಕ್ಕ ಫಲವನ್ನು ತಮ್ಮಲ್ಲಿ ಹೊಂದುವವರಾದರು. ಇದಲ್ಲದೆ ದೇವರ ಜ್ಞಾನವು ಅವರಿಗೆ ಇಷ್ಟವಿಲ್ಲದ್ದರಿಂದ ಅಲ್ಲದ ಕೃತ್ಯಗಳನ್ನು ನಡಿಸುವವರಾಗುವಂತೆ ದೇವರು ಅವರನ್ನು ಅನಿಷ್ಟಭಾವಕ್ಕೆ ಒಪ್ಪಿಸಿದನು. ಹೇಗಂದರೆ ಅವರು ಸಕಲವಿಧವಾದ ಅನ್ಯಾಯ ದುರ್ಮಾರ್ಗತನ ಲೋಲುಪ್ತಿ ದುಷ್ಟತ್ವಗಳಿಂದಲೂ ಹೊಟ್ಟೇಕಿಚ್ಚು ಕೊಲೆ ಜಗಳ ಮೋಸ ಹಗೆತನಗಳಿಂದಲೂ ತುಂಬಿದವರಾದರು. ಅವರು ಕಿವಿ ಊದುವವರೂ ಚಾಡಿಹೇಳುವವರೂ ದೇವರನ್ನು ದ್ವೇಷಿಸುವವರೂ ಸೊಕ್ಕಿನವರೂ ಅಹಂಕಾರಿಗಳೂ ಬಡಾಯಿಕೊಚ್ಚುವವರೂ

ಕೇಡನ್ನು ಕಲ್ಪಿಸುವವರೂ ತಂದೆತಾಯಿಗಳ ಮಾತನ್ನು ಕೇಳದವರೂ ವಿವೇಕವಿಲ್ಲದವರೂ ಮಾತಿಗೆ ತಪ್ಪುವವರೂ ಮಮತೆಯಿಲ್ಲದವರೂ ಕರುಣೆಯಿಲ್ಲದವರೂ ಆದರು. ಇಂಥವುಗಳನ್ನು ನಡಿಸುವವರು ಮರಣಕ್ಕೆ ಪಾತ್ರರಾಗಿದ್ದಾರೆಂಬ ದೇವವಿಧಿಯು ಅವರಿಗೆ ತಿಳಿದಿದ್ದರೂ ಅವರು ತಾವೇ ಅವುಗಳನ್ನು ಮಾಡುವದಲ್ಲದೆ ಮಾಡುವವರನ್ನೂ ಅನುಮೋದಿಸುತ್ತಾರೆ (ರೋಮಾ 1:24-32).

Thomas Fullerನು ಹೇಳಿದ್ದೇನೆಂದರೆ "ಪಾಪದಲ್ಲಿ ಬೀಳುವವನು ಒಬ್ಬ ಮನುಷ್ಯನು," ಯಾವನು "ಅದರ ಬಗ್ಗೆ ಮನನೊಂದುಕೊಳ್ಳುವವನು, ಒಬ್ಬ ದೇವಮನುಷ್ಯನು," ಆದರೆ ಯಾವನು "ಅದರ ಬಗ್ಗೆ ಹೆಚ್ಚಳಪಟ್ಟುಕೊಳ್ಳುವನೋ ಅವನು ಸೈತಾನನು."[20] ರೋಮ್ ನಗರಿಯು ಪಾಪವನ್ನು ಮಾಡಿದ್ದು ಮಾತ್ರವೇ ಆಗಿರಲಿಲ್ಲ, ಆದರೆ ಅಕೆಯು ತನ್ನ ಪಾಪದ ಬಗ್ಗೆ ಹೆಮ್ಮೆಯಿಂದಿದ್ದಳು. ಪ್ರಕಟನೆ ಪುಸ್ತಕದ 17ರಿಂದ 19 ಅಧ್ಯಾಯಗಳು ಭ್ರಷ್ಟತೆ ಹಾಗೂ ಸ್ವೇಚ್ಛಾಚಾರದ ಕುರಿತಾಗಿ ಒಂದು ಕಣ್ಣಿಗೆ ಕಟ್ಟಿದಂಥ ಚಿತ್ರಣವನ್ನು ಬರೆಯುತ್ತವೆ, ಆದರೆ Barclayನು ಹೇಳಿದ್ದೇನೆಂದರೆ, "ರೋಮಿನ ಕುರಿತಾದ ಯೋಹಾನನ ಚಿತ್ರಣವು ವಾಸ್ತವಿಕದಲ್ಲಿ ಸ್ವತಃ ರೋಮನ್ನರೇ ಬಿಡಿಸಿದ ಕೆಲವೊಂದು ಚಿತ್ರಗಳೊಂದಿಗೆ ಹೋಲಿಕೆ ಮಾಡುವದನ್ನು ತಡೆಹಿಡಿದಿರುತ್ತದೆ"[21] (17:5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಸೊಲೊಮೋನನು ಹೀಗೆ ಹೇಳಿದನು, "ಪ್ರಜೆಗೆ ಧರ್ಮವು ಉನ್ನತಿ, ಅಧರ್ಮವು ಅವಮಾನ" (ಜ್ಞಾನೋಕ್ತಿ 14:34). ರೋಮ್ ನಗರಿಯು ತನ್ನ "ಮಹಿಮಕರವಾದ ಸೌಂದರ್ಯ" "ಬಾಡುತ್ತಿರುವ ಹೂವು" ಆಗಿತ್ತು (ಯೆಶಾಯ 28:1; KJV), ಮತ್ತು "ಕೆಟ್ಟತನವನ್ನು ಬಿತ್ತುವವನು ಕೇಡನ್ನೇ ಕೊಯ್ಯುವನು" (ಜ್ಞಾನೋಕ್ತಿ 22:8; NIV). ಜ್ಞಾನಿಯ ಮಾತುಗಳನ್ನು ಬಳಸಿಕೊಂಡು ಹೇಳುವದಾದರೆ, "ಸೌಂದರ್ಯವು ನೆಚ್ಚತಕ್ಕದ್ದಲ್ಲ, ಲಾವಣ್ಯವು ನೆಲೆಯಲ್ಲ, ಆದರೆ *ಕರ್ತನಿಗೆ ಭಯಪಡುವವರೇ ಸ್ತೋತ್ರಪಾತ್ರರು* (ನೋಡಿರಿ ಜ್ಞಾನೋಕ್ತಿ 31:30).

**ವಚನ 6.** ಮೊದಲನೆಯ ಸಂದೇಶವು ದೇವರ ಪ್ರಜೆಗಳನ್ನು ಉದ್ದೇಶಿಸಿ ಹೇಳಿದ್ದಾಗಿತ್ತು. ಎರಡನೆಯ ಸಂದೇಶವು ದೇವರ ಪ್ರತೀಕಾರವನ್ನು ಸಲ್ಲಿಸುವ ಮಧ್ಯವರ್ತಿಗಳಿಗೆ ಆಗಿತ್ತು: **ಇತರರಿಗೆ ಅವಳು ಮಾಡಿದ ಪ್ರಕಾರ ಅವಳಿಗೆ ಮಾಡಿರಿ; ಅವಳ ಕೃತ್ಯಗಳಿಗೆ ಸರಿಯಾಗಿ ಅವಳಿಗೆ ಎರಡರಷ್ಟು ಕೊಡಿರಿ; ಅವಳು ಕಲಸಿದ ಪಾತ್ರೆಯಲ್ಲಿ ಅವಳಿಗೆ ಎರಡರಷ್ಟು ಕಲಸಿಕೊಡಿರಿ.** ವಾಕ್ಯಭಾಗವು ಪ್ರತೀಕಾರ ಮಾಡುವ ಮಧ್ಯವರ್ತಿಗಳಾರೆಂದು ಗುರುತಿಸುವದಿಲ್ಲ. ಈ ಮಾತುಗಳನ್ನು 17ನೇ ಅಧ್ಯಾಯದಲ್ಲಿ ಬಾಬೆಲಿನ (ರೋಮಿನ) ಅವನತಿಗೆ ಕಾರಣರೆಂದು ಹೇಳಲಾಗಿದ್ದವರನ್ನು ಉದ್ದೇಶಿಸಿ ನುಡಿದಿರಬಹುದಾಗಿದೆ (17:16) - ಅಥವಾ, ಆ ಮಾತುಗಳನ್ನು ಪ್ರತೀಕಾರ ಮಾಡುವ ದೇವದೂತರನ್ನು ಉದ್ದೇಶಿಸಿ ನುಡಿದಿರಬಹುದಾಗಿದೆ.

ರೋಮಿಗಾಗುವ ದಂಡನೆ ಔಚಿತ್ಯತೆಯು ಆಕೆ ಜನಾಂಗಗಳನ್ನು ಅಮಲೇರಿಸುವದಕ್ಕಾಗಿ ಬಳಸುತ್ತಿದ್ದ **ಪಾತ್ರೆಯಲ್ಲಿ** ಈಗ ದೇವರ ರೌದ್ರವು ತುಂಬಿಸಲ್ಪಡುವದು ಎಂಬ ವಾಸ್ತವಾಂಶದಲ್ಲಿ ಕಂಡು ಬರುತ್ತದೆ. **ಅವಳಿಗೆ ಎರಡರಷ್ಟು ಕೊಡಿರಿ** ಮತ್ತು **ಅವಳಿಗೆ ಎರಡರಷ್ಟು ಕಲಸಿಕೊಡಿರಿ** ಎಂಬ ಪದಗುಚ್ಛಗಳ ಅರ್ಥವು ರೋಮಿಗೆ ಆಕೆಯು ನೀಡಿದ್ದ ನೋವಿಗೆ ಪ್ರತಿಯಾಗಿ ಅವಳಿಗೆ ಎರಡರಷ್ಟು ಕೊಡಲ್ಪಡುವದು ಎಂದಾಗಿರುತ್ತದೆ. ಬಿತ್ತುವ ಹಾಗೂ ಕೊಯ್ಯುವ ತತ್ವವು ಏನೆಂದರೆ ಮನುಷ್ಯನು ತಾನು ಬಿತ್ತಿದ್ದಕ್ಕಿಂತಲೂ ಅಧಿಕವಾದದ್ದನ್ನು ಕೊಯ್ಯುತ್ತಾನೆ - ಮತ್ತು ರೋಮ್ ಖಂಡಿತವಾಗಿಯೂ ತಮಗೆ ಸಿಕ್ಕ ಯಾವದಕ್ಕೇ ಆಗಲಿ ಯೋಗ್ಯಳಾಗಿದ್ದಳು. ಹೇಗೂ, I. T. Beckwithನು ಗಮನಕ್ಕೆ ತರುವದೇನೆಂದರೆ, "ಆಕೆಗೆ ಎರಡಷ್ಟು ಅಧಿಕವಾಗಿ ಕೊಡಿರಿ" ಎಂಬದು "ಪೂರ್ಣ ಪ್ರತಿಫಲ ಕೊಡಲ್ಪಡುವದು ಎಂದು ಹೇಳುವ ಸಾಂಪ್ರದಾಯದ

ಮಾತಾಗಿರುತ್ತದೆ"[22] (ನೋಡಿರಿ ಯೆರೆಮೀಯ 16:18; 17:18). "ಎರಡರಷ್ಟು" ಎಂಬುದು ಕೆಲವು ಸಾರಿ ನಕಲುಕರಣದ ಅರ್ಥವನ್ನು ಹೊಂದಿರುತ್ತದೆ, ನಾವು ಒಬ್ಬ ವ್ಯಕ್ತಿಯನ್ನು ಮತ್ತೊಬ್ಬನ "ತದ್ರೂಪ" ಎಂದು ಹೇಳುವ ಪ್ರಕಾರ; ಸರಳವಾಗಿ ಹೇಳುವದಾದರೆ, ಅವರಿಬ್ಬರೂ ಮೂಲಭೂತವಾಗಿ ಒಂದೇ ಆಗಿದ್ದಾರೆ ಎಂಬುದೆ. ಹೇಗೆ ಇದ್ದರೂ ಸರಿಯೇ, ಅಂತ್ಯದಲ್ಲಿ ತಕ್ಕಡಿಯು ಸಮತೋಲನಗೊಳ್ಳುವದು, ಮತ್ತು ರೋಮ್ ನಗರಿಯು ತಾನು ಕೊಟ್ಟಷ್ಟೇ ಹಿಂದಿರುಗು ಪಡೆದುಕೊಳ್ಳಲಿದ್ದಳು (ನೋಡಿರಿ ಮತ್ತಾಯ 7:2).

**ವಚನ 7.** ಶಬ್ದವು ಬಳಿಕ ಹೀಗೆ ಹೇಳಿತು, **ಅವಳು ಎಷ್ಟು ಮಟ್ಟಿಗೆ ತನ್ನನ್ನು ಘನಪಡಿಸಿಕೊಂಡು ಭೋಗಿನಿಯಾಗಿದ್ದಾಳೋ ಅಷ್ಟು ಮಟ್ಟಿಗೆ ಅವಳಿಗೆ ಯಾತನೆಯನ್ನೂ ದುಃಖವನ್ನೂ ಕೊಡಿರಿ**. (ಈ ಹೇಳಿಕೆಯನ್ನು ಯೆರೆಮೀಯ 50:29ರೊಂದಿಗೆ ಹೋಲಿಸಿರಿ.) ರೋಮಿನ ಜನಪ್ರಿಯತೆಯು ಆಕೆಯನ್ನು ಗರ್ವದಿಂದ ತುಂಬಿಸಿತ್ತು: **ಅವಳು ... ಘನಪಡಿಸಿಕೊಂಡ**ಳು. ಆಕೆಯು ತನ್ನ ವರದಾನದ ಮೂಲವು ದೇವರೇ ಎಂಬುದನ್ನು ಒಪ್ಪಿಕೊಳ್ಳಲಿಲ್ಲ; ಆಕೆಯು ತನಗೇ ತಾನೇ ಸಾಕಾದವಳೆಂದು ಭಾವಿಸಿಕೊಂಡಿದ್ದಳು. Cairdನು ಗಮನಕ್ಕೆ ತರುವದೇನೆಂದರೆ ಆಕೆಯ ತಪ್ಪು "ಕೇವಲ ದುರಹಂಕಾರ ಮಾತ್ರವೇ ಆಗಿರಲಿಲ್ಲ, ಆದರೆ ಯಾವದೇ ಆಳವಾದ ಕೊರತೆಯ ಅರ್ಥವೂ ಜೊತೆಗಡದೆ ತನ್ನ ತೀರಿ ಹೋಗದ ಸಂಪನ್ಮೂಲಗಳಲ್ಲಿ ಇಟ್ಟುಕೊಂಡಿದ್ದ ಪ್ರಶ್ನಾತೀತವಾದ ಒಂದು ನಂಬಿಕೆ"[23] ಆಗಿತ್ತು.

ಅಲ್ಲದೆ ಅವಳು **ಭೋಗಿನಿಯಾಗಿ** ಬಾಳಿದ್ದಳು. NRSV ತರ್ಜುಮೆ ಪ್ರಕಾರವಾಗಿ, ರೋಮ್ ನಗರಿಯು "ವಿಲಾಸದಿಂದ" ಜೀವಿಸುತ್ತಿತ್ತು. "ಭೋಗಿನಿಯಾಗಿದ್ದಳು" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು στρηνιάω (*strēniaō*) ಎಂಬುದರಿಂದ ತೆಗೆದುಕೊಳ್ಳಲ್ಪಟ್ಟಿರುತ್ತದೆ. ಅದಕ್ಕೆ ಸಂಬಂಧಿಸಿದ ನಾಮಪದವಾದ στρῆνος (*strēnos*) ಎಂಬುದು 3ನೇ ವಚನದಲ್ಲಿ ಕಂಡು ಬರುತ್ತದೆ, ಇದು ಆಕೆಯ "ಸುಖಭೋಗಿಯಾಗಿದ್ದರಿಂದ [ಅಥವಾ ವಿಲಾಸಿ]" ಎಂಬುದರ ಕುರಿತು ಮಾತಾಡುತ್ತದೆ. *Strēniaō* ಎಂಬ ಕ್ರಿಯಾಪದವು 9ನೇ ವಚನದಲ್ಲಿ ಕಾಣಿಸುತ್ತದೆ: "ಅವಳೊಂದಿಗೆ ... ಭೋಗಿಗಳಾಗಿ [ಅಥವಾ ವಿಲಾಸಿತನದಿಂದ] ಬದುಕಿದ ಭೂರಾಜರು." ಹೊಸ ಒಡಂಬಡಿಕೆಯೊಳಗೆ 3, 7, ಮತ್ತು 9 ವಚನಗಳಲ್ಲಿ ಮಾತ್ರವೇ ಗ್ರೀಕ್ ಪದಗಳು ಕಾಣಿಸುತ್ತವೆ. Beckwithನು ಹೇಳಿದ್ದೇನೆಂದರೆ ಈ ಪದಗಳು "ಅತಿಯಾದ ವಿಲಾಸ ಹಾಗೂ ದುರಹಂಕಾರ ಮತ್ತು ಶಕ್ತಿಯನ್ನು ಸ್ವೇಚ್ಛಾಚಾರದಿಂದ ಬಳಸುವದರ ಜೊತೆಗೂಡಿದ ಸ್ವಭೋಗಾಸಕ್ತಿ"[24] ಎಂಬ ವಿಚಾರವನ್ನೊಳಗೊಂಡಿರುತ್ತವೆ. *Strēniaō* ಎಂಬ ಪದವು ಸೂಚಿಸುವದೇನೆಂದರೆ "ಬೇರೆಯವರು ಸುಖವಿಲ್ಲದೆ ಇರುವಾಗ ಗರ್ವದಿಂದ ವಿಲಾಸದಲ್ಲಿ ಜೀವಿಸುವದು ಎಂಬುದನ್ನು ಸೂಚಿಸುತ್ತದೆ. ಇದು ಸ್ವತ್ತುಗಳನ್ನು ಮತ್ತು ಸುಖಭೋಗಗಳನ್ನು ಜೀವನದ ಅತ್ಯಂಥ ಪ್ರಾಮುಖ್ಯ ಸಂಗತಿಗಳನ್ನಾಗಿ ಮಾಡುತ್ತದೆ, ಮತ್ತು ಬೇರೆಯವರ ಅಗತ್ಯತೆಗಳನ್ನು ಅಲಕ್ಷ್ಯ ಮಾಡುತ್ತದೆ."[25]

"ಭೋಗಿಗಳಾಗಿ ಬದುಕಿದ" ಎಂಬುದು ಪ್ರಾಚೀನ ರೋಮಿನಲ್ಲಿದ್ದ ಅನೇಕ ಜೀವಿತಕ್ಕೆ ತಕ್ಕದಾದ ಬಣ್ಣನೆಯಾಗಿರುತ್ತದೆ.

> ಈ ಪ್ರಥಮ ಶತಮಾನದಲ್ಲಿ ಲೋಕವು ತನ್ನ ಐಶ್ವರ್ಯಗಳನ್ನು ರೋಮಿನ ತೊಡೆಗಳ ಮೇಲೆ ಸುರಿಯುತ್ತಿತ್ತು ... "ಸುದೀರ್ಘವಾದ ಸಮಾಧಾನ, ಸಮುದ್ರದಲ್ಲಿರುತ್ತಿದ್ದ ಭದ್ರತೆ, ಹಾಗೂ ವ್ಯಾಪಾರದ ಸ್ವಾತಂತ್ರ್ಯತೆ, ಇವುಗಳೆಲ್ಲಾ ರೋಮ್ ನಗರವನ್ನು ವೈಶಿಷ್ಟ್ಯವಾದ ಉತ್ಪನ್ನಗಳಿಗೆ ಮತ್ತು ಬ್ರಿಟಿಷ್ ಕಾಲುವೆಗಳಿಂದ ಮೊದಲ್ಗೊಂದು ಗಂಗಾ ನದಿಗಳ ತನಕ ಪ್ರತಿಯೊಂದು ಭಕ್ಷ್ಯಗಳಿಗೆ [ವ್ಯಾಪಾರ ಕೇಂದ್ರವಾಗಿ] ಮಾಡಿತ್ತು."[26]

ರೋಮ್ ನಗರಿಯು ಹೆಮ್ಮೆಯಿಂದ **ತನ್ನ ಹೃದಯದಲ್ಲಿ - ನಾನು ರಾಣಿಯಾಗಿ ಕೂತುಕೊಂಡಿದ್ದೇನೆ, ನಾನು ವಿಧವೆಯಲ್ಲ** ಎಂದು ಹೇಳಿಕೊಂಡಳು (ನೋಡಿರಿ ಯೆಶಾಯ 47:7, 8). ಆಕೆಯು ವಿಧವೆಯಾಗಿರುವದನ್ನು ನಿರಾಕರಿಸಿದಳು ಯಾಕೆಂದರೆ "ಬೈಬಲ್ ಲೇಖಕರ ಜಗತ್ತಿನಲ್ಲಿ ಒಬ್ಬ ವಿಧವೆಯು ಬಡತನ ಹಾಗೂ ಅಸಹಾಯಕತೆಯ *ಹೆಚ್ಚುಗಾರಿಕೆಗೆ* ಸಮಾನವಾಗಿದ್ದಳು."[27] ರೋಮಿನ ಮನೋಭಾವವು "ನಾನು ಆಳ್ವಿಕೆಯನ್ನು ಮಾಡುತ್ತಲೇ ಇರುವೆನು. ನಾನು ಎಂದಿಗೂ ಸಾಯುವದಿಲ್ಲ, ಮತ್ತು ನನ್ನ ಮಕ್ಕಳು ಎಂದಿಗೂ ಸಾಯರು" ಎಂದಾಗಿತ್ತು. Flavian ವಂಶಸ್ಥ ಚಕ್ರವರ್ತಿಗಳಿಂದ "ನಿತ್ಯವಾದ ನಗರ" ಎಂಬ ಪದಗುಚ್ಛವು ಘೋಷವಾಕ್ಯವಾಗಿ ಅಳವಡಿಸಿಕೊಳ್ಳಲ್ಪಟ್ಟಿತ್ತು; ಈ ಮಾತುಗಳು ನಾಣ್ಯಗಳಲ್ಲಿ ಕೆತ್ತಲ್ಪಟ್ಟಿದ್ದವು ಮತ್ತು ಶಾಸನಗಳಲ್ಲಿ ಸೇರ್ಪಡೆಗೊಳಿಸಲ್ಪಟ್ಟಿದ್ದವು. ಹಾಗಿದ್ದರೂ, ಆಕೆಯು ಈಗಲೂ **ಯಾತನೆಯನ್ನೂ ದುಃಖವನ್ನೂ** ಕಾಣಲಿದ್ದಳು.

**ವಚನ 8.** ಶಬ್ದವು ಹೀಗೆ ಘೋಷಿಸಿತು, **ದುಃಖವನ್ನು ಕಾಣುವದೇ ಇಲ್ಲ ಎಂದು ಹೇಳಿಕೊಳ್ಳುವದರಿಂದ** [ರೋಮಿನ ಗರ್ವ] **ಅವಳಿಗೆ ಕೊಲೆ ದುಃಖ ಕ್ಷಾಮ ಎಂಬೀ ಉಪದ್ರವಗಳು ಒಂದೇ ದಿನದಲ್ಲಿ ಸಂಭವಿಸುವವು; ಅವಳು ಬೆಂಕಿಯಿಂದ ಸುಟ್ಟುಹೋಗುವಳು. ಒಂದೇ ದಿನದಲ್ಲಿ** ಎಂಬ ಪದಗುಚ್ಛವು "ಇಪ್ಪತ್ತು-ನಾಲ್ಕು-ಗಂಟೆಗಳ ಕಾಲಾವಧಿಯಲ್ಲಿ" ಎಂದರ್ಥವನ್ನು ಕೊಡುವದಿಲ್ಲ. ಈ ಅಧ್ಯಾಯದಲ್ಲಿ, "ಒಂದೇ ದಿನ" (ವ. 8) ಪದವು "ಒಂದೇ ಗಳಿಗೆ" (ವ. 10) ಎಂಬದರೊಂದಿಗೆ ಪರ್ಯಾಯವಾಗಿ ಬಳಸಲ್ಪಟ್ಟಿದೆ. ಎರಡೂ ಪದಗಳು ಸಾಂಕೇತಿಕವಾಗಿ ರೋಮ್ ನಗರಿಯ ಪತನವು *ಏಕಾಏಕಿ* ಸಂಭವಿಸುವದು ಎಂಬುದನ್ನು ಒತ್ತಿ ಹೇಳುತ್ತವೆ. ಪರಿಭಾಷೆಯನ್ನು ಯೆಶಾಯ 47:9ರಲ್ಲಿರುವ ಪರಿಭಾಷೆಯೊಂದಿಗೆ ಹೋಲಿಸಿ ನೋಡಿರಿ.

**ಮಾರಕಬೇನೆ ದುಃಖ ಕ್ಷಾಮ** ಎಂಬವುಗಳು ನಗರ ಮೇಲೆ ಬರಲಿದ್ದ **ಉಪದ್ರವಗಳಲ್ಲಿ** ಸೇರಿದ್ದವು. "ಮಾರಕಬೇನೆ" ಎಂಬುದು θάνατος (*thanatos*) ಎಂಬ ಗ್ರೀಕ್ ಪದದಿಂದ ಅನುವಾದಿಸಲ್ಪಟ್ಟಿದ್ದು, ಅದು ಸಾಮಾನ್ಯವಾಗಿ "ಮರಣ" ಎಂದು ಅರ್ಥವನ್ನು ಕೊಡುತ್ತದೆ (ನೋಡಿರಿ KJV). ಈ ಪದದ ಅರ್ಥವು "ಮಾರಕಬೇನೆ" ಎಂದು ಸಹ ಆಗಿರಬಲ್ಲದು (6:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಪ್ರಕಟನೆ ಪುಸ್ತಕವು ಬರೆಯಲ್ಪಡುವ ವೇಳೆಯಲ್ಲಿ ರೋಮ್ ನಗರವು ಬೀಳುವದಕ್ಕೆ ಸಾಧ್ಯವಿಲ್ಲದೆಂಬುದಾಗಿ ತೋರುತ್ತಿತ್ತೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು, ಮೊದಲ ಶತಮಾನದ ವಾಚಕನು ಹೀಗೆ ಕೇಳಬಹುದಾಗಿದೆ, "ಆಕೆಯ ನಾಶನವು ಹೇಗೆ ಸಾಧ್ಯವಿರುತ್ತದೆ?" 8ನೇ ವಚನವು ಅದಕ್ಕೆ ಉತ್ತರವನ್ನು ಕೊಡುತ್ತದೆ: **ಅವಳಿಗೆ ದಂಡನೆಯನ್ನು ವಿಧಿಸಿದ ದೇವರಾಗಿರುವ ಕರ್ತನು ಬಲಿಷ್ಠನಾಗಿದ್ದಾನೆ.** ಮೂಲ ವಾಕ್ಯದಲ್ಲಿ, **ಬಲಿಷ್ಠನಾಗಿದ್ದಾನೆ** ἰσχυρός (*ischuros*) ಎಂಬ ಪದವು ಅದನ್ನು ಒತ್ತಿ ಹೇಳುವದಕ್ಕೆ ಮೊದಲಲ್ಲಿ ಬರುತ್ತದೆ: "ಯಾಕೆಂದರೆ ನಮ್ಮ ಕರ್ತನಾದ ದೇವರ ಬಲಿಷ್ಠನು, ಆಕೆಗೆ ದಂಡನೆಯನ್ನು ವಿಧಿಸಿದಾತನು." ರೋಮ್ ನಗರಿಯು ಬಲಿಷ್ಠಳಾಗಿದ್ದಿರಬಹುದು (ವ. 10), ಆದರೆ ದೇವರು ಆಕೆಗಿಂತಲೂ ಹೆಚ್ಚು ಬಲಿಷ್ಠವಾಗಿದ್ದನು.

## ರಾಜರು ಗೋಳಾಡುತ್ತಾರೆ (18:9, 10)

**9ಅವಳೊಂದಿಗೆ ಜಾರತ್ವಮಾಡಿ ಭೋಗಿಗಳಾಗಿ ಬದುಕಿದ ಭೂರಾಜರು ಅವಳ ದಹನದಿಂದೇರುವ ಹೊಗೆಯನ್ನು ನೋಡುವಾಗ ಅವಳ ಯಾತನೆಯ ದೆಸೆಯಿಂದ ಭಯಪಟ್ಟು**

**ದೂರದಲ್ಲಿ ನಿಂತು ಗೋಳಾಡುತ್ತಾ ಎದೆ ಬಡುಕೊಳ್ಳುತ್ತಾ - [10]ಅಯ್ಯೋ, ಅಯ್ಯೋ, ಮಹಾಪಟ್ಟಣವೇ, ಬಾಬೆಲೇ, ಬಲಿಷ್ಠವಾದ ನಗರಿಯೇ, ನಿನಗೆ ವಿಧಿಸಲ್ಪಟ್ಟ ದಂಡನೆಯು ಒಂದೇ ಗಳಿಗೆಯಲ್ಲಿ ಬಂತಲ್ಲಾ ಎಂದು ಹೇಳುವರು.**

**ವಚನ 9.** 8ನೇ ವಚನದಲ್ಲಿ ಶಬ್ದವು ಬಾಬೆಲೆಂಬವಳು (ರೋಮ್ ನಗರ) "ಬೆಂಕಿಯಿಂದ ಸುಟ್ಟುಹೋಗುವಳು" (ನೋಡಿರಿ 17:16). ಮುಂಬರುವ ವಚನಗಳಲ್ಲಿ, ವಿವಿಧ ಗುಂಪಿನ ಜನರು ಹೊಗೆ ಮತ್ತು ಬೆಂಕಿಯಿಂದ ದೂರವಾಗಿ ನಿಂತು ನಗರದ ನಾಶವನನ್ನು ಕಂಡು ಗೋಳಾಡುತ್ತಿರುವದಾಗಿ ಚಿತ್ರಿಸಲ್ಪಟ್ಟಿದ್ದಾರೆ.

ಮೊದಲನೆಯದಾಗಿ, ಸಾಮ್ರಾಜ್ಯದ ಸಾಮಂತ ರಾಜರು ಹಾಗೂ ಪ್ರಭುಗಳು ಗೋಳಾಡುತ್ತಿರುವದನ್ನು ಕಾಣುತ್ತೇವೆ: **ಅವಳೊಂದಿಗೆ ಜಾರತ್ವಮಾಡಿ ಭೋಗಿಗಳಾಗಿ ಬದುಕಿದ ಭೂರಾಜರು ಅವಳ ದಹನದಿಂದೇರುವ ಹೊಗೆಯನ್ನು ನೋಡುವಾಗ ಅವಳ ಯಾತನೆಯ ದೆಸೆಯಿಂದ ಭಯಪಟ್ಟು ದೂರದಲ್ಲಿ ನಿಂತು ಗೋಳಾಡುತ್ತಾ ಎದೆ ಬಡುಕೊಳ್ಳುತ್ತಾ** ಇರುವರು. ಇವರು 17:2ರಲ್ಲಿ ಪ್ರಸ್ತಾಪಿಸಲ್ಪಟ್ಟ ಅದೇ ರಾಜರೇ ಆಗಿರುವದು, ಮತ್ತು ಬಹುಶಃ ರೋಮಿನ ನಾಶನದಲ್ಲಿ ಪಾಲ್ಗೊಳ್ಳುವಂಥ ಹತ್ತು ರಾಜರು (17:12) ಸಹ ಆಗಿರಬಹುದಾಗಿದೆ (17:16). ಒಬ್ಬ ವ್ಯಕ್ತಿಯು ಒಂದು ಕೃತ್ಯವನ್ನು ಎಸಗಿದ ಬಳಿಕ ಅದರಿಂದಾಗುವ ಪರಿಣಾಮಗಳಿಗೋಸ್ಕರ ಗೋಳಾಡುವದು ಅಸಹಜವಾದದ್ದೇನೂ ಆಗಿರುವದಿಲ್ಲ (ನೋಡಿರಿ 2 ಕೊರಿಂಥ 7:10). **ಗೋಳಾಡುತ್ತಾ** ಮತ್ತು **ಎದೆ ಬಡುಕೊಳ್ಳುತ್ತಾ** ಎಂಬ ಪದಗಳು ಮೌನವಾದ ಶೋಕವನ್ನು ಸೂಚಿಸುವದಿಲ್ಲ. ಬದಲಾಗಿ, ಅವುಗಳು ಈ ರಾಜರು ರೋದಿಸುತ್ತಾ ತಮ್ಮ ಎದೆಗಳನ್ನು ಬಡುಕೊಂಡರು ಎಂಬುದನ್ನು ಸೂಚಿಸುತ್ತದೆ.

ದುಃಖಿಸುವವರು ರೋಮಿಗೋಸ್ಕರ ಅಳುವದಕ್ಕಿಂತಲೂ ಅಧಿಕವಾಗಿ ತಮಗಾದ ನಷ್ಟವನ್ನು ನೆನಸಿ ಅಳುತ್ತಿದ್ದರು. ಉಪ-ಆಡಳಿತಗಾರರು ತಮ್ಮ ಆಳ್ವಿಕೆಗೆ ಒತ್ತಾಸೆಯನ್ನು ನೀಡುತ್ತಿದ್ದ ಅಧಿಕಾರದ ವ್ಯವಸ್ಥೆಯು ಹೊರಟು ಹೋಗಿದ್ದಕ್ಕಾಗಿ ಗೋಳಾಡುತ್ತಿದ್ದರು. ರೋಮಿನ ಪತನವಾದ ವೇಳೆಯಲ್ಲಿ, ವಿಶ್ವದಲ್ಲೆಲ್ಲಾ ದಿಗಿಲು ಹಾಗೂ ಗೊಂದಲವು ಸೃಷ್ಟಿಯಾಗಿತ್ತೆಂದು ಹೇಳಲಾಗುತ್ತದೆ.

**ವಚನ 10.** ರಾಜರು **ಅವಳ ಯಾತನೆಯ ದೆಸೆಯಿಂದ ಭಯಪಟ್ಟು ದೂರದಲ್ಲಿ ನಿಂತು ಗೋಳಾಡುತ್ತಾ ಎದೆ ಬಡುಕೊಳ್ಳುತ್ತಾ - ಅಯ್ಯೋ, ಅಯ್ಯೋ, ಮಹಾಪಟ್ಟಣವೇ, ಬಾಬೆಲೇ, ಬಲಿಷ್ಠವಾದ ನಗರಿಯೇ, ನಿನಗೆ ವಿಧಿಸಲ್ಪಟ್ಟ ದಂಡನೆಯು ಒಂದೇ ಗಳಿಗೆಯಲ್ಲಿ ಬಂತಲ್ಲಾ ಎಂದು ಹೇಳುವರು. ಅಯ್ಯೋ** οὐαί (*ouai*) ಎಂಬ ಪದವು ಪ್ರಕಟನೆ ಪುಸ್ತಕದಲ್ಲಿ ಪದೇ ಪದೇ ಕಾಣಿಸಿಕೊಳ್ಳುತ್ತದೆ (8:13; 9:12; 11:14; 18:10, 16, 19) ಮತ್ತು ಗೋಳಾಟದಿಂದ ಕೂಡಿದ ನೋವನ್ನು ವ್ಯಕ್ತಪಡಿಸುತ್ತದೆ (8:13ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಪದವನ್ನು "ಅದು ಎಷ್ಟೊಂದು ಭಯಾನಕವಾಗಿರಲಿದೆ!" ಎಂದು ಭಾವಾನುವಾದಗೊಳಿಸಬಹುದಾಗಿದೆ. ಅದು ಇಲ್ಲಿ ಎರಡು ಸಾರಿ ಮತ್ತು 16 ಹಾಗೂ 19 ವಚನಗಳಲ್ಲಿ ಒತ್ತಿ ಹೇಳುವದಕ್ಕೋಸ್ಕರ ಪುನರಾವರ್ತಿಸಲ್ಪಟ್ಟಿದೆ. **ನಿನಗೆ ವಿಧಿಸಲ್ಪಟ್ಟ ದಂಡನೆ** ಎಂಬ ಪದಗುಚ್ಛವು "ನಿನಗೆ ಯೋಗ್ಯವಾದ ನ್ಯಾಯತೀರ್ಪು" ಎಂಬುದನ್ನು ಸೂಚಿಸುತ್ತದೆ ಮತ್ತು "ನೀನು ನಿನ್ನ ಮೇಲೆ ತಂದುಕೊಂಡ ನ್ಯಾಯತೀರ್ಪು" ಎಂಬ ಸೂಚ್ಯಾರ್ಥವನ್ನು ನೀಡುತ್ತದೆ.

ಒಂದು ವಿವರವು ವಿಶೇಷವಾಗಿ ರಾಜರ ಕುರಿತು ನಿಜರೂಪವನ್ನು ಬಯಲುಗೊಳಿಸುತ್ತದೆ: ಅವರು ಪ್ರಲಾಪಿಸುತ್ತಿರುವ ವೇಳೆ, **ದೂರದಲ್ಲಿ ನಿಂತು** ಇದ್ದರು. ಒಂದು ಕಾಲದಲ್ಲಿ ಅವರು ಮಹಾ ಜಾರಸ್ತ್ರೀಯೊಂದಿಗೆ ನಿಕಟ ಸಂಗವನ್ನು ಬಯಸಿದ್ದವರು; ಈಗ ಅವರು "ದೂರದಲ್ಲಿ

ನಿಂತಿದ್ದರು." ಅವರು ಆಕೆಯನ್ನು ಕಾಪಾಡುವದಕ್ಕೆ ಓಡಿ ಹೋಗಲಿಲ್ಲ; ಅವರು ಬೆಂಕಿಯನ್ನು ನಂದಿಸುವದಕ್ಕೆ ನೀರನ್ನು ಹೊಯ್ಯಲಿಲ್ಲ; ಅವರು ತಮ್ಮ ಮೇಲಂಗಿಗಳನ್ನು ತೆಗೆದುಕೊಂಡು ಜ್ವಾಲೆಗಳನ್ನು ಹೊಡೆದು ಆರಿಸುವದಕ್ಕೆ ಪ್ರಯತ್ನಿಸಲಿಲ್ಲ. ಬದಲಾಗಿ, ಅವರು "ದೂರದಲ್ಲಿ ನಿಂತರು." "ತಮ್ಮೊಬ್ಬರಿಗಾಗಿ ಮಾತ್ರವೇ ಜೀವಿಸುವವರು ತಾವೊಬ್ಬರೇ ಸಾಯುತ್ತಾರೆ" ಎಂದು ಹೇಳಲಾಗಿರುತ್ತದೆ.

## ವರ್ತಕರು ಗೋಳಾಡುತ್ತಾರೆ (18:11-20)

**[11]ಇದಲ್ಲದೆ ಭೂಲೋಕದ ವರ್ತಕರು ಅವಳ ನಿಮಿತ್ತವಾಗಿ ಅತ್ತು ಗೋಳಾಡುತ್ತಾ - ನಮ್ಮ ಹಡಗುಗಳ ಸರಕುಗಳನ್ನು ಕೊಂಡುಕೊಳ್ಳುವವರು ಇನ್ನು ಇಲ್ಲವಲ್ಲಾ. [12]ಚಿನ್ನ, ಬೆಳ್ಳಿ, ರತ್ನ, ಮುತ್ತು, ನಯವಾದ ನಾರುಮಡಿ, ಧೂಮ್ರವರ್ಣದ ವಸ್ತ್ರ, ರೇಶಿಮೆ, ರಕ್ತಾಂಬರ, ಸಕಲ ವಿಧವಾದ ಅಗಿಲುಮರ, ಸಕಲ ವಿಧವಾದ ಜಂತದ ಸಾಮಾನು, ಬಹು ಬೆಲೆಯುಳ್ಳ ಮರ, ತಾಮ್ರ, ಕಬ್ಬಿಣ, ಚಂದ್ರಕಾಂತ ಶಿಲೆ ಇವುಗಳಿಂದ ಮಾಡಿದ ಸಕಲ ವಿಧವಾದ ಪಾತ್ರೆ, [13]ಲವಂಗಚೆಕ್ಕೆ, ರಕ್ತಬಾಳ, ಧೂಪ, ಸುಗಂಧತೈಲ, ಸಾಂಬ್ರಾಣಿ, ದ್ರಾಕ್ಷಾರಸ, ಎಣ್ಣೆ, ನಯವಾದ ಹಿಟ್ಟು, ಗೋದಿ, ದನ, ಕುರಿ, ಕುದುರೆ, ರಥ, ಗುಲಾಮ, ಮಾನುಷಪ್ರಾಣ ಇವೇ ಮೊದಲಾದ ನಮ್ಮ ಸರಕುಗಳನ್ನು ಕೊಂಡುಕೊಳ್ಳುವವರು ಯಾರೂ ಇಲ್ಲವಲ್ಲಾ ಎಂದು ಹೇಳಿಕೊಳ್ಳುತ್ತಾ ದುಃಖಿಸುವರು. [14]ಬಾಬೆಲೇ, ನಿನ್ನ ಜೀವವು ಅಪೇಕ್ಷಿಸಿದ ಹಣ್ಣುಹಂಪಲುಗಳು ನಿನ್ನನ್ನು ಬಿಟ್ಟುಹೋದವು; ಸೊಗಸಾಗಿಯೂ ಶೋಭಾಯಮಾನವಾಗಿಯೂ ಇರುವದೆಲ್ಲವೂ ನಾಶವಾಗಿ ನಿನ್ನನ್ನು ಬಿಟ್ಟುಬಿಟ್ಟವು. ಅವು ಇನ್ನು ಮೇಲೆ ಜನರಿಗೆ ಸಿಕ್ಕುವದೇ ಇಲ್ಲ. [15]ಆ ಸರಕುಗಳನ್ನು ಮಾರಿ ಅವಳಿಂದ ಐಶ್ವರ್ಯವಂತರಾದ ವರ್ತಕರು ಅವಳ ಯಾತನೆಯನ್ನು ನೋಡಿ ಭಯಪಟ್ಟು ದೂರದಲ್ಲಿ ನಿಂತು ಗೋಳಾಡುತ್ತಾ ದುಃಖಿಸುತ್ತಾ - [16]ಅಯ್ಯೋ, ಅಯ್ಯೋ, ನಯವಾದ ನಾರುಮಡಿಯನ್ನೂ ಧೂಮ್ರವರ್ಣದ ವಸ್ತ್ರಗಳನ್ನೂ ರಕ್ತಾಂಬರವನ್ನೂ ಧರಿಸಿಕೊಂಡು ಚಿನ್ನ ರತ್ನ ಮುತ್ತು ಇವುಗಳಿಂದ ತನ್ನನ್ನು ಅಲಂಕರಿಸಿಕೊಂಡಿದ್ದ ಈ ಮಹಾ ಪಟ್ಟಣಕ್ಕೆ ಏನು ದುರ್ಗತಿ ಸಂಭವಿಸಿತು. [17]ಅಷ್ಟು ಐಶ್ವರ್ಯವು ಒಂದೇ ಗಳಿಗೆಯಲ್ಲಿ ನಾಶವಾಯಿತಲ್ಲಾ ಎಂದು ಹಂಬಲಿಸುವರು. ಇದಲ್ಲದೆ ಹಡಗುಗಳ ಯಜಮಾನರೂ ಸಮುದ್ರಪ್ರಯಾಣ ಮಾಡುವವರೂ ನಾವಿಕರೂ ಸಮುದ್ರದ ಮೇಲೆ ಕೆಲಸವನ್ನು ನಡಿಸಿ ಜೀವನ ಮಾಡುವವರೆಲ್ಲರೂ ದೂರದಲ್ಲಿ ನಿಂತು [18]ಅವಳ ದಹನದಿಂದೇರುವ ಹೊಗೆಯನ್ನು ನೋಡುತ್ತಾ - ಈ ಮಹಾ ಪಟ್ಟಣಕ್ಕೆ ಸಮಾನವಾದದ್ದು ಯಾವದು ಎಂದು ಕೂಗಿ ಹೇಳಿದರು. [19]ಆಗ ಅವರು ತಮ್ಮ ತಲೆಗಳ ಮೇಲೆ ಮಣ್ಣನ್ನು ಹೊಯಿದುಕೊಂಡು ಅಳುತ್ತಾ ಗೋಳಾಡುತ್ತಾ - ಅಯ್ಯೋ, ಅಯ್ಯೋ, ಸಮುದ್ರದ ಮೇಲೆ ಹಡಗುಳ್ಳವರೆಲ್ಲರನ್ನು ತನ್ನ ಅಮೂಲ್ಯ ದ್ರವ್ಯಗಳಿಂದ ಐಶ್ವರ್ಯವಂತರನ್ನಾಗಿ ಮಾಡಿದ ಈ ಮಹಾ ಪಟ್ಟಣಕ್ಕೆ ಎಂಥಾ ಗತಿ ಬಂತು; ಇವಳು ಒಂದೇ ಗಳಿಗೆಯಲ್ಲಿ ಹಾಳಾದಳಲ್ಲಾ ಎಂದು ಕೂಗಿ ಹೇಳಿದರು. [20]ಪರಲೋಕವೇ, ಆನಂದಪಡು; ದೇವಜನರೇ, ಅಪೊಸ್ತಲರೇ, ಪ್ರವಾದಿಗಳೇ, ಇವಳು ನಿಮಗೆ ಅನ್ಯಾಯಮಾಡಿದ್ದಕ್ಕಾಗಿ ದೇವರು ಇವಳಿಗೆ ಪ್ರತಿದಂಡನೆಯನ್ನು ಮಾಡಿದ್ದರಿಂದ ಆನಂದಪಡಿರಿ ಎಂದು ಆ ಶಬ್ದ ಹೇಳಿತು.**

**ವಚನ 11.** ನಂತರ ಚಿತ್ರಿಸಲ್ಪಟ್ಟಿರುವವರು **ವರ್ತಕರು**, ಇವರು "ಅವಳಿಂದ ಐಶ್ವರ್ಯವಂತರಾದ"ವರು (ವ. 15). ಅವರು **ನಿಮಿತ್ತವಾಗಿ ಅತ್ತು ಗೋಳಾಡುತ್ತಾ - ನಮ್ಮ ಹಡಗುಗಳ ಸರಕುಗಳನ್ನು ಕೊಂಡುಕೊಳ್ಳುವವರು ಇನ್ನು ಇಲ್ಲವಲ್ಲಾ** ಎನ್ನುತ್ತಿದ್ದರು. ಈ

ದೃಶ್ಯವನ್ನು ತೂರ್ ಕುರಿತಾಗಿ ಯೆಹೆಜ್ಕೇಲನು ಪ್ರಲಾಪಿಸುವದರೊಂದಿಗೆ ಹೋಲಿಕೆ ಮಾಡಿರಿ (ಯೆಹೆಜ್ಕೇಲ 27). ಈ ವರ್ತಕರು ತಮ್ಮ ವ್ಯಾಪಾರದ ಪ್ರಮುಖ ಪಾಲುದಾರಳನ್ನು ಕಳೆದುಕೊಂಡಿದ್ದರು, ಮತ್ತು ಅವರಿಗೆ ಆರ್ಥಿಕ ನಾಶನವು ಎದುರಾಗಿತ್ತು. ಅವರು Ostiaದ ಹಡಗುಕಟ್ಟೆಯಲ್ಲಿ ನಿಂತುಕೊಂಡು ಅವರ ಸರಕುಗಳು ಉಗ್ರಾಣದಲ್ಲಿ ಕೊಳೆಯುತ್ತಿರುವಾಗ ಪೂರ್ವ ದಿಕ್ಕಿನೆಡೆಗೆ ನೋಡುತ್ತಿರುವಾಗ ರೋಮಿನಿಂದ ಹೊಗೆಯು ಏರುವದನ್ನು ಕಾಣುವದನ್ನು ಊಹಿಸಿಕೊಳ್ಳಿರಿ.

18ನೇ ಅಧ್ಯಾಯದಲ್ಲೆಲ್ಲಾ ಹರಿದಾಡುವ ಪ್ರಮುಖ ಚರ್ಚೆಯಾಂಶವು ಸ್ವಾರ್ಥವಾಗಿರುತ್ತದೆ. ರೋಮಿನ ಮನೋಭಾವವನ್ನು ಲೂಕ 16:19-31ರಲ್ಲಿರುವ ಐಶ್ವರ್ಯವಂತನಿಂದ, ಅಥವಾ ಲೂಕ 12:16-21ರಲ್ಲಿರುವ ಐಶ್ವರ್ಯವಂತನಾದ ಬುದ್ಧಿಹೀನನಿಂದ ದೃಷ್ಟಾಂತಪಡಿಸಬಹುದಾಗಿದೆ, ಆತನು ತನ್ನೊಳಗೆ ಹೀಗಂದುಕೊಂಡನು, "ನನ್ನ ಜೀವಾತ್ಮಕ್ಕೆ - ಜೀವವೇ, ಅನೇಕ ವರುಷಗಳಿಗೆ ಬೇಕಾದಷ್ಟು ಸರಕು ನಿನಗೆ ಬಿದ್ದದೆ; ವಿಶ್ರಮಿಸಿಕೋ, ಊಟಮಾಡು, ಕುಡಿ, ಸುಖಪಡು ಎಂದು ಹೇಳುವೆನು ಅಂದುಕೊಂಡನು" (ಲೂಕ 12:19). ಇವರಿಬ್ಬರೂ ಸ್ವಾರ್ಥದ ಬಗ್ಗೆಯೇ ಚಿಂತೆಯುಳ್ಳವರಾಗಿದ್ದರೇ, ಹೊರತು ಮತ್ತೊಬ್ಬರ ಬಗ್ಗೆಯಲ್ಲ. ರೋಮಿನ ವಿಷಯದಲ್ಲಿ ಸಹ ಅದೇ ಸತ್ಯವಾಗಿತ್ತು. ಮಾದರಿಯನ್ನು ತೋರುವ ಮೂಲಕ, ರೋಮ್ ನಗರಿಯು ಬೇರೆಯವರಿಗೆ ಸಹ ಸ್ವಾರ್ಥಿಗಳಾಗಿರುವಂತೆ ಕಲಿಸಿ ಕೊಟ್ಟಳು. ಹೀಗೆ, ಆಕೆಯು ಬಿದ್ದು ಹೋದಾಗ, ಆಕೆಯು ಯಾರನ್ನು ಮಿತ್ರರೆಂದು ಎಣಿಸಿಕೊಂಡಿದ್ದಳೋ ಅವರಿಗೆ ಆಕೆಯ ಬೀಳುವಿಕೆಗಿಂತಲೂ ಅಧಿಕವಾಗಿ ಅವಳ ಬಿದ್ದರೆ ತಮಗೆ ಹೇಗೆ ಬಾಧೆ ಉಂಟಾಗಬಹುದೆಂಬುದರ ಬಗ್ಗೆಯೇ ಕಳಕಳಿಯುಳ್ಳವರಾಗಿದ್ದರು (ನೋಡಿರಿ ವ. 17).

**ವಚನಗಳು 12, 13.** ರೋಮಿನ ಅವನತಿಯ ನಿಮಿತ್ತವಾಗಿ ಉಂಟಾದ ಆರ್ಥಿಕ ನಷ್ಟವು ವಿನಾಶಕಾರಿಯಾಗಿರುತ್ತಿತ್ತು. 12 ಮತ್ತು 13 ವಚನಗಳು ವಿಶ್ವದಲ್ಲೆಡೆಯಿಂದಲೂ ರೋಮಿನ ಬಂದರಿಗೆ ಬರುತ್ತಿದ್ದಂಥ ಸರಕುಗಳ ಒಂದು ನಮೂನೆಯನ್ನು ತೋರಿಸುತ್ತವೆ. ಈ ಕೆಳಗಿನ ಪಟ್ಟಿಯು ವರ್ತಕ-ರೀತಿಯ ಸರಕು-ತಪಶೀಲು ಪಟ್ಟಿಯಾಗಿದೆ:

> **ಚಿನ್ನ, ಬೆಳ್ಳಿ, ರತ್ನ, ಮುತ್ತು, ನಯವಾದ ನಾರುಮಡಿ, ಧೂಮ್ರವರ್ಣದ ವಸ್ತ್ರ, ರೇಶಿಮೆ, ರಕ್ತಾಂಬರ, ಸಕಲ ವಿಧವಾದ ಅಗಿಲುಮರ, ಸಕಲ ವಿಧವಾದ ಜಂತದ ಸಾಮಾನು, ಬಹು ಬೆಲೆಯುಳ್ಳ ಮರ, ತಾಮ್ರ, ಕಬ್ಬಿಣ, ಚಂದ್ರಕಾಂತ ಶಿಲೆ ಇವುಗಳಿಂದ ಮಾಡಿದ ಸಕಲ ವಿಧವಾದ ಪಾತ್ರೆ, ಲವಂಗಚೆಕ್ಕೆ, ರಕ್ತಬೋಳ, ಧೂಪ, ಸುಗಂಧತೈಲ, ಸಾಂಬ್ರಾಣಿ, ದ್ರಾಕ್ಷಾರಸ, ಎಣ್ಣೆ, ನಯವಾದ ಹಿಟ್ಟು, ಗೋದಿ, ದನ, ಕುರಿ, ಕುದುರೆ, ರಥ, ಗುಲಾಮ, ಮಾನುಷಪ್ರಾಣ ಇವೇ ಮೊದಲಾದ ನಮ್ಮ ಸರಕುಗಳು.**

ಪಟ್ಟಿ ಮಾಡಲಾಗಿರುವ ವಸ್ತುಗಳ ಕುರಿತಾಗಿ, ಮೂಲ ಗ್ರೀಕ್ ಪದಗಳು ಹಾಗೂ ನಿಖರವಾಗಿ ಅವುಗಳ ಅರ್ಥನೆಂಬುದು ಸೇರಿದಂತೆ, ಬಹಳಷ್ಟುನ್ನು ಹೇಳಬಹುದಾಗಿದೆ. ಉದಾಹರಣೆಗೆ, **ಅಗಿಲುಮರ** ξύλον θύϊνον (*xulon thuinon*) ಎಂಬುದು ಅದರಲ್ಲಿರುತ್ತಿದ್ದ ವಿಶಿಷ್ಟ ಗೆರೆಗಳ ರಚನೆಗಾಗಿ ಬಹಳ ಆಶಿಸುತ್ತಿದ್ದಂಥ ಆಮದು ಮಾಡಿಕೊಳ್ಳಲಾಗುತ್ತಿದ್ದ ಮರವಾಗಿತ್ತು. ಪುನಃ, **ರಥ** (ῥεδῶν, *rhedōn*) ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು ῥέδη (*rhedē*) ಎಂಬದರಿಂದ ಬಂದದ್ದಾಗಿದ್ದು, ಅತಿ ಶ್ರೀಮಂತರಿಗೋಸ್ಕರ ನಿರ್ಮಿಸಲಾಗುತ್ತಿದ್ದ ವಿಫುಲವಾಗಿ ಅಲಂಕೃತವಾದ ನಾಲ್ಕು ಚಕ್ರಗಳ ರಥವಾಗಿತ್ತು. ಹೇಗೂ, ಬಳಸಲ್ಪಟ್ಟಿರುವ ಆಂಗ್ಲ ಪದಗಳು ಪವಿತ್ರಾತ್ಮನ ಸಂದೇಶವನ್ನು ತಿಳಿಯಪಡಿಸುವದಕ್ಕೆ

ಸಾಕಾದಷ್ಟು ಸ್ಪಷ್ಟವಾಗಿರುತ್ತವೆ.

**ಚಿನ್ನ, ಜಂತದ ಮರ, ಬಹು ಬಲೆಯುಳ್ಳ ಮರ, ಲವಂಗಚೆಕ್ಕೆ,** ಮತ್ತು **ಗೋದಿ** ಇವುಗಳು ಉತ್ತರ ಆಫ್ರಿಕಾದಿಂದ ಬರುತ್ತಿದ್ದವು; **ರತ್ನ** ಮತ್ತು **ಮುತ್ತು**ಗಳು ಭಾರತದಿಂದ ಬರುತ್ತಿದ್ದವು; **ರೇಶಿಮೆ** ಮತ್ತು **ಲವಂಗಚೆಕ್ಕೆ** ಇವುಗಳು ಚೀನಾದಿಂದ ಬರುತ್ತಿದ್ದವು; **ತಾಮ್ರ**ವು ಕೊರಿಂಥದಿಂದ; **ಕಬ್ಬಿಣ** ಕಪ್ಪು ಸಮುದ್ರ ಹಾಗೂ ಸ್ಪೇನ್ ದೇಶದಿಂದ; **ಸಾಂಬ್ರಾಣಿ** ಮತ್ತು **ಧೂಪ**ಗಳು ಅರಬ್ಬಿಯದಿಂದ; **ಸುಗಂಧತೈಲ** ("ರಕ್ತಬೋಳ," NIV) ಮೇದ್ಯೆಯದಿಂದ; **ಕುದುರೆ**ಗಳು ಅರ್ಮೇನಿಯದಿಂದ; **ರಥ**ಗಳು ಗೌಲ್ ಎಂಬಲ್ಲಿಂದಲೂ ಬರುತ್ತಿದ್ದವು. ಹೇಗೂ, ಅವು ಯಾವ ದೇಶಗಳಿಂದ ಬರುತ್ತಿದ್ದವೆಂಬುದಕ್ಕಿಂತ ಹೆಚ್ಚು ಮಹತ್ವಪೂರ್ಣವಾಗಿರುವದು ಏನೆಂದರೆ ಪಟ್ಟಿ ಮಾಡಲಾಗಿರುವ ಬಹುಪಾಲು ವಸ್ತುಗಳು ವಿಲಾಸಿ ವಸ್ತುಗಳಾಗಿದ್ದವೆಂಬ ವಾಸ್ತವಾಂಶವೇ.

ಪಟ್ಟಿ ಮಾಡಲಾಗಿರುವ ವಸ್ತುಗಳು ಏಳು ವಿಭಾಗಗಳಿಗೆ ಸೇರಿರುತ್ತವೆ: (1) ಬೆಲೆ ಬಾಳುವ ಲೋಹಗಳು ಹಾಗೂ ರತ್ನಗಳು, (2) ಸುಂದರವಾದ ಉಡುಪುಗಳು, (3) ಬಹು ಬೆಲೆ ಬಾಳುವ ಮರಗಳು, (4) ಅಮೂಲ್ಯವೆಂದೆಣಿಸಿಕೊಳ್ಳುವ ಸಾಂಬಾರು ಪದಾರ್ಥಗಳು, (5) ನವೀನ ಮರಗಳು, (6) ದುಬಾರಿ ಸ್ವತ್ತುಗಳು, (7) ಗುಲಾಮರು. Frank Packನು ಇದನ್ನು "ಎಲ್ಲಾ ಸಾಹಿತ್ಯದಲ್ಲಿಯೇ ಒಂದು ಸಿರಿವಂತ ವರ್ತಕತ್ವದ ನಾಗರೀಕತೆಯ ಕುರಿತಾದ ಅತ್ಯಂಥ ಕಣ್ಣಿಗೆ ಕಟ್ಟಿದಂತೆ ವರ್ಣಿಸಲ್ಪಟ್ಟಿರುವ ಪ್ರಾಚೀನ ಚಿತ್ರಣಗಳಲ್ಲೊಂದಾಗಿದೆ."[28]

ರೋಮಿನ ನಿರ್ದಯಿ ಸ್ವಾರ್ಥತೆಯು ಸರಕುಗಳ ಪಟ್ಟಿಯಲ್ಲಿರುವ ಕಡೆಯ ವಸ್ತುಗಳಲ್ಲಿ ಬಹುಶಃ ಉತ್ತಮವಾಗಿ ಕಂಡು ಬರಬಹುದಾಗಿದೆ: **ಗುಲಾಮ, ಮಾನುಷಪ್ರಾಣ ... ಮೊದಲಾದ ಸರಕುಗಳು. ಗುಲಾಮ, ಮಾನುಷಪ್ರಾಣ ಇವೇ** (σωμάτων καὶ ψυχὰς ἀνθρώπων, *sōmatōn kai psuchas anthrōpōn*) ಎಂಬುದರ ಅಕ್ಷರಶಃ ಅನುವಾದವು "ಮನುಷ್ಯರ ದೇಹಗಳು ಹಾಗೂ ಆತ್ಮಗಳು" ಎಂದಾಗುತ್ತದೆ. "ಆತ್ಮಗಳು" ಎಂಬುದಕ್ಕಿರುವ ಗ್ರೀಕ್ ಪದವು *psuchas* ಎಂದಾಗಿದ್ದು, ಇದು ಕೆಲವು ಸಾರಿ "ಜೀವಗಳು" ಎಂದರ್ಥವನ್ನು ಕೊಡುತ್ತದೆ. ಗುಲಾಮರ ಮಾರುಕಟ್ಟೆಯು *somatemporas*, "ದೇಹಗಳು ಮಾರಾಟ ಮಾಡಲ್ಪಡುವ ಸ್ಥಳ" ಎಂದು ಕರೆಯಲ್ಪಡುತ್ತಿತ್ತು. ಇದು ಗುಲಾಮರ ಯಜಮಾನರು ತಾವು ಜನರನ್ನು, ದೇಹ ಹಾಗೂ ಆತ್ಮಗಳ ಒಡೆಯರು ಎಂದು ಭಾವಿಸಿಕೊಂಡಿದ್ದರೆಂಬ ವಾಸ್ತವಾಂಶವನ್ನು ಪ್ರತಿಫಲಿಸಬಹುದಾಗಿದೆ. Henry Sweteನು ಬರೆದದ್ದೇನೆಂದರೆ ದ್ವೇಷಬರಿತ ಪದಗಳ ಅರ್ಥವು "ಮಾನವ ಜಾನುವಾರುಗಳು" ಎಂದರ್ಥವನ್ನು ಕೊಡುತ್ತವೆ ಮತ್ತು ಶ್ರೀಮಂತರ ಬೃಹತ್ [ಮನೆಗಳಲ್ಲಿ] ನೇಮಿಸಿಕೊಳ್ಳಲ್ಪಟ್ಟಿರುತ್ತಿದ್ದ, [ವೇಶ್ಯಾಗೃಹಗಳಲ್ಲಿ] ತುಂಬಿರುತ್ತಿದ್ದ, ಮತ್ತು ಚಂದ್ರಾಂಗಣದಲ್ಲಿನ ನಿರ್ದಯಿ ಸಂತೋಷಗಳನ್ನು ತೃಪ್ತಿಪಡಿಸುತ್ತಿರುತ್ತಿದ್ದ ಮಾನವ ಪ್ರಾಣದ ಯಜ್ಞವನ್ನು[29] ಸೂಚಿಸುತ್ತದೆ.

Martin Franzmannನು ಇದನ್ನು "ಗುಲಾಮಗಿರಿಯ ಕುರಿತು ಹೊಸ ಒಡಂಬಡಿಕೆಯಲ್ಲಿ ಮಾತಾಡಲಾಗಿರುವ ಅತ್ಯಂಥ ಕಠೋರವಾದ ಮಾತು" ಎಂದು ಕರೆಯುತ್ತಾ ವಾಕ್ಯಭಾಗವು "ಈ ದುಬಾರಿ ಪ್ರದರ್ಶನದ ಆಧಾರವಾಗಿರುವ ಮೃಗೀಯತೆಯನ್ನು ಗುರುತು"[30] ಒದಗಿಸುತ್ತದೆ. ರೋಮನ್ ಸಾಮ್ರಾಜ್ಯದಲ್ಲಿ ಜೀವಕ್ಕೆ ಅಷ್ಟೊಂದು ಅಗ್ಗದ ಬೆಲೆಯಿತ್ತು.

> ರೋಮಿನ ಜನಸಂಖ್ಯೆಯೊಳಗೆ ಮೂರರಲ್ಲಿ ಒಂದು ಭಾಗವು ಗುಲಾಮತನದಲ್ಲಿತ್ತೆಂದು ಅಂದಾಜು ಮಾಡಲಾಗಿರುತ್ತದೆ; ಸಾಮ್ರಾಜ್ಯದ ಬೃಹತ್ ಗುಲಾಮರ ಮಾರುಕಟ್ಟೆಗಳಲ್ಲಿ *ಒಂದೇ ದಿನದಲ್ಲಿ* 10,000 ಮಾನವ ಜೀವಿಗಳು ಹರಾಜು ಹಾಕಲ್ಪಡುವದು ಅಸಹಜವಾದದ್ದೇನೂ ಆಗಿರಲಿಲ್ಲ. ಸಾಮ್ರಾಜ್ಯದುದ್ದಕ್ಕೂ ಸುಮಾರು 60 ದಶಲಕ್ಷ

ಗುಲಾಮರು ಇದ್ದರು, ಇವರು ಪೀಠೋಪಕರಣಗಳಂತೆ ಖರೀದಿಸಲ್ಪಡುತ್ತಿದ್ದ ಹಾಗೂ ಮಾರಲ್ಪಡುತ್ತಿದ್ದ, ಬಳಕೆ ಮಾಡಲ್ಪಡುತ್ತಿದ್ದಂತ ಮತ್ತು ದಬ್ಬಾಳಿಕೆಗೆ ಗುರಿಯಾಗುತ್ತಿದ್ದಂಥ ಜನರಾಗಿದ್ದರು.[31]

**ವಚನ 14.** ಶಬ್ದವು ಮುಂದುವರೆದು ಹೇಳಿದ್ದೇನೆಂದರೆ, **ಬಾಬೆಲೇ, ನಿನ್ನ ಜೀವವು ಅಪೇಕ್ಷಿಸಿದ ಹಣ್ಣುಹಂಪಲುಗಳು ನಿನ್ನನ್ನು ಬಿಟ್ಟುಹೋದವು; ಸೊಗಸಾಗಿಯೂ ಶೋಭಾಯಮಾನವಾಗಿಯೂ ಇರುವದೆಲ್ಲವೂ ನಾಶವಾಗಿ ನಿನ್ನನ್ನು ಬಿಟ್ಟುಬಿಟ್ಟವು. ಅವು ಇನ್ನು ಮೇಲೆ ಜನರಿಗೆ ಸಿಕ್ಕುವದೇ ಇಲ್ಲ.** ರೋಮ್ ನಗರಿಗೆ ನೂತನ ಹಾಗೂ ವಿಭಿನ್ನ ಸಂಗತಿಗಳಿಗಾಗಿ ತಣಿಸಲಾಗದಂಥ ಹಸಿವೆಯನ್ನು ಹೊಂದಿತ್ತು. **ಹಣ್ಣುಹಂಪಲು** ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವಾದ ὀπώρα (*opōra*) ಎಂಬುದು ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಕಂಡು ಬರುತ್ತದೆ. ಇದು ಕಾಲದ ಉತ್ತುಂಗತೆಯಲ್ಲಿ ಲಭ್ಯವಿರುತ್ತಿದ್ದ ಪಕ್ವವಾಗಿರುವ ಅಥವಾ ರಸಭರಿತ ಹಣ್ಣುಗಳನ್ನು ಸೂಚಿಸುತ್ತದೆ. **ಸೊಗಸಾಗಿಯೂ** ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದ λιπαρός (*liparos*) ಎಂಬುದು ಬಹುಶಃ ನವೀನ ಆಹಾರಗಳನ್ನು ಸೂಚಿಸಬಹುದಾಗಿದೆ. ಈ ಪದವು ಈ ಮುಂಚೆ ಅಧ್ಯಾಯದಲ್ಲಿ ಕಾಣಿಸಿಕೊಂಡ "ಸುಖಭೋಗ" ಅಥವಾ "ವಿಲಾಸ" ಎಂಬವುಗಳಿಗೆ ಸಂಬಂಧ ಪಟ್ಟ ಪದಗಳ ಗುಂಪುಗಳಿಂದಲ್ಲದೆ ಬೇರೆ ಪದಗಳ ಗುಂಪಿನಿಂದ ಬರುತ್ತದೆ (ವ. 7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಗ್ರೀಕ್ ಪದವಾದ *liparos* ಎಂಬುದು ಅಕ್ಷರಶಃ "ಕೊಬ್ಬಿನ ಪದಾರ್ಥಗಳನ್ನು" ಸೂಚಿಸುತ್ತದೆ, ಆದರೆ ಅದಕ್ಕೆ ಬೇರೆ ಬೇರೆ ತರ್ಜುಮೆಗಳಲ್ಲಿ ವ್ಯಾಪಕ ವಿಧವಾದ ಆಂಗ್ಲ ಪದಗಳ ಅರ್ಥವನ್ನು ಕೊಡಲಾಗಿರುತ್ತದೆ. ***ಶೋಭಾಯಮಾನ*** ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು λαμπρά (*lampra*) ಎಂದಾಗಿದ್ದು, ಡಾಂಭಿಕ ಪ್ರದರ್ಶನಕ್ಕಾಗಿ ಧರಿಸಿಕೊಂಡಿರುವ ಉಡುಪುಗಳು ಹಾಗೂ ಆಭರಣಗಳನ್ನು ಸೂಚಿಸಬಹುದಾಗಿದೆ. ಈ ಗ್ರೀಕ್ ಪದವು "ಹೊಳೆಯುವಂಥದ್ದ"ನ್ನು ಸೂಚಿಸಿ ಮಾತಾಡುತ್ತದೆ.

14ನೇ ವಚನವು ನಮಗೆ ಗತಿಸಿ ಹೋಗುವಂಥದ್ದಾಗಿದ್ದ ರೋಮಿನ "ಥಳಕು ಹಾಗೂ ಮನಮೋಹಕತೆ" (NEB) ಯನ್ನು ಜ್ಞಾಪಿಸುತ್ತದೆ. ಅಮೆರಿಕದ ಕವಿಯಾದ Edgar Allan Poeನು "ಮಹಾವೈಭವವಾದ ರೋಮಿನ"[32] ಕುರಿತು ಬರೆಯುತ್ತಾನೆ. E. A. Judgeನು ಹೀಗೆ ಬರೆದನು,

> ಹೊಸ ಒಡಂಬಡಿಕೆಯ ಕಾಲಗಳಲ್ಲಿ ರೋಮ್ ನಗರವು ತನ್ನ ಬೆಳವಣಿಗೆಯ ಪೂರ್ಣ ಹುರುಪಿನಲ್ಲಿದ್ದಳು ... ಕುಲೀನ ವರ್ಗವು ... ಮೂರು ಖಂಡಗಳಲ್ಲಿ ದೊರೆತ ಲಾಭಗಳನ್ನು ಉಪನಗರದ ಬೃಹತ್ ಮನೆಗಳಲ್ಲಿ ಹಾಗೂ ಗ್ರಾಮದ ತೋಟಗಳಲ್ಲಿ ಯಥೇಚ್ಛವಾಗಿ ಖರ್ಚು ಮಾಡುತ್ತಿದ್ದರು. ಕೈಸರರು ... ಬಹುಶಃ ಯಾವದೇ ರಾಜಧಾನಿಯಲ್ಲಿಯೂ ಸರಿಸಾಟಿಯಿಲ್ಲದಂತೆ ನಗರ ಹೃದಯ ಭಾಗವನ್ನು ಸಾಲು ಸಾಲಾದ ಸಾರ್ವಜನಿಕ ಕಟ್ಟಗಳನ್ನು ನಿರ್ಮಿಸಿ ಶೃಂಗರಿಸಿದ್ದರು.[33]

ಇತಿಹಾಸಕಾರರು ರೋಮಿನ ದುಂದುಗಾರಿಕೆಯ ಕುರಿತಾಗಿ ದಾಖಲಿಸಿರುವ ಕಥೆಗಳು ಹೆಚ್ಚುಕಡಿಮೆ ನಂಬುವದಕ್ಕೂ ಆಗದಂಥವುಗಳಾಗಿವೆ:

> Neroಚಕ್ರವರ್ತಿಯು ಏರ್ಪಡಿಸಿದ್ದ ಒಂದು ಔತಣ ಕೂಟದಲ್ಲಿ ಐಗುಪ್ತ್ಯದೇಶದಿಂದ ತರಿಸಲಾಗಿದ್ದ ಗುಲಾಬಿ ಹೂಗಳ ವೆಚ್ಚ ಮಾತ್ರವೇ ಸುಮಾರು $100.000 ರಷ್ಟಾಗಿತ್ತು. Vitelliusನು ನವಿಲಿನ ಮೆದಳುಗಳು ಹಾಗೂ ಕೋಗಿಲೆಯ ನಾಲಿಗೆಗಳಿಂದ

> ತಯಾರಿಸಲಾಗಿರುತ್ತಿದ್ದ ಭಕ್ಷ್ಯಗಳ ಬಗ್ಗೆ ಖಯಾಲಿಯನ್ನು ಬೆಳೆಸಿಕೊಂಡಿದ್ದನು. ಆತನ ಒಂದು ವರ್ಷಕ್ಕಿಂತಲೂ ಕಡಿಮೆ ಅವಧಿಯ ಆಳ್ವಿಕೆಯಲ್ಲಿ ಆತನು $20,000,000ರಷ್ಟು ಹಣವನ್ನು, ಅಧಿಕವಾಗಿ ಆಹಾರಕ್ಕಾಗಿಯೇ ಖರ್ಚು ಮಾಡಿದ್ದನು. ಒಬ್ಬ ರೋಮನ್ ವ್ಯಕ್ತಿಯು ಅತ್ಯಧಿಕವಾದ ಸಂಪತ್ತನ್ನು ಪೋಲು ಮಾಡಿದ ಬಳಿಕ, ತನ್ನಲ್ಲಿ ಬಿಡಿ ಕಾಸು ಮಾತ್ರವೇ - ಸುಮಾರು $300,000 - ಉಳಿಯಿತೆಂಬ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿದ್ದನು. ತಾಲ್ಮಡ್‌ನಲ್ಲಿ ಹೀಗೆ ಬರೆಯಲಾಗಿರುತ್ತದೆ, "ಲೋಕದೊಳಗೆ ಹತ್ತು ಪ್ರಮಾಣಗಳಲ್ಲಿ ಐಶ್ವರ್ಯವು ಬಂದಿತು: ರೋಮ್ ಒಂಭತ್ತನ್ನು ಪಡೆದುಕೊಂಡಿತು, ಮತ್ತು ಇಡೀ [ಉಳಿದ] ಲೋಕವೆಲ್ಲಾ ಒಂದನ್ನು ಮಾತ್ರವೇ ಪಡೆದುಕೊಂಡಿತು."[34]

ಪ್ರಾಚೀನ ಲೇಖಕನಾದ Livyನು ಹಣದಾಹ ಹಾಗೂ ವಿಲಾಸಗಳನ್ನು "ಎಂದೆಂದಿಗೂ ಪ್ರತಿಯೊಂದು ಮಹಾನ್ ದೇಶದ ಧ್ವಂಸವಾಗಿರುವ ಪೀಡೆಗಳು"[35] ಎಂದು ಕರೆದನು. ಪೌಲನು ಕೆಲವರನ್ನು "ದೇವರನ್ನು ಪ್ರೀತಿಸದೆ ಭೋಗಗಳನ್ನೇ ಪ್ರೀತಿಸುವವರೂ" ಎಂದು ಬಣ್ಣಿಸುತ್ತಾನೆ (2 ತಿಮೊಥೆ 3:4). ಇಬ್ಬರೂ ಲೇಖಕರು ರೋಮಿನ ನಾಗರಿಕರನ್ನ ಮನಸ್ಸಿನಲ್ಲಿಟ್ಟುಕೊಂಡು ಹೇಳಿರಬಹುದಾಗಿದೆ.

**ವಚನ 15.** ಶಬ್ದವು ಮುಂದಕ್ಕೆ ಹೇಳಿದ್ದೇನೆಂದರೆ, **ಆ ಸರಕುಗಳನ್ನು ಮಾರಿ ಅವಳಿಂದ ಐಶ್ವರ್ಯವಂತರಾದ ವರ್ತಕರು ಅವಳ ಯಾತನೆಯನ್ನು ನೋಡಿ ಭಯಪಟ್ಟು ದೂರದಲ್ಲಿ ನಿಂತು ಗೋಳಾಡುತ್ತಾ ದುಃಖಿಸುತ್ತಾ** ಇದ್ದರು. ರಾಜರ ರೀತಿಯಲ್ಲಿಯೇ (ವ. 10), **ವರ್ತಕರು ದೂರದಲ್ಲಿ** ನಿಂತಿದ್ದರು. ಪುನಃ, ರಾಜರ ರೀತಿಯಲ್ಲಿಯೇ, ಇವರು ಸಹ **ಅವಳ ಯಾತನೆಯನ್ನು ನೋಡಿ ಭಯ ಪಟ್ಟು** ಆ ರೀತಿ ಮಾಡಿದರು. ಅವರು ಬಹಳ ಸಮೀಪಕ್ಕೆ ಹೋದರೆ ಆಕೆಗಾಗುವ ದಂಡನೆಯಲ್ಲಿ ಪಾಲುಗಾರರಾಗಬೇಕಾಗಿ ಬಂದೀತು ಎಂಬ ಭಯ ಇತ್ತು.

**ವಚನ 16.** ಸುರಕ್ಷಿತವಾದ ಅಂತರದಲ್ಲಿ ನಿಂತುಕೊಂಡವರಾಗಿ, ವರ್ತಕರು ಹೀಗೆ ಗೋಳಾಡಿದರು, **ಅಯ್ಯೋ, ಅಯ್ಯೋ, ... ಈ ಮಹಾ ಪಟ್ಟಣಕ್ಕೆ ಏನು ದುರ್ಗತಿ ಸಂಭವಿಸಿತು**. ಅವರು ರೋಮ್ ನಗರಿಯನ್ನು "ಒಬ್ಬ ರಾಣಿ"ಗೆ (ವ. 7) ಹೋಲಿಕೆ ಮಾಡುತ್ತಾರೆ, **ನಯವಾದ ನಾರುಮಡಿಯನ್ನೂ ಧೂಮ್ರವರ್ಣದ ವಸ್ತ್ರಗಳನ್ನೂ ರಕ್ತಾಂಬರವನ್ನೂ ಧರಿಸಿಕೊಂಡು ಚಿನ್ನ ರತ್ನ ಮುತ್ತು ಇವುಗಳಿಂದ ತನ್ನನ್ನು ಅಲಂಕರಿಸಿಕೊಂಡಿದ್ದ**ವಳು. ಮುತ್ತುಗಳು ವಿಶೇಷವಾಗಿ ಪ್ರಾಚೀನ ಜಗತ್ತಿನಲ್ಲಿ ಅತ್ಯಂತ ಅಮೂಲ್ಯವೆಂದೆಣಿಸಲ್ಪಡುತ್ತಿದ್ದವು (ನೋಡಿರಿ 21:21).

**ವಚನ 17.** ರೋಮಿನ ಬೀಳುವಿಕೆಯು ಏಕಾಏಕಿ ಸಂಭವಿಸಿದ್ದು ವರ್ತಕರಿಗೆ ಆಘಾತವನ್ನುಂಟು ಮಾಡಿತ್ತು: **ಅಷ್ಟು ಐಶ್ವರ್ಯವು ಒಂದೇ ಗಳಿಗೆಯಲ್ಲಿ ನಾಶವಾಯಿತಲ್ಲಾ.** 17ನೇ ಅಧ್ಯಾಯವು ಗೋಳಾಡುತ್ತಿ ಮೂರನೆಯ ವರ್ಗದವರನ್ನು ಸೇರ್ಡೆಗೊಳಿಸುತ್ತದೆ. ರಾಜರು ತಮ್ಮ *ಶಕ್ತಿ*ಯು ನಷ್ಟವಾಗಿ ಹೋಗಿರುವದಕ್ಕಾಗಿ ಕಳಕಳಿ ಹೊಂದಿದ್ದರು, ಅದೇ ವೇಳೆಯಲ್ಲಿ ವರ್ತಕರು *ಲಾಭಗಳು* ನಷ್ಟಪಡಿಸಿಕೊಂಡೆವಲಾ ಎಂದು ಚಿಂತಿತರಾಗಿದ್ದರು. ಈ ಮೂರನೆಯ ಗುಂಪಿನವರು ತಮ್ಮ *ಸ್ಥಾನ* ನಷ್ಟವಾಯಿತಲ್ಲಾ ಎಂದು ಕಳಕಳಿಯಿಂದಿದ್ದರು; ರೋಮಿನ ಬೀಳುವಿಕೆಯು ಅವರ ಉದ್ಯೋಗಗಳನ್ನು ಸಂಕಷ್ಟಕ್ಕೀಡು ಮಾಡಿತ್ತು: **ಇದಲ್ಲದೆ ಹಡಗುಗಳ ಯಜಮಾನರೂ ಸಮುದ್ರಪ್ರಯಾಣ ಮಾಡುವವರೂ ನಾವಿಕರೂ ಸಮುದ್ರದ ಮೇಲೆ ಕೆಲಸವನ್ನು ನಡಿಸಿ ಜೀವನ ಮಾಡುವವರೆಲ್ಲರೂ ದೂರದಲ್ಲಿ ನಿಂತು** ಇದ್ದರು.

ಈ ಗುಂಪಿನವರು ತಮ್ಮ ಸರಕುಗಳನ್ನಿಟ್ಟುಗೊಂಡು ನಿಂತಿದ್ದ ಎರಡನೆಯ ಗುಂಪಿನೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿದ್ದರು. **ಹಡಗಿನ ಯಜಮಾನರು** ಎಂಬುದನ್ನು ಅನುವಾದಿಸಿರುವ κυβερνήτης (*kubernētēs*) ಎಂಬ ಗ್ರೀಕ್ ಪದವು, ಹಡಗಿನ

ಯಜಮಾನನನ್ನು ಸೂಚಿಸುವದಕ್ಕಿಂತಲೂ ಹಡಗನ್ನು ನಡಿಸುವವನು ಅಥವಾ ನೌಕಾಚಾಲಕನನ್ನು ಸೂಚಿಸುತ್ತದೆ. ಮೂಲ ವಾಕ್ಯದೊಳಗೆ **ಸಮುದ್ರಪ್ರಯಾಣ ಮಾಡುವವರು** ಎಂಬುದರ ಸ್ಥಾನದಲ್ಲಿ "ಒಂದು ಸ್ಥಳಕ್ಕೆ ಸಮುದ್ರಯಾನ ಮಾಡುತ್ತಿದ್ದ ಪ್ರತಿಯೊಬ್ಬರು" (πᾶς ὁ ἐπὶ τόπον πλέων, *pas ho epi topon pleōn*) ಎಂದಿರುತ್ತದೆ. ಸಮುದ್ರಪ್ರಯಾಣ ಮಾಡುವವರ ಜೊತೆಯಲ್ಲಿ ಇದರೊಳಗೆ ಸರಕುಗಳ ಜೊತೆಗೆ ಬರುತ್ತಿದ್ದವರು ಹಾಗೂ ಬಹುಶಃ ಇನ್ನಿತರರು ಸಹ ಸೇರಿರಬಹುದಾಗಿದೆ. **ಸಮುದ್ರದ ಮೇಲೆ ಕೆಲಸವನ್ನು ನಡಿಸಿ ಜೀವನ ಮಾಡುವವರೆಲ್ಲರೂ** ಎಂದರೆ ಅವರೊಳಗೆ ಹಡಗು ನಿರ್ಮಾಣಿಕರು, ಬೇಸ್ತರು, ಮುತ್ತುಗಳಿಗೆ ಸಮುದ್ರದಾಳದಲ್ಲಿ ಹುಡುಕುವವರು, ಮತ್ತು ಇನ್ನಿತರರು ಸೇರಿರುತ್ತಿದ್ದರು. ರಾಜರು (ವ. 10) ಮತ್ತು ವರ್ತಕರು (ವ. 15) ಮಾಡಿದ್ದ ರೀತಿಯಲ್ಲಿಯೇ, ಈ ಗುಂಪು **ದೂರದಲ್ಲಿ ನಿಂತುಕೊಂಡಿದ್ದರು**.

**ವಚನ 18.** ಈ ನಾವಿಕರು **ಅವಳ ದಹನದಿಂದೇರುವ ಹೊಗೆಯನ್ನು ನೋಡುತ್ತಾ - ಈ ಮಹಾ ಪಟ್ಟಣಕ್ಕೆ ಸಮಾನವಾದದ್ದು ಯಾವದು ಎಂದು ಕೂಗಿ ಹೇಳಿದರು**. ಪ್ರಶ್ನೆ ಮಾಡುತ್ತಿರುವವರು ನಂಬದವರಾಗಿ ಮೂಕವಿಸ್ಮಿತರಾಗಿದ್ದರು. ಪ್ರಪಂಚನ್ನು ಆಳ್ವಿಕೆ ಮಾಡಿದ ಈ ಅವಿನಾಶನಕಾರಿ ಪಟ್ಟಣಕ್ಕೆ ಹೇಗೆ ಒಂದು ದುರಂತವು ಅಪ್ಪಳಿಸುವದಕ್ಕೆ ಸಾಧ್ಯವಾಯಿತು? ಅಧ್ಯಾಯದುದ್ದಕ್ಕೂ, ರೋಮ್ ನಗರವು ಬೆಂಕಿ ಹಾಗೂ ಹೊಗೆಯಿಂದ ಆವರಿಸಿಕೊಳ್ಳಲ್ಪಟ್ಟ ನಗರ ಎಂದು ಚಿತ್ರಿಸಲ್ಪಟ್ಟಿರುತ್ತದೆ (ವಚನಗಳು 8, 9). ಅಂಥ ಒಂದು ಚಿತ್ರಣವು ದೇವರಿಂದ ಬರುವ ನ್ಯಾಯತೀರ್ಪಿಗೆ ಒಂದು ತಕ್ಕದಾದ ಸಂಕೇತವಾಗಿರುತ್ತದೆ. **ಈ ಮಹಾ ಪಟ್ಟಣಕ್ಕೆ ಸಮಾನವಾದದ್ದು ಯಾವದು?** ಎಂಬ ಪ್ರಶ್ನೆಯು ಯೆಹೆಜ್ಕೇಲ 27:32ರಲ್ಲಿರುವ "ತೂರಿಗೆ ಯಾವದು ಸಮಾನ?" ಎಂಬ ಪ್ರಶ್ನೆಯನ್ನು ಜ್ಞಾಪಿಸುತ್ತದೆ.

**ವಚನ 19. ಆಗ ಅವರು ತಮ್ಮ ತಲೆಗಳ ಮೇಲೆ ಮಣ್ಣನ್ನು ಹೊಯಿದುಕೊಂಡು ಅಳುತ್ತಾ ಗೋಳಾಡುತ್ತಾ - ಅಯ್ಯೋ, ಅಯ್ಯೋ, ಸಮುದ್ರದ ಮೇಲೆ ಹಡಗುಳ್ಳವರೆಲ್ಲರನ್ನು ತನ್ನ ಅಮೂಲ್ಯ ದ್ರವ್ಯಗಳಿಂದ ಐಶ್ವರ್ಯವಂತರನ್ನಾಗಿ ಮಾಡಿದ ಈ ಮಹಾ ಪಟ್ಟಣಕ್ಕೆ ಎಂಥಾ ಗತಿ ಬಂತು; ಇವಳು ಒಂದೇ ಗಳಿಗೆಯಲ್ಲಿ ಹಾಳಾದಳಲ್ಲಾ ಎಂದು ಕೂಗಿ ಹೇಳಿದರು.** ತಲೆಗಳ ಮೇಲೆ ಮಣ್ಣನ್ನು ಎಸೆದುಕೊಳ್ಳುವದು ಶೋಕವನ್ನು ಸೂಚಿಸುವ ಪ್ರಾಚೀನ ಸಂಕೇತವಾಗಿದ್ದು (ನೋಡಿರಿ ಯೆಹೆಜ್ಕೇಲ 27:30) ಬಟ್ಟೆಗಳನ್ನು ಹರಿದುಕೊಳ್ಳುವದರ ರೀತಿಯಲ್ಲಿಯೇ ಇರುತ್ತದೆ (ಅಪೊಸ್ತಲರ ಕೃತ್ಯಗಳು 14:14). ಇಂದು ಬಹಳಷ್ಟು ಜನರು ಈ ಸಂಕೇತಗಳನ್ನ ಬಳಸುವದಿಲ್ಲ, ಆದರೆ ಪ್ರತಿಯೊಂದು ಸಮಾಜಕ್ಕೆ ತನ್ನದೇ ಆಗಿರುವ ಶೋಕದ ಸಂಕೇತಗಳಿರುತ್ತವೆ, ಉದಾಹರಣೆಗೆ ಕೆಲವೊಂದು ಸಮಾಜಗಳನ್ನು ಕಪ್ಪು ಬಟ್ಟೆಯನ್ನು ಧರಿಸುತ್ತಾರೆ.

9ರಿಂದ 19 ವಚನಗಳಲ್ಲಿ ಪಟ್ಟಿ ಮಾಡಲಾಗಿರುವ ಮೂರು ಗುಂಪುಗಳು (ರಾಜರು, ವರ್ತಕರು, ಮತ್ತು ನಾವಿಕರು) ರೋಮಿನೊಂದಿಗೆ ಸಹವಾಸದಿಂದ ಲಾಭವನ್ನು ಮಾಡಿಕೊಂಡಿದ್ದವರನ್ನು ಪ್ರತಿನಿಧಿಸುತ್ತವೆ (13:15, 16) - ಮೂಲಭೂತವಾಗಿ, ಕ್ರೈಸ್ತರನ್ನು ಹೊರತು ಪಡಿಸಿ ಮಿಕ್ಕ ಎಲ್ಲರೂ ಆಗಿದ್ದರು. ರೋಮ್ ನಗರವು ಬಿದ್ದು ಹೋದಾಗ, ಅದು ಇಡೀ ಲೋಕಕ್ಕೆ ಗೊತ್ತಾಗಲಿರುವದು.

**ವಚನ 20.** ರೋಮಿನ ರಾಜಕೀಯ ಹಾಗೂ ವ್ಯಾಪಾರದ ಪಾಲುದಾರರು ಗೋಳಾಡುತ್ತಿದ್ದ ಹಾಗೆ, ಒಂದು ಗುರುತಿಸಲಾಗದ ಶಬ್ದವು ಹೀಗೆ ಮಾತಾಡಿತು: **ಪರಲೋಕವೇ, ಆನಂದಪಡು; ದೇವಜನರೇ, ಅಪೊಸ್ತಲರೇ, ಪ್ರವಾದಿಗಳೇ, ಇವಳು ನಿಮಗೆ ಅನ್ಯಾಯಮಾಡಿದ್ದಕ್ಕಾಗಿ ದೇವರು ಇವಳಿಗೆ ಪ್ರತಿದಂಡನೆಯನ್ನು ಮಾಡಿದ್ದರಿಂದ ಆನಂದಪಡಿರಿ ಎಂದು ಆ ಶಬ್ದ ಹೇಳಿತು.** ಕೆಲವು

ತರ್ಜುಮೆಗಳ ರಚನೆಯು ಈ ಮಾತುಗಳನ್ನು ನಾವಿಕರು ಹೇಳಿದರೆನೋ ಎಂಬಂತೆ ತೋರುವ ಹಾಗೆ ಮಾಡುತ್ತದೆ, ಆದರೆ ಅಂಥ ಜನರು ಈ ವಿಧವಾದ ಮಾತುಗಳನ್ನಾಡುವದು ಅಸಂಭವವಾಗಿರುತ್ತದೆ. **ದೇವಜನರೇ, ಅಪೊಸ್ತಲರೇ,** ಮತ್ತು **ಪ್ರವಾದಿಗಳೇ** ಎಂಬ ಪದಗಳು ತಮ್ಮ ನಂಬಿಕೆಯ ನಿಮಿತ್ತವಾಗಿ ಮರಣಿಸಿದ್ದ ಕ್ರೈಸ್ತರನ್ನು ಸೂಚಿಸುತ್ತವೆ (ವ. 24). ಪ್ರೇರಿತವಲ್ಲದ ಸಂಪ್ರದಾಯದ ಪ್ರಕಾರ, ಪ್ರಕಟನೆ ಪುಸ್ತಕವು ಬರೆಯಲ್ಪಡುತ್ತಿದ್ದ ವೇಳೆಯಲ್ಲಿ, ಯೋಹಾನನನ್ನು ಹೊರತು ಪಡಿಸಿ ಮಿಕ್ಕ ಅಪೊಸ್ತಲರೆಲ್ಲರೂ ಕೊಲ್ಲಲ್ಪಟ್ಟಿದ್ದರು.

**ನಿಮಗೆ ಅನ್ಯಾಯಮಾಡಿದ್ದಕ್ಕಾಗಿ ಇವರು ಇವಳಿಗೆ ಪ್ರತಿದಂಡನೆ ಮಾಡಿದ್ದಕ್ಕಾಗಿ** ಎಂಬುದನ್ನು ಅನುವಾದಿಸಿರುವ ಪದಗುಚ್ಛವು ಮೂಲವಾಕ್ಯದಲ್ಲಿ ಕಷ್ಟಕರವಾಗಿರುತ್ತದೆ, ಆದರೆ ಸ್ಥಳೀಯ ನ್ಯಾಯಾಲಯದಲ್ಲಿ (ರೋಮ್) ತೀರ್ಪನ್ನು ಉಚ್ಛ ನ್ಯಾಯಾಲಯವು (ದೇವರು) ಹಿಮ್ಮೊಗವಾಗಿ ತಿರುಗಿದ್ದನೆಂಬ ವಿಚಾರವು ಇಲ್ಲಿರುವದಾಗಿ ತೋರುತ್ತದೆ. ಈ ವಿಧವಾದ ತೀರ್ಪಿಗೆ ಒಂದು ಹಳೆಯ ಒಡಂಬಡಿಕೆಯಲ್ಲಿನ ಉದಾಹರಣೆಗಾಗಿ, ನೋಡಿರಿ ಧರ್ಮೋಪದೇಶಕಾಂಡ 19:16–21. ರೋಮ್ ನಗರಿಯು ಕ್ರೈಸ್ತರ ಮೇಲೆ ನೀಡಿದ್ದ ತೀರ್ಪು ಈಗ ಆಕೆಯೇ ಮೇಲೆಯೇ ಘೋಷಿಸಲ್ಪಟ್ಟಿತ್ತು. ಇದು "ಇನ್ನು ಎಷ್ಟು ಕಾಲ?" (6:9–11) ಎಂಬ ರಕ್ತಸಾಕ್ಷಿಗಳ ಕೂಗಿಗೆ ಇಂದು ಅಂತಿಮವಾದ ಉತ್ತರವಾಗಿರುತ್ತದೆ.

## ದೇವದೂತನು ಮುಂತಿಳಿಸುವಿಕೆ (18:21-24)

**[21]ಆಗ ಬಲಿಷ್ಠನಾದ ಒಬ್ಬ ದೇವದೂತನು ದೊಡ್ಡ ಬೀಸುವ ಕಲ್ಲಿನಂತಿರುವ ಒಂದು ಕಲ್ಲನ್ನು ಎತ್ತಿ ಸಮುದ್ರದೊಳಗೆ ಹಾಕಿ - ಮಹಾ ಪಟ್ಟಣವಾದ ಬಾಬೆಲು ಹೀಗೆಯೇ ದಡದಡನೆ ಕೆಡವಲ್ಪಟ್ಟು ಇನ್ನೆಂದಿಗೂ ಕಾಣಿಸುವದಿಲ್ಲ. [22]ಬಾಬೆಲೇ, ನಿನ್ನಲ್ಲಿ ವೀಣೆಗಾರರೂ ವಾದ್ಯಗಾರರೂ ಕೊಳಲೂದುವವರೂ ತುತೂರಿಯವರೂ ಮಾಡುವ ಧ್ವನಿಯು ಇನ್ನೆಂದಿಗೂ ಕೇಳಿಸುವದಿಲ್ಲ. ಯಾವ ವಿಧವಾದ ಕೈಗಾರಿಕೆಯನ್ನು ಮಾಡುವವರು ನಿನ್ನಲ್ಲಿ ಇನ್ನೆಂದಿಗೂ ಸಿಕ್ಕುವದಿಲ್ಲ. ಬೀಸುವ ಕಲ್ಲಿನ ಶಬ್ದವು ನಿನ್ನಲ್ಲಿ ಇನ್ನೆಂದಿಗೂ ಕೇಳಿಸುವದಿಲ್ಲ. [23]ದೀಪದ ಬೆಳಕು ನಿನ್ನಲ್ಲಿ ಇನ್ನೆಂದಿಗೂ ಕಾಣಿಸುವದಿಲ್ಲ. ವಧೂವರರ ಸ್ವರವು ಇನ್ನೆಂದಿಗೂ ಕೇಳಿಸುವದಿಲ್ಲ. ನಿನ್ನ ವರ್ತಕರು ಭೂಮಿಯ ಪ್ರಭುಗಳಾಗಿದ್ದರಲ್ಲವೇ. ನಿನ್ನ ಮಾಟದಿಂದ ಎಲ್ಲಾ ಜನಾಂಗದವರು ಮರುಳಾದರು.**
**[24]ಪ್ರವಾದಿಗಳ ರಕ್ತವೂ ದೇವಜನರ ರಕ್ತವೂ ಭೂಮಿಯ ಮೇಲೆ ಕೊಲ್ಲಲ್ಪಟ್ಟವರೆಲ್ಲರ ರಕ್ತವೂ ನಿನ್ನಲ್ಲಿ ಸಿಕ್ಕಿತು ಎಂದು ಹೇಳಿದನು.**

**ವಚನ 21.** ರೋಮಿನ ವಿರುದ್ಧದ ನ್ಯಾಯತೀರ್ಪನ್ನು ಒಂದು ಸಾಂಕೇತಿಕ ಕೃತ್ಯದ ಮೂಲಕ ನಾಟಕೀಕರಣಗೊಳಿಸಲಾಗುತ್ತದೆ: **ಆಗ ಬಲಿಷ್ಠನಾದ ಒಬ್ಬ ದೇವದೂತನು ದೊಡ್ಡ ಬೀಸುವ ಕಲ್ಲಿನಂತಿರುವ ಒಂದು ಕಲ್ಲನ್ನು ಎತ್ತಿ**ಕೊಂಡನು. **ಬಲಿಷ್ಠನಾದ ದೇವದೂತನು** ಎಂಬುದಾಗಿ ಪ್ರಸ್ತಾಪಿಸಲ್ಪಟ್ಟಿದ್ದು ಇದು ಮೂರನೆಯ ಸಾರಿಯಾಗಿರುತ್ತದೆ (ನೋಡಿರಿ 5:2; 10:1). **ಒಂದು ದೊಡ್ಡ ಬೀಸುವ ಕಲ್ಲು** ಎಂದರೆ ಪ್ರಾಣಿಗಳಿಂದ ತಿರುಗಿಸಲ್ಪಡುತ್ತಿದ್ದ ಬೃಹತ್ ಬೀಸುವ ಕಲ್ಲುಗಳಲ್ಲೊಂದಾಗಿತ್ತು. ಹಲವಾರು ಟನ್ ಭಾರವಿರುವಂಥ ಈ ಕಲ್ಲೊಂದನ್ನು ಎತ್ತಬೇಕಾದರೆ ಒಬ್ಬನು ನಿಜಕ್ಕೂ ಬಲಿಷ್ಠನೇ ಆಗಿರಬೇಕಾಗಿರುತ್ತದೆ! ದೇವದೂತನು ದೊಡ್ಡ ಕಲ್ಲನ್ನು ಎತ್ತಿ **ಸಮುದ್ರದೊಳಗೆ ಹಾಕಿ - ಮಹಾ ಪಟ್ಟಣವಾದ ಬಾಬೆಲು ಹೀಗೆಯೇ ದಡದಡನೆ ಕೆಡವಲ್ಪಟ್ಟು ಇನ್ನೆಂದಿಗೂ ಕಾಣಿಸುವದಿಲ್ಲ.** ಈ ಕೃತ್ಯವನ್ನು ಯೆರೆಮೀಯ 51:59–64ರಲ್ಲಿ ಸಂಬಂಧಗೊಳಿಸಲ್ಪಟ್ಟಿರುವ ಘಟನೆಯೊಂದಿಗೆ, ಮಾತ್ರವಲ್ಲದೆ ಮಾರ್ಕ 9:42ರಲ್ಲಿ

ಬಳಸಲಾಗಿರುವ ಭಾಷೆಯೊಂದಿಗೆ ಹೋಲಿಕೆ ಮಾಡಿರಿ.

ಈ ದೃಶ್ಯವು ಶಕ್ತಿಶಾಲಿಯಾದದ್ದು. ವಾಚಕನು ಹೆಚ್ಚುಕಡಿಮೆ ದೇವದೂತನು ಕಲ್ಲನ್ನು ಎತ್ತಿಕೊಳ್ಳುವದನ್ನು, ಆತನ ಸ್ನಾಯುಗಳು ಸೆಳೆದುಕೊಳ್ಳುವದನ್ನು ನೋಡಬಲ್ಲವನಾಗಿದ್ದನು, ಮತ್ತು ಕಲ್ಲು ಗಾಳಿಯಲ್ಲಿ ಉರುಳುತ್ತಾ. ಸಮುದ್ರದಲ್ಲಿ ಬಿದ್ದು ಒಂದು ಪ್ರಚಂಡವಾದ ಅಲೆಯೆದ್ದು ಹೊರಚೆಲ್ಲುವಂತೆ ಮಾಡುವದನ್ನು ವಿಕ್ಷಿಸಬಲ್ಲವರಾಗಿದ್ದರು.

> [ಕಲ್ಲನ್ನು ಊಹಿಸಿಕೊಳ್ಳಿರಿ] ಅದು ಶಾಂತವಾಗಿ, ಹಿಂದಕ್ಕೆ ತಿರುಗಿಸಲಾರದ್ದಾಗಿ ಬೀಳುತ್ತಿರುವದನ್ನು ಊಹಿಸಿರಿ; ನಿತ್ಯವಾದ ಮರೆವಿನೊಳಗೆ, ನಿತ್ಯವಾದ ಭಾವಾಶೂನ್ಯತೆಯೊಳಗೆ ಬೀಳುವದು. ಮೀನುಗಳು ಹಾಗೂ ನಿರ್ದಯಿಗಳು ಅದರ ಸುತ್ತ ಆಟವಾಡಬಹುದು; ಮಂದ ಬೆಳಕಿನ ಆಳಗಳಲ್ಲಿರುವ ಅಂಧಕಾರದ ಗಿಡಮರಗಳು ಅದನ್ನು ಸುತ್ತಿಕೊಳ್ಳಬಹುದು; ಆದರೆ ಯಾವ ಮಾನವ ಕಣ್ಣೂ ಅದನ್ನು ಇನ್ನೆಂದೂ ಸದಾಕಾಲಕ್ಕೂ ನೋಡುವದಿಲ್ಲ.[36]

ಮೇಲ್ಗಡೆಯಲ್ಲಿ, ಕಲ್ಲಿನಿಂದುಂಟಾದ ಕೋಲಾಹಲವು ನಿಂತುಹೋಗುತ್ತದೆ, ಸಮುದ್ರವು ಶಾಂತವಾಗುತ್ತಾ ಹೋಗುತ್ತದೆ, ಮತ್ತು ಕಲ್ಲು ಎಂದಿಗೂ ಇರಲೇ ಇಲ್ಲವೇನೋ ಎಂಬಂತಿರುತ್ತದೆ. ರೋಮಿನ ಬೀಳುವಿಕೆಯ ಮಾರ್ಪಡಿಸಲಾಗದಿರುವಿಕೆ ಕುರಿತಾದ ಚಿತ್ರಣವು ಈ ರೀತಿಯದ್ದಾಗಿತ್ತು. ಸಂವೇದನ ಸಿದ್ಧಾಂತಿಗಳು "ಪುನರುಜ್ಜೀನವನಗೊಂಡ ರೋಮನ್ ಸಾಮ್ರಾಜ್ಯ" ಎಂಬುದರ ಕುರಿತು ಮಾತಾಡಲು ಇಚ್ಛಿಸುತ್ತಾರೆ, ಆದರೆ ಅಂಥ ಯಾವದೇ ಭಾವನೆಯ ಸುಳಿವನ್ನು ಪ್ರಕಟನೆ ಪುಸ್ತಕವು ಕೊಡುವದಿಲ್ಲ. ವಿಶ್ವ ಶಕ್ತಿಯಾಗಿದ್ದ ರೋಮಿನ ಬೀಳುವಿಕೆಯು ಸಂಪೂರ್ಣವಾಗಿರತಕ್ಕದ್ದಾಗಿತ್ತು.

ಆದದರಿಂದ ವಾಚಕನು ಅಂಶವನ್ನು ಲಕ್ಷ್ಯಿಸದೆ ಇರುವದಿಲ್ಲ, 21ನೇ ವಚನವು **ಇನ್ನೆಂದಿಗೂ ಕಾಣಿಸುವದಿಲ್ಲ** ಎಂಬ ಪದಗುಚ್ಛವನ್ನು ಬಳಸುತ್ತದೆ, ಈ ಪದಗುಚ್ಛವು 22 ಮತ್ತು 23ರಲ್ಲಿ ಇನ್ನು ಐದು ಸಾರಿ ಕಾಣಿಸಿಕೊಳ್ಳುತ್ತದೆ. ಈ ಪದಗುಚ್ಛವು *ಆರು* ಸಾರಿ ಕಾಣಿಸಿಕೊಳ್ಳುತ್ತದೆಂಬುದರಲ್ಲಿ ಏನಾದರೂ ಸಾಂಕೇತಿಕ ಅರ್ಥವು ಇರುವದಾದರೆ, ಅದು ಬಹುಶಃ *ವಿಫಲತೆಯ* ವಿಚಾರವೇ ಆಗಿರಬಹುದು. ಗ್ರೀಕ್ ವಾಕ್ಯವು ಆಂಗ್ಲಕ್ಕಿಂತಲೂ ಬಲವಾಗಿ ತಿಳಿಸುವದಾಗಿದ್ದು, ಎರಡು ನಕಾರಾತ್ಮಕಗಳನ್ನು οὐ μή (*ou mē*) ಬಳಸುತ್ತಾ ಅದನ್ನು "ಇನ್ನೆಂದಿಗೂ" ಎಂಬುದನ್ನು ಅನುವಾದಿಸಿರುವ ἔτι (*eti*) ಪದದೊಂದಿಗೆ ಪುನದೃಢೀಕರಿಸುತ್ತದೆ. ಗ್ರೀಕರು ಹೇಳುವ ರೀತಿಯು ಹೀಗಿರುತ್ತಿತ್ತು, "ಎಂದಿಗೂ ಇಲ್ಲ, ಎಂದಿಗೂ ಇಲ್ಲ, *ಎಂದಿಗೂ ಇಲ್ಲ*!" ಇಂದು, ವಿಪತ್ತು ಅಪ್ಪಳಿಸುವಾಗ, ನಾವು "ಮುಂದೆ ಎಲ್ಲಾ ಉತ್ತಮವಾಗುವದು" ಎಂದು ಹೇಳಿಕೊಂಡು ನಮ್ಮನ್ನು ಆದರಿಸಿಕೊಳ್ಳುತ್ತೇವೆ. ಹೇಗೂ, ರೋಮಿನ ವಿಷಯದಲ್ಲಾದರೋ, ಪರಿಸ್ಥಿತಿಯು ಎಂದಿಗೂ ಉತ್ತಮಗೊಳ್ಳುವದಿಲ್ಲ ಎಂದು ವಾಕ್ಯಭಾಗವು ತಿಳಿಸುತ್ತದೆ. ಆಕೆಯು ಬಿದ್ದು ಹೋಗುವಾಗ, ಅದು *ಸದಾಕಾಲಕ್ಕೂ* ಆಗಿರಲಿದೆ.

**ವಚನ 22.** ರೋಮಿನಲ್ಲಿ ಇನ್ನು ಮೇಲೆ ಸುಮಧುರ ಗಾನವು ಕೇಳಿಸಲ್ಪಡುವದಿಲ್ಲ: **ಬಾಬೆಲೇ, ನಿನ್ನಲ್ಲಿ ವೀಣೆಗಾರರೂ ವಾದ್ಯಗಾರರೂ ಕೊಳಲೂದುವವರೂ ತುತೂರಿಯವರೂ ಮಾಡುವ ಧ್ವನಿಯು ಇನ್ನೆಂದಿಗೂ ಕೇಳಿಸುವದಿಲ್ಲ. ವಾದ್ಯಗಾರರು** ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವಾದ μουσικῶν (*mousikōn*) ಎಂಬುದರ ಅರ್ಥವು "ಸಂಗೀತದಲ್ಲಿ ನುರಿತರಾಗಿರುವವರು" ಎಂದಾಗಿರುತ್ತದೆ. ಅದು ಗಾಯಕರನ್ನು ಸೂಚಿಸಬಲ್ಲದು, ಮತ್ತು ಈ ಸನ್ನಿವೇಶದಲ್ಲಿ ಅದು ಅದನ್ನೇ ಸೂಚಿಸುತ್ತಿರಬಹುದಾಗಿದೆ. RSVಯಲ್ಲಿ "ಅಲೆಮಾರಿ

ಗಾಯಕರು" ಎಂದಿರುತ್ತದೆ.

ಇನ್ನೆಂದಿಗೂ ಅಲ್ಲಿ ಮಾನವ ಕೈಗಾರಿಕೆಯ ಗುಂಯ್‌ಗೂಡುವಿಕೆಯು ಅಲ್ಲಿರುವದಿಲ್ಲ: **ಯಾವ ವಿಧವಾದ ಕೈಗಾರಿಕೆಯನ್ನು ಮಾಡುವವರು ನಿನ್ನಲ್ಲಿ ಇನ್ನೆಂದಿಗೂ ಸಿಕ್ಕುವದಿಲ್ಲ. ಬೀಸುವ ಕಲ್ಲಿನ ಶಬ್ದವು ನಿನ್ನಲ್ಲಿ ಇನ್ನೆಂದಿಗೂ ಕೇಳಿಸುವದಿಲ್ಲ.**

**ವಚನ 23.** ರೋಮಿನ ಬೀದಿಗಳು ಹಾಗೂ ಮನೆಗಳು ಸದಾಕಾಲಕ್ಕೂ ಕತ್ತಲೆಯಿಂದ ತುಂಬಿರುವವು: **ದೀಪದ ಬೆಳಕು ನಿನ್ನಲ್ಲಿ ಇನ್ನೆಂದಿಗೂ ಕಾಣಿಸುವದಿಲ್ಲ.** ರೋಮಿನ ಬೀದಿಗಳಲ್ಲಿ ದೀಪಗಳಿದ್ದವೋ ಎಂಬುದು ತಿಳಿದು ಬಂದಿರುವದಿಲ್ಲ, ಆದರೆ ಶ್ರೀಮಂತರ ಮನೆಗಳಂತೂ ಬಹಳ ಪ್ರಕಾಶಮಾನವಾದ ದೀಪಗಳಿಂದ ತುಂಬಿರುತ್ತಿದ್ದವು. ಸಾಧಾರಣ ರೀತಿಯ ಮನೆಗಳಲ್ಲಿ ಸಹ ದೀಪಗಳಿರುತ್ತಿದ್ದವು, ಮತ್ತು ದೀವಿಟಿಗೆಗಳನ್ನು ಹಿಡಿದು ಬೀದಿಗಳಲ್ಲಿ ಮೆರವಣಿಗೆ ಹೋಗುವದು ಸಾಮಾನ್ಯವಾಗಿರುತ್ತಿತ್ತು.

ಭಾವಾವೇಶದಿಂದ ಕೂಡಿದ ಸಂತೋಷದ ಶಬ್ದವು ಶಾಶ್ವತವಾಗಿ ಶಾಂತಗೊಳಿಸಲ್ಪಡುವದು: **ವಧೂವರರ ಸ್ವರವು ಇನ್ನೆಂದಿಗೂ ಕೇಳಿಸುವದಿಲ್ಲ.** ಮೌನ ಹಾಗೂ ಕತ್ತಲೆಗಳು ದೊರೆತನ ಮಾಡುವವು – ನಿತ್ಯವಾದ ಮೌನ, ನಿತ್ಯವಾದ ಅಂಧಕಾರ. 22 ಮತ್ತು 23 ವಚನಗಳನ್ನು ಯೆಶಾಯ 24:8; ಯೆರೆಮೀಯ 25:10; ಮತ್ತು ಯೆಹೆಜ್ಕೇಲ 26:13 ರೊಂದಿಗೆ ಹೋಲಿಕೆ ಮಾಡಿರಿ.

ಮಾತಾಡುವವನು ಅವಳು ಏಕೆ ನಾಶನಗೊಳ್ಳಲು ನೇಮಿಸಲ್ಪಟ್ಟಿದ್ದಾಳೆಂಬುದನ್ನು ರೋಮಿಗೆ ವಿವರಿಸುವದರೊಂದಿಗೆ ಮುಕ್ತಾಯಗೊಳಿಸುತ್ತಾನೆ. ಮೊದಲ ಕಾರಣವು ಆಕೆಯ **ವರ್ತಕರು**, ಅವರು **ಭೂಮಿಯ ಪ್ರಭುಗಳು** ಎಂಬುದಾಗಿ ಕರೆಯಲ್ಪಟ್ಟಿದ್ದಾರೆ. ದೊಡ್ಡತನ ಮಾತ್ರವೇ ಪಾಪಕರವಾದದ್ದಲ್ಲ, ಆದ್ದರಿಂದ ಈ ವಾಕ್ಯಸಾಲನ್ನು ಇಡೀ ಅಧ್ಯಾಯದ ಬೆಳಕಿನಲ್ಲಿ ಓದತಕ್ಕದ್ದು. ರೋಮಿನ ವರ್ತಕರು ಬೇರೆಯವರ ಕುರಿತು ಯಾವದೇ ಕಾಳಜಿಯಿಲ್ಲದವರಾಗಿ **ಪ್ರಭು**ಗಳಾಗಿದ್ದರು, ಹಣವನ್ನು ಸಂಪಾದಿಸುವದಕ್ಕೋಸ್ಕರ ಏನೂ ಬೇಕಾದರೂ ಮಾಡುವದಕ್ಕೆ ಸಿದ್ಧರಿಸುವ ಮೂಲಕ ಪ್ರಭುಗಳಾಗಿದ್ದರು. ಎರಡನೆಯ ಕಾರಣವು, ಆಕೆಯ **ಮಾಟದಿಂದ ಎಲ್ಲಾ ಜನಾಂಗದವರು ಮರುಳಾದ** ಕಾರಣದಿಂದ ರೋಮ್ ನಗರಿಯು ಬೀಳಲಿದ್ದಳು. "ಮಾಟ" ಎಂಬುದು ಸುಳ್ಳು ಪ್ರವಾದಿಯಿಂದ ಮಾಡಲ್ಪಟ್ಟ ನಕಲಿ ಅದ್ಭುತಗಳ ರೀತಿಯ ಅದ್ಭುತಗಳನ್ನು ಸೂಚಿಸಬಹುದಾಗಿದೆ (13:14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಹಾಗಿದ್ದರೂ, ಬಹುಶಃ ಇದು ಆಕೆಯ ಭೂನಿವಾಸಿಗಳನ್ನು "ಸಮ್ಮೋಹಿತಗೊಳಿಸಿರುವಿಕೆ"ಯನ್ನು ಸೂಚಿಸುವದಾಗಿರಬಹುದು: ಆಕೆಯು "ಎಲ್ಲಾ ಜನಾಂಗಗಳನ್ನು ಒಂದು ಸುಳ್ಳು ಭದ್ರತೆಯನ್ನು ನಂಬುವಂತೆ ಮೋಡಿ ಮಾಡಿದಳು."[37] ಆಕೆಯು "ಜನಾಂಗಗಳನ್ನು ತಾವು ದೇವರನ್ನು ಕೊನೆಗಾಣಿಸ[ಬಲ್ಲರು] ... ಐಶ್ವರ್ಯ ಹಾಗೂ ವಿಲಾಸಗಳಲ್ಲಿಯೇ ಅಂತಿಮ ಭದ್ರತೆಯು ಸಿಕ್ಕಬಲ್ಲದು ಎಂದು ನಂಬುವಂತೆ ಮರಳುಗೊಳಿಸಿದಳು."[38] ಆಕೆಯು ಜನಾಂಗಗಳನ್ನು "ಆಕೆಯ ಸುಳ್ಳು ಮಾನದಂಡಗಳನ್ನು ಹಾಗೂ ಭೌತಿಕತೆಯ ಆರಾಧನೆಯನ್ನು"[39] ಅಳವಡಿಸಿಕೊಳ್ಳುವಂತೆ ಮೋಡಿ ಮಾಡಿದಳು.

**ವಚನ 24.** ಮೂರನೆಯ ಹಾಗೂ ನಿಶ್ಚಯವಾಗಿಯೂ ಅತ್ಯಂಥ ಮಹತ್ವವಾದ ಕಾರಣವು ಕೊನೆಯಲ್ಲಿ ತಿಳಿಸುವದಕ್ಕಾಗಿ ಉಳಿಸಲ್ಪಟ್ಟಿತ್ತು: **ಪ್ರವಾದಿಗಳ ರಕ್ತವೂ ದೇವಜನರ ರಕ್ತವೂ ಭೂಮಿಯ ಮೇಲೆ ಕೊಲ್ಲಲ್ಪಟ್ಟವರೆಲ್ಲರ ರಕ್ತವೂ ನಿನ್ನಲ್ಲಿ ಸಿಕ್ಕಿತು.** ನಿರಪರಾಧಿಗಳ ಹಾಗೂ ಭಕ್ತರ ರಕ್ತವು ರೋಮಿನ ಬೀದಿಗಳಲ್ಲೆಲ್ಲಾ ಹರಿದಾಡಿತ್ತು. ಆಕೆಯು ಅದರ ಪರಿಣಾಮಗಳನ್ನು ಅನುಭವಿಸಲಿದ್ದಳು. (ವ. 24ನ್ನು ಯೆಹೆಜ್ಕೇಲ 24:7ರೊಂದಿಗೆ ಹೋಲಿಕೆ ಮಾಡಿರಿ.)

ರೋಮಿನ ಪಾಪಗಳ ಗೋಪುರಕ್ಕಿದ್ದ ಮೂಲೆಗಲ್ಲು ಆಕೆಯು ಕ್ರೈಸ್ತರನ್ನು ಹಿಂಸಿಸಿದ್ದೇ ಆಗಿತ್ತು. ಆಕೆಯು ಅದನ್ನು ವೈಯಕ್ತಿಕವಾಗಿ ಮಾಡಿದ್ದಳು, ಮತ್ತು ಆ ರೀತಿಯಾಗಿಯೇ ಮಾಡುವಂತೆ ಸಾಮ್ರಾಜ್ಯದುದ್ದಕ್ಕೂ ಇರುವವರನ್ನೆಲ್ಲಾ ಮನವೊಲಿಸಿದ್ದಳು. **ಪ್ರವಾದಿಗಳು** ಮತ್ತು **ದೇವಜನರು** ಪ್ರತ್ಯೇಕವಾದ ಹಾಗೂ ಭಿನ್ನವಾದ ಗುಂಪಿನ ಜನರಾಗಿರಲಿಲ್ಲ; "ಪ್ರವಾದಿಗಳು" ಸಾಮಾನ್ಯ ವರ್ಗದವರಾದ "ದೇವಜನರ" (ಕ್ರೈಸ್ತರ) ಒಳಗಿರುವಂಥ ವಿಶೇಷ ವರ್ಗವಾಗಿದ್ದು. ಎರಡೂ ಪದಗಳು ಒಟ್ಟಿಗೆ ಬಳಸಲ್ಪಟ್ಟಿರುವದು ರಕ್ತಸಾಕ್ಷಿಗಳಾಗಿ ಕೊಲ್ಲಲ್ಪಟ್ಟ *ಎಲ್ಲಾ* ಕ್ರೈಸ್ತರನ್ನು ಸೂಚಿಸುತ್ತದಷ್ಟೆ.

ಕೆಲವರು **ಭೂಮಿಯ ಮೇಲೆ ಕೊಲ್ಲಲ್ಪಟ್ಟವರೆಲ್ಲರು** ಎಂಬುದರಲ್ಲಿ ರೋಮಿನ ಮಿಲಿಟರಿ ಯುದ್ಧಗಳಲ್ಲಿ ಸತ್ತಿರುವ, ಅವರು ಕ್ರೈಸ್ತರಾಗಿದ್ದರೂ ಸರಿಯೇ ಅಥವಾ ಅಲ್ಲದಿದ್ದರೂ ಸರಿಯೇ, *ಎಲ್ಲರನ್ನೂ* ಸೇರಿರುತ್ತಾರೆಂದು ನಂಬುತ್ತಾರೆ. ಈ ಯೋಚನೆಯು ಸೂಕ್ತವಾಗಿರಬಹುದಾದರೂ, ಇಲ್ಲಿ ಮುಖ್ಯ ಒತ್ತು ದೇವರ ಜನರನ್ನು ಕೊಲ್ಲುವದರ ಕುರಿತಾಗಿರುತ್ತದೆ. ಇವರಲ್ಲಿ ಪ್ರತಿಯೊಬ್ಬರೂ ರೋಮಿನಲ್ಲಿ ಅಕ್ಷರಶಃ ಕೊಲ್ಲಲ್ಪಟ್ಟಿರಲಿಲ್ಲ; ಆದರೆ, Mounceನು ಗಮನಕ್ಕೆ ತರುವ ಪ್ರಕಾರ, "ರೋಮಿನ ಅಪರಾಧವು ಭೂಮಿಯ ಮೇಲೆ ಕೊಲ್ಲಲ್ಪಟ್ಟವರೆಲ್ಲರಿಗೂ ವಿಸ್ತರಿಸುತ್ತದೆ ಯಾಕೆಂದರೆ ಆಕೆಯು ಇಡೀ ಲೋಕವನ್ನು ಆಳುವ ಸಾರ್ವಭೌಮಳಾಗಿದ್ದಾಳೆ. ಎಲ್ಲೆಲ್ಲಿ ಜೀವವು ಯಜ್ಞ ಮಾಡಲ್ಪಟ್ಟಿದೆಯೊ, ಅಲ್ಲೆಲ್ಲಾ ಹೊಣೆಗಾರಿಕೆಯು ಆಕೆಯ ಬಾಗಿಲಲ್ಲಿರುತ್ತದೆ."[40] ಯೇಸುವು ಮತ್ತಾಯ 23:35ರಲ್ಲಿ ಯೆರೂಸಲೇಮಿನ ಕುರಿತಾಗಿ ಇದೇ ರೀತಿಯ ಹೇಳಿಕೆಯನ್ನು ನೀಡುತ್ತಾನೆ. ಭೂಮಿಯೊಳಗಿಂದ ಹೇಬೆಲನ ರಕ್ತವು ಮೊರೆಯಿಟ್ಟ ಪ್ರಕಾರವೇ (ಆದಿಕಾಂಡ 4:10), ರಕ್ತಸಾಕ್ಷಿಗಳ ರಕ್ತವು ಸಹ ತಮಗಾದ ಅನ್ಯಾಯಕ್ಕೆ ಪ್ರತಿದಂಡನೆಯನ್ನು ಮಾಡುವಂತೆ ಕೂಗಿಕೊಂಡಿತ್ತು (ನೋಡಿರಿ ಪ್ರಕಟನೆ 6:9. 10). ನ್ಯಾಯವು ಒದಗಿಸಲ್ಪಡುವದು. ತಕ್ಕಡಿಯು ಸಮತೋಲನಗೊಳಿಸಲ್ಪಡುವದು.

ರೋಮ್ ನಗರಿಯ ಬೀಳುವಿಕೆಯ ಕುರಿತ ಚರ್ಚೆಯನ್ನು ಮುಕ್ತಾಯಗೊಳಿಸುವದಕ್ಕೆ ಮುನ್ನ, ಹಲವಾರು ಸಂಗತಿಗಳನ್ನು ಒತ್ತಿ ಹೇಳುವ ಅಗತ್ಯವಿರುತ್ತದೆ. ಮೊಟ್ಟಮೊದಲನೆಯದಾಗಿ, 18ನೇ ಅಧ್ಯಾಯದಲ್ಲಿ ದೇವರ ಉದ್ದೇಶವು ರೋಮ್ ನಗರಿಯು ನಿಖರವಾಗಿ *ಹೇಗೆ* ಬೀಳುವಳು ಎಂಬುದನ್ನು ವಿವರಿಸುವದಾಗಲಿ ಅಥವಾ ಆಕೆಯು ಬಿದ್ದು ಹೋದ ಬಳಿಕ ಹೇಗೆ ಕಾಣಿಸಿಕೊಂಡಳು ಎಂಬುದನ್ನು ಬಣ್ಣಿಸುವದಾಗಲಿ ಆಗಿರಲಿಲ್ಲ. ಅಧ್ಯಾಯದ ಆರಂಭದಲ್ಲಿ ಹಾಗೂ ಕೊನೆಯಲ್ಲಿ, ನಗರವು ನಿರ್ಜನವಾಗಿರುವಂತೆ (ವಚನಗಳು 22, 23) ಮತ್ತು ಕಾಡು ಜೀವಿಗಳಿಂದ ತುಂಬಲ್ಪಟ್ಟದ್ದಾಗಿ (ವ 2) ಚಿತ್ರಿಸಲ್ಪಟ್ಟಿರುತ್ತದೆ, ಆದರೆ ಬೇರೊಂದು ಕಡೆಯಲ್ಲಿ ಆಕೆಯು ಉರಿಯುತ್ತಿರುವವಳಾಗಿ ಬಣ್ಣಿಸಲ್ಪಟ್ಟಿದ್ದಾಳೆ (ವಚನಗಳು 8, 9, 18). ಮುಂದಿನ ಅಧ್ಯಾಯದಲ್ಲಿ, "ಅವಳ ದಹನದಿಂದುಂಟಾದ ಹೊಗೆಯು ಯುಗಯುಗಾಂತರಗಳಲ್ಲಿಯೂ ಏರಿ ಹೋಗುತ್ತದೆ" ಎಂದು ಹೇಳಲಾಗಿರುತ್ತದೆ (19:3). ಸದಾಕಾಲಕ್ಕೂ ಉರಿಯುತ್ತಿರುವಂಥ ಒಂದು ರಾಶಿಯು ಯಾವದೇ ವಿಧವಾದ ಜೀವಿಗಳಿಗೆ ವಾಸ ಯೋಗ್ಯವಾದ ಸ್ಥಳವಾಗಿರುವದು ಕಷ್ಟಕರವೇ. ವಾಚಕನು ಬಣ್ಣನೆಗಳನ್ನು ಅಕ್ಷರಶಃ ಅರ್ಥೈಸಿಕೊಳ್ಳಕೂಡದು, ಆದರೆ ಸಾಂಕೇತಿಕವಾಗಿ ಅರ್ಥಮಾಡಿಕೊಳ್ಳಬೇಕು.

ಪ್ರಾಚೀನ ಬಾಬೆಲಿನ ಕುರಿತಾದ ಪ್ರವಾದನೆಗಳು ಹಾಗೂ ಪ್ರಕಟನೆ 18ರಲ್ಲಿನ ಪ್ರವಾದನೆಯ ನಡುವೆ ಒಂದು ಸಮಾನಾರ್ಥವನ್ನು ಏರ್ಪಡಿಸಬಹುದು. ಪ್ರಾಚೀನ ಬಾಬೆಲಿನ ಕುರಿತಾದ ಮುಂತಿಳಿಸುವಿಕೆಗಳು ಅಂತಿಮವಾಗಿ ಅಕ್ಷರಶಃ ನೆರವೇರಿಸಲ್ಪಟ್ಟವು, ಆದರೆ ಆ ಪ್ರವಾದನೆಗಳು ಸಹ ಆಕೆಯ ಬೀಳುವಿಕೆಯ *ವಾಸ್ತವಾಂಶದ* ಬಗ್ಗೆಯೇ ಹೆಚ್ಚು ಕಳಕಳಿ

ಹೊಂದಿದ್ದವೇ ಹೊರತು ವಿವರಗಳ ಬಗ್ಗೆಯಲ್ಲ. ಮೇದ್ಯೆಯ-ಪಾರಸಿಯರು ಬಾಬೆಲನ್ನ ವಶಪಡಿಸಿಕೊಂಡಾಗ ಆಕೆಯು ಬಿದ್ದು ಹೋದಳು, ಆದರೆ ಆಕೆಯು ಅನೇಕ ವರ್ಷಗಳ ಕಾಲ ಒಂದು ಸುಂದರಿ ನಗರಿಯಾಗಿ ಮುಂದುವರೆದಳು. ಎರಡು ನೂರು ವರ್ಷಗಳ ಬಳಿಕ, ಮಹಾ ಅಲೆಗ್ಸಾಂದ್ರನು ಬಾಬೆಲನ್ನು "ತನ್ನ ಮನೆಯನ್ನಾಗಿ ಮಾಡಿಕೊಂಡಿದ್ದನು"; ಆತನು ಮರಣಿಸುವ ವೇಳೆ ಅಲ್ಲಿಯೇ ಇದ್ದನು. ಯೆಶಾಯ ಹಾಗೂ ಬೇರೆಯವರಿಂದ ಬಳಸಲ್ಪಟ್ಟಿರುವ ಸಾಂಕೇತಿಕತೆಯು ಬಾಬೆಲಿನ ಅಂತಿಮವಾದ ತೊಳಲಾಟವನ್ನು ಬಣ್ಣಿಸುವದಕ್ಕಿಂತಲೂ ಅಧಿಕವಾಗಿ, ಒಂದು ವಿಶ್ವ ಶಕ್ತಿಯಾಗಿದ್ದ ಬಾಬೆಲಿನ ದಿನಗಳ ಲೆಕ್ಕಿಸಲ್ಪಟ್ಟಿವೆ ಎಂಬುದನ್ನು ನಾಟಕೀಯವಾಗಿ ಘೋಷಿಸುವದೇ ಆಗಿತ್ತು. ಅದೇ ರೀತಿಯಲ್ಲಿಯೇ, 18ನೇ ಅಧ್ಯಾಯದ ಗೋಳುಭರಿತ ದೃಶ್ಯಗಳನ್ನು ಬಿದ್ದು ಹೋಗಿರುವ ರೋಮ್ ನಗರಿಯ ತಟ್ಟನೆ ತೆಗೆದ ಛಾಯಾಚಿತ್ರಗಳೆಂದು ಭಾವಿಸಿಕೊಳ್ಳಬಾರದು. ಇಂದು, ರೋಮ್ ನಗರಿಯು ಈಗಲೂ ಅಸ್ತಿತ್ವದಲ್ಲಿರುತ್ತಾಳೆ; ಅದು ಲವಲವಿಕೆಯಿಂದ ಕೂಡಿದ ಇಟಲಿಯ ರಾಜಧಾನಿಯಾಗಿದೆ. ಹೇಗೂ, ಮಹಾನಗರದ ಹೃದಯಭಾಗದಲ್ಲಿ, ರೋಮನ್ ಸಭಾಸ್ಥಾನದ ಮೌನವಾದ ಅವಶೇಷಗಳಿರುತ್ತವೆ, ಅವುಗಳನ್ನು ಪ್ರಾಚೀನ ಇತಿಹಾಸದಲ್ಲಿ ಆಸಕ್ತಿಯಿರುವವರು ಮಾತ್ರವೇ ಭೇಟಿ ಕೊಟ್ಟು ವೀಕ್ಷಿಸುತ್ತಾರೆ - ದೇವರು ಮುಂದೆ ನಾಶನವು ಕಾದಿದೆ ಎಂದು ಹೇಳುವದಾದರೆ, ಅದು ಸಂಭವಿಸಿಯೇ ತೀರುತ್ತದೆಂದು ನಾವು ಭರವಸದಿಂದಿರಬಹುದು ಎಂಬುದನ್ನು ನಾಟಕೀಯವಾಗಿ ಜ್ಞಾಪಿಸುವಿಕೆಯಾಗಿದೆ.

ರೋಮ್ ನಗರಕ್ಕೆ ನಿಜವಾಗಿಯೂ ಏನು ಸಂಭವಿಸಿತು? ಒಂದು ಕ್ಲುಪ್ತವಾದ ಸಾರಾಂಶವು ಇಲ್ಲಿದೆ:

> ದೇವರು ಬರಮಾಡಿದ ಎಷ್ಟೋ ನ್ಯಾಯತೀರ್ಪುಗಳಲ್ಲಿ ನಡೆಯುವ ಪ್ರಕಾರವೇ, ನೆರವೇರಿಕೆಯು ವಾಸ್ತವಿಕದಲ್ಲಿ ನಿಧಾನವಾಗಿ, ಆದರೆ ಕೊನೆಗೆ ಏಕಾಏಕಿಯಾಗಿಯೂ ಸಂಭವಿಸಿತ್ತು. ನಾಲ್ಕು ಶತಮಾನಗಳ ವರೆಗೆ ರೋಮ್ ನಗರಿಯು ಕ್ಷೀಣಿಸುತ್ತಾ ಬಂದಿತ ಮತ್ತು ಕ್ಷಯಗೊಳ್ಳುತ್ತಲಿತ್ತು, ನೈತಿಕ ವಿಷವು ಆಕೆಯ ಇಡೀ ಜೀವವನ್ನು ಸೊಂಕಿನಿಂದ ತುಂಬಿಸಿತ್ತು. ಬಳಿಕ ಕ್ರಿ.ಶ. 410ನೇ ವರ್ಷದ ಒಂದು ದುರ್ದೈವದ ವಾರದಲ್ಲಿ, ತನ್ನ ಈಶಾನ್ಯದ Goths ದಂಡುಗಳೊಂದಿಗೆ ಬಂದ Alaricನು ರೋಮ್ ನಗರಿಯನ್ನು ಕೊಳ್ಳೆ ಹೊಡೆದು ಅದನ್ನು ತಿಪ್ಪೆಯನ್ನಾಗಿ ಮಾರ್ಪಡಿಸಿದನು.[41]

ಅನಂತರ, ಕ್ರಿ.ಶ. 455ರಲ್ಲಿ, ಎರಡು ವಾರಗಳ ಕಾಲ ಜರ್ಮನಿನ ವಂಡಾಲ್ ಬುಡಕಟ್ಟಿನ ಸೇನೆಯು ರೋಮ್ ನಗರವನ್ನು ಸೂರೆ ಮಾಡಿಕೊಂಡರು. ಅಂತಿಮವಾಗಿ, ಕ್ರಿ.ಶ. 476ರಲ್ಲಿ, ಜರ್ಮನ್ ಮುಖ್ಯಸ್ಥನಾದ Odoacerನು ಕಡೆಯ ರೋಮನ್ ಚಕ್ರವರ್ತಿಯನ್ನು ಪದಚ್ಯುತಿಗೊಳಿಸುವವನಾಗಿ, ಸದಾ ಕಾಲಕ್ಕೂ ಸಾಮ್ರಾಜ್ಯಕ್ಕೆ ಅಂತ್ಯವನ್ನು ತಂದನು.

## ಅನ್ವಯಿಸುವಿಕೆ

### ಬಾಬೆಲಿನ ನಿಧನವಾರ್ತೆ (ಅಧ್ಯಾಯ 18)

Jim McGuigganನು 18ನೇ ಅಧ್ಯಾಯವನ್ನು "ಬಾಬೆಲಿನ ನಿಧನವಾರ್ತೆ"[42] ಎಂದು ಕರೆದನು. ಇದೊಂದು ಉತ್ತಮ ಶಿರ್ಷೀಕೆ ಹಾಗೂ ಚರ್ಚೆಯಾಂಶವಾಗುವದು. ಒಂದು ಸುದ್ದಿಪತ್ರಿಕೆ ಕಛೇರಿಯಲ್ಲಿ "ಶವಾಗಾರ" ಎಂದು ಕರೆಯಲ್ಪಡುವ ವಿಭಾಗವನ್ನು ಹೊಂದಿರುತ್ತದೆ, ಅದರಲ್ಲಿ, ಎಲ್ಲಾ ಪೈಲುಗಳೊಳಗೆ, ಈಗಲೂ ಜೀವಂತವಾಗಿರುವಂಥ ಪ್ರಸಿದ್ಧ ಜನರ ಕುರಿತು

ಬರೆಯಲಾಗಿರುವ ನಿಧನವಾರ್ತೆಯ ಪೈಲುಗಳೂ ಇರುತ್ತವೆ. ಪ್ರಕಟನೆ 18ನೇ ಅಧ್ಯಾಯವು ರೋಮಿನ ನಿಧನವಾರ್ತೆ ಆಗಿರುತ್ತದೆ, ವಾಸ್ತವವಾಗುವದಕ್ಕೆ ಮುನ್ನವೇ ದೇವರ ಕೈಯಿಂದ ಬರೆಯಲ್ಪಟ್ಟದ್ದಾಗಿರುತ್ತದೆ.

Warren Wiersbeನು ಅಧ್ಯಾಯದ ಸಂಕ್ಷಿಪ್ತ ವಿವರಣೆಗಾಗಿ "ಶಬ್ದ" ಎಂಬ ಪದವನ್ನು ಬಳಸಿದನು: ದಂಡನೆಯ ತೀರ್ಪಿನ ಶಬ್ದ (ವಚನಗಳು 1-3); ಬೇರ್ಪಡಿಸುವಿಕೆಯ ಶಬ್ದ (ವಚನಗಳು 4-8); ಗೋಳಾಡುವ ಶಬ್ದ (ವಚನಗಳು 9-19); ಕೊಂಡಾಟದ ಶಬ್ದ (ವಚನಗಳು 20-24).[43] Owen Crouchನು ಅಧ್ಯಾಯವನ್ನು "ನಾಶನದ ಘೋಷಣೆಗಳು" ಎಂದು ಕರೆದನು; ಆತನು ಮೊದಲು ಪರಲೋಕದಿಂದಾದ ಘೋಷಣೆಗಳನ್ನು ಚರ್ಚಿಸಿದನು (ವಚನಗಳು 1-8, 20-24), ಬಳಿಕ ಭೂಮಿಯಿಂದ ಬಂದ ಘೋಷಣೆಗಳನ್ನು ಚರ್ಚಿಸಿದನು (ವಚನಗಳು 9-19).[44]

ಅಧ್ಯಾಯದಕ್ಕೆ ಕೊಡಬಹುದಾದ ಇತರ ಸಂಭಾವ್ಯ ಶಿರ್ಷಿಕೆಗಳು ಇಲ್ಲಿವೆ: "ಮಹಾ ವೈಭವವಾಗಿದ್ದ ರೋಮ್"; "ಗರ್ವದ ಪತನ"; "ಶಕ್ತಿಗಾದ ದಂಡನೆ"; "ವಿನಾಶಕ್ಕೆ ನೇಮಿಸಲ್ಪಟ್ಟಿರುವದು"; "ಅವರು ದೊಡ್ಡವರು"; "ಸೈತಾನನ ಗೋಳಾಡುವಿಕೆಗಳ ಪುಸ್ತಕ."

### "ತಕ್ಕಡಿಯಲ್ಲಿ ತೂಗಲ್ಪಟ್ಟಿದ್ದಿ" (ಅಧ್ಯಾಯ 18)

ಪ್ರಕಟನೆ ಪುಸ್ತಕದಲ್ಲಿ ಬಾಬೆಲ್ ನಗರವು ರೋಮಿಗೆ ಒಂದು ಸಂಕೇತವಾಗಿ ಬಳಸಲ್ಪಟ್ಟಿದೆ. ಹಳೆಯ ಒಡಂಬಡಿಕೆಯಲ್ಲಿ, ಬಾಬೆಲ್ ನಗರವು ತನ್ನ ಐಶ್ವರ್ಯ, ಶಕ್ತಿ, ಹಾಗೂ ಗರ್ವಕ್ಕೆ ಪ್ರಸಿದ್ಧವಾಗಿತ್ತು; ರೋಮ್ ನಗರಕ್ಕೆ ಹೊಸ ಒಡಂಬಡಿಕೆಯ ಕಾಲಗಳಲ್ಲಿ ಅದೇ ರೀತಿಯಲ್ಲಿ ಹೆಸರುವಾಸಿಯಾಗಿತ್ತು. ಬಾಬೆಲ್ ನಗರವು ಬಾಬೆಲ್ ಸಾಮ್ರಾಜ್ಯದ ಕೇಂದ್ರ ಸ್ಥಳವಾಗಿತ್ತು, ಅದೇ ರೀತಿಯಲ್ಲಿಯೇ ರೋಮ್ ನಗರವು ರೋಮನ್ ಸಾಮ್ರಾಜ್ಯದ ಕೇಂದ್ರವಾಗಿತ್ತು. ಬಾಬೆಲ್ ನಗರಿಯು ಇಸ್ರಾಯೇಲ್ಯರ ಹಿಂಸಕ ಎಂದು ಪರಿಚಿತವಾಗಿದ್ದರೆ, ರೋಮ್ ನಗರವು ಸಭೆಯನ್ನು ಹಿಂಸಿಸುವದಾಗಿ ಜ್ಞಾಪಿಸಿಕೊಳ್ಳಲ್ಪಡುತ್ತದೆ. ದಾನಿಯೇಲನ ಪುಸ್ತಕದಲ್ಲಿ, ಆಕೆಯ ಪಾಪಗಳಿಗೋಸ್ಕರ ಬಾಬೆಲಿನ ವಿರುದ್ಧವಾಗಿ ನ್ಯಾಯತೀರ್ಪು ಘೋಷಿಸಲ್ಪಡುತ್ತದೆ. ಆಕೆಯು "ತಕ್ಕಡಿಯಲ್ಲಿ ತೂಗಲ್ಪಟ್ಟು ಕಡಿಮೆಯಾಗಿ ಕಂಡು ಬಂದಿದ್ದ"ಳು (ದಾನಿಯೇಲ 5:27; KJV). ಅದೇ ರೀತಿಯಲ್ಲಿಯೇ, ದೇವರು ರೋಮಿನ ಪಾಪಗಳನ್ನು ಅಲಕ್ಷ್ಯ ಮಾಡಿರಲಿಲ್ಲ; ಆಕೆಯು ಸಹ, ನ್ಯಾಯತೀರ್ಪಿಗೆ ಗುರಿಯಾಗಲಿದ್ದಳು (ಪ್ರಕಟನೆ 18).

ರೋಮಿನ ಮೇಲೆ ದೇವರ ನ್ಯಾಯತೀರ್ಪು ಬರುವದಕ್ಕೆ ಕಾರಣಗಳನ್ನು ವಿವರಿಸುವ ಒಂದು ಪ್ರಸಂಗಕ್ಕೆ "ತಕ್ಕಡಿಯಲ್ಲಿ ತೂಗಲ್ಪಟ್ಟಿದ್ದು" ಎಂಬ ಶಿರ್ಷಿಕೆಯನ್ನು ಕೊಟ್ಟು ಈ ಕೆಳಗಿನ ಆರು ಪ್ರಮುಖ ಅಂಶಗಳನ್ನು ಸೇರ್ಪಡೆಗೊಳಿಸಬಹುದಾಗಿದೆ: (1) ಚಿತ್ರಸದೃಶ್ಯ, ಆದರೆ ನಾಶಗೊಳ್ಳುತ್ತಿದೆ (ವಚನಗಳು 5, 7, 14, 16, 22, 23) - ಆಕೆಯು ಸೌಂದರ್ಯವತಿಯಾಗಿದ್ದಳು, ಆದರೆ ಆಕೆಯ ಪಾಪಗಳು ಆಕಾಶವನ್ನು ಮುಟ್ಟುವಷ್ಟು ಎತ್ತರಕ್ಕೆ ತಲುಪಿದ್ದವು; (2) ಶಕ್ತಿಶಾಲಿ, ಆದರೆ ವಿಕೃತಗೊಂಡವಳು (ವಚನಗಳು 3, 9, 11-17, 23) - ಆಕೆಯು ಶಕ್ತಿಶಾಲಿಯಾಗಿದ್ದಳು, ಆದರೆ ಆಕೆಯು ತನ್ನ ಪ್ರಭಾವವನ್ನು ಒಳ್ಳೇದಕ್ಕಾಗಿ ಬಳಸುವದರ ಬದಲಾಗಿ ಕೆಟ್ಟದ್ದಕ್ಕಾಗಿ ಬಳಸಿಕೊಂಡಿದ್ದಳು; (3) ಜನಪ್ರಿಯಳು, ಆದರೆ ಗರ್ವಿಷ್ಠಳು (ವ. 7) - ಆಕೆಯು ಜನಪ್ರಿಯಳಾಗಿದ್ದಳು ಆದರೆ ಗರ್ವದಿಂದ ತುಂಬಿದ್ದಳು; (4) ಸಮೃದ್ಧಿಯಾದವಳು, ಆದರೆ ಲಂಪಟಳಾಗಿದ್ದಳು (ವಚನಗಳು 3, 7, 9, 12-14) - ಆಕೆಯು ಐಶ್ವರ್ಯವಂತಳಾಗಿದ್ದಳು ಆದರೆ ನಂಬುವದಕ್ಕಾಗದಷ್ಟು ವ್ಯರ್ಥವಾಗಿದ್ದಳು; (5) ಪ್ರಮುಖಳಾಗಿದ್ದಳು, ಆದರೆ ನಿಷ್ಕರುಣೆಯಾಗಿದ್ದಳು (ವಚನಗಳು 11, 13, 17) - ಆಕೆಯು

ಯಶಸ್ವಿಯಾಗಿದ್ದಳು ಆದರೆ ಬೇರೆಯವರ ಕುರಿತು ಚಿಂತೆಯಿಲ್ಲದವಳಾಗಿದ್ದಳು; (6) ಭಾಗ್ಯವಂತಳಾಗಿದ್ದಳು ಆದರೆ ಹಿಂಸಕಳಾಗಿದ್ದಳು (ವ. 24) - ಆಕೆಯ ದೇವಜನರನ್ನು ಕೊಂದಳು. ನೀವು ಅತಿಯಾದ "P" ಗಳ ಬಳಕೆಯನ್ನು ಬಯಸದಿದ್ದರೆ, "ಸುಂದರಳು, ಆದರೆ ಕೆಟ್ಟವಳು"; "ಯಶಸ್ವಿ, ಆದರೆ ಸ್ವಾರ್ಥಿ"; "ಶ್ರೀಮಂತಳು, ಆದರೆ ವ್ಯರ್ಥಳು" ಎಂಬ ಪದಗುಚ್ಛಗಳನ್ನು ಬಳಸಬಹುದು.

ಸುಂದರಳು, ಶಕ್ತಿಶಾಲಿ, ಜನಪ್ರಿಯ, ಶ್ರೀಮಂತ, ಅಥವಾ ಯಶಸ್ವಿ ಆಗಿರುವದರಲ್ಲಿ ಯಾವ ತಪ್ಪೂ ಇರುವದಿಲ್ಲ - ಎಲ್ಲಿಯ ವರೆಗೆ ನಾವು ನಮ್ಮ ಆಶೀರ್ವಾದಗಳೆಲ್ಲಾ ದೇವರಿಂದಲೇ ಬರುತ್ತವೆಂದು ಒಪ್ಪಿಕೊಳ್ಳುತ್ತೇವೋ ಅಲ್ಲಿಯ ವರೆಗೆ, ಮತ್ತು ನಾವು ಅವುಗಳನ್ನು ಆತನನ್ನು ಮಹಿಮೆ ಪಡಿಸುವದಕ್ಕೂ ಬೇರೆಯರ ಜೀವಿತಗಳನ್ನು ಆಶೀರ್ವದಿಸುವದಕ್ಕೂ ಬಳಸುತ್ತೇವೋ ಅಲ್ಲಿಯ ವರೆಗೆ ಯಾವ ತಪ್ಪೂ ಇರುವದಿಲ್ಲ. ಬಹಳಷ್ಟು ಸಾರಿ, ಅದು ಆ ರೀತಿಯಾಗಿರುವದಿಲ್ಲ. ಪೌಲನು ಹೇಳಿದ್ದೇನೆಂದರೆ, "ಐಶ್ವರ್ಯವಂತರಾಗಬೇಕೆಂದು ಮನಸ್ಸು ಮಾಡುವವರು ದುಷ್ಪ್ರೇರಣೆಯೆಂಬ ಉರ್ಲಿನಲ್ಲಿ ಸಿಕ್ಕಿಕೊಂಡು ಬುದ್ಧಿವಿರುದ್ಧವಾಗಿಯೂ ಹಾನಿಕರವಾಗಿಯೂ ಇರುವ ಅನೇಕ ಆಶೆಗಳಲ್ಲಿ ಬೀಳುತ್ತಾರೆ. ಇಂಥ ಆಶೆಗಳು ಮನುಷ್ಯರನ್ನು ಸಂಹಾರನಾಶನಗಳಲ್ಲಿ ಮುಳುಗಿಸುತ್ತವೆ" (1 ತಿಮೊಥೆ 6:9). ಜೀವನದಲ್ಲಿ ಸುಂದರರು, ಶಕ್ತಿಶಾಲಿ, ಜನಪ್ರಿಯ, ಅಥವಾ ಯಶಸ್ವಿಯಾದವರು ಆಗುವದನ್ನೇ ಗುರಿಯಾಗಿಟ್ಟುಕೊಂಡವರ ವಿಷಯವಾಗಿ ಈ ಮಾತನ್ನು ಹೇಳಬಹುದಾಗಿದೆ.

## ದೇವರ ಎಚ್ಚರಿಕೆ (ಅಧ್ಯಾಯ 18)

ಪ್ರಕಟನೆ 18ನೇ ಅಧ್ಯಾಯದ ಎಚ್ಚರಿಕೆಯು ಕೇವಲ ರೋಮಿಗಾಗಿ ಮಾತ್ರವೇ ಆಗಿರಲಿಲ್ಲ, ಆದರೆ ಕರ್ತನನ್ನು ವಿರೋಧಿಸುವ *ಎಲ್ಲರಿಗೂ* ಆಗಿರುತ್ತದೆ: ಅಧ್ಯಾಯವು *ಪ್ರತಿಯೊಂದು ದೇಶಕ್ಕೂ* ಒಂದು ಎಚ್ಚರಿಕೆಯಾಗಿದೆ.[45] ಪ್ರತಿಯೊಬ್ಬ ಕಳಕಳಿಯಿರುವ ನಾಗರಿಕನು ಹೀಗೆ ಕೇಳಿಕೊಳ್ಳಬೇಕು, "ನಮ್ಮ 'ಪಾಪಗಳ ರಾಶಿ'ಯು ಆಕಾಶವನ್ನು ಮುಟ್ಟುವದಕ್ಕೆ ಇನ್ನೆಷ್ಟು ಕಾಲ?" ಬೈಬಲ್ ಹೀಗೆ ಹೇಳುತ್ತದೆ, "ಪ್ರಜೆಗೆ ಧರ್ಮವು ಉನ್ನತಿ, ಅಧರ್ಮವು ಅವಮಾನ" (ಜ್ಞಾನೋಕ್ತಿ 14:34). ಅಧ್ಯಾಯವು ನಗರಗಳಿಗೆ, ನೆರೆಹೊರೆಯವರಿಗೆ, ಸಮಾಜಗಳಿಗೆ, ಮಾನವತಾವಾದಿ ತತ್ವಜ್ಞಾನದ ಕೇಂದ್ರಗಳಿಗೆ ಸಹ - ತಾನು ದೇವರನ್ನು ಬಿಟ್ಟು ಬದುಕಬಲ್ಲೆ ಎಂದು ಯೋಚಿಸುವ *ಯಾವನೇ ಆಗಲಿ ಮತ್ತು ಪ್ರತಿಯೊಬ್ಬರಿಗೂ* ಒಂದು ಎಚ್ಚರಿಕೆಯಾಗಿರುತ್ತದೆ.

18ನೇ ಅಧ್ಯಾಯದಿಂದ ಅಧಿಕವಾದ ಪ್ರಯೋಜನಗಳನ್ನು ಪಡೆದುಕೊಳ್ಳಲು, ಅನ್ವಯಿಕೆಯನ್ನು *ನಮಗೆ* ಮಾಡಿಕೊಳ್ಳುವೆನು. ನಾವು ದೇವರ ತಕ್ಕಡಿಯಲ್ಲಿ ತೂಗಲ್ಪಟ್ಟಾಗ, ನಾವು ಕಡಿಮೆಯಾಗಿ ಕಂಡು ಬರಬಹುದಾದ ಸಾಧ್ಯತೆಯು ಇರುತ್ತದೋ? ನಾವು ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ವಿನಾಶವು ಕಾದಿರುತ್ತದೋ? ಹೌದು! 18ನೇ ಅಧ್ಯಾಯವು ದೇವರು ಪಾಪದ ವಿಷಯದಲ್ಲಿ ಗಂಭೀರವಾಗಿದ್ದಾನೆ, ಮತ್ತು ನಾವು ಸಹ ಗಂಭೀರವಾಗಿರತಕ್ಕದ್ದು ಎಂಬ ವಿಷಯದಲ್ಲಿ ಯಾವದೇ ಸಂದೇಹವನ್ನು ಉಳಿಸುವದಿಲ್ಲ.

## ಪ್ರಭಾವ (18:3)

ರೋಮ್ ನಗರಿಯು ಒಳ್ಳೇದು ಅಥವಾ ಕೆಟ್ಟದ್ದಕ್ಕಾಗಿ ಪ್ರಭಾವವನ್ನು ಹೊಂದಿದ ಮೊದಲನೆಯದ್ದಾಗಲಿ ಅಥವಾ ಕಡೆಯದ್ದಾಗಲಿ ಆಗಿರಲಿಲ್ಲ. ಪ್ರತಿಯೊಂದು ನಗರವು - ಮತ್ತು

ಪ್ರತಿ ನಾಗರಿಕನು - ಸಹಾಯ ಮಾಡಬಹುದಾದ ಅಥವಾ ಹಾನಿಯನ್ನುಂಟು ಮಾಡಬಹುದಾದ ಪ್ರಭಾವವನ್ನು ಹೊಂದಿರುತ್ತದೆ. ಯೇಸುವು ಸಕಾರಾತ್ಮಕ ಪ್ರಭಾವದ ಶಕ್ತಿಯನ್ನು ಕುರಿತು ಒತ್ತಿ ಹೇಳುವದಕ್ಕೆ ಉಪ್ಪು ಹಾಗೂ ಬೆಳಕಿನ ದೃಷ್ಟಾಂತಗಳನ್ನು ಬಳಸಿದನು (ಮತ್ತಾಯ 5:13-16). ಪೌಲನು ನಕಾರಾತ್ಮಕ ಪ್ರಭಾವವನ್ನು ಕುರಿತು ಒತ್ತಿ ಹೇಳುವದಕ್ಕೆ ಹುಳಿಹಿಟ್ಟಿನ ಉದಾಹರಣೆಯನ್ನು ಕೊಡುತ್ತಾನೆ (1 ಕೊರಿಂಥ 5:6; ಗಲಾತ್ಯ 5:9). Elihu Burrittನು ಹೇಳಿದ್ದೇನೆಂದರೆ, "ಯಾವ ಮನುಷ್ಯನೂ ಈ ಲೋಕದಲ್ಲಿ ಮಾನವನ ಒಟ್ಟಾರೆ ಸಂತೋಷವನ್ನು ಹೆಚ್ಚಿಸುವ ಅಥವಾ ತಗ್ಗಿಸುವ ವ್ಯಕ್ತಿಯಾಗಿ ಬರದೆ ಇರುವದಕ್ಕಾಗುವದಿಲ್ಲ."[46]

### "ನನ್ನ ಪ್ರಜೆಗಳೇ, ಅವಳನ್ನು ಬಿಟ್ಟು ಬನ್ನಿರಿ" (18:4, 5)

ಹತ್ತೊಂಭತ್ತು ವರ್ಷಗಳ ಹಿಂದಿನ ದೇವರ ಮಾತುಗಳು ಮೊದಲು ಮಾತಾಡಿದ ವೇಳೆ ಇದ್ದಷ್ಟೇ ಇಂದು ಸಹ ಅಷ್ಟೇ ಪ್ರಸ್ತುತ ಹಾಗೂ ಅಗತ್ಯವಾಗಿರುತ್ತವೆ: "ನನ್ನ ಪ್ರಜೆಗಳೇ, ಅವಳನ್ನು ಬಿಟ್ಟುಬನ್ನಿರಿ; ನೀವು ಅವಳ ಪಾಪಗಳಲ್ಲಿ ಪಾಲುಗಾರರಾಗಬಾರದು; ಅವಳಿಗಾಗುವ ಉಪದ್ರವಗಳಿಗೆ ಗುರಿಯಾಗಬಾರದು. ಅವಳ ಪಾಪಗಳು ಒಂದರ ಮೇಲೊಂದು ಸೇರಿ ಆಕಾಶದ ಪರ್ಯಂತರಕ್ಕೂ ಬೆಳೆದವೆ" (ವಚನಗಳು 4, 5). ರೋಮ್ ನಗರಿಯು ಮೊದಲ ಶತಮಾನದಲ್ಲಿ ಕ್ರೈಸ್ತರನ್ನು ಪ್ರಲೋಭನೆಗೊಳಪಡಿಸಲು ಪ್ರಯತ್ನಿಸಿತು, ಮತ್ತು ಇಂದು ಲೋಕವು ದೇವರ ಜನರನ್ನು ಪ್ರಲೋಭನೆಗೊಳಿಸಲು ಪ್ರಯತ್ನಿಸುತ್ತದೆ.

"ಬಿಟ್ಟು ಬನ್ನಿರಿ" ಎಂಬ ಕರೆಯು ಬೈಬಲಿನುದ್ದಕ್ಕೂ ಸಿಕ್ಕುತ್ತದೆ: ದೇವದೂತರು ಲೋಟನಿಗೆ ಆತನ ಕುಟುಂಬವನ್ನು ಒಟ್ಟುಗೂಡಿಸಿಕೊಂಡು ಸೊದೋಮನ್ನು ಬಿಟ್ಟು ಓಡಿ ಹೋಗಬೇಕೆಂದು ಹೇಳಿದರು (ಆದಿಕಾಂಡ 19:12, 13). ಮೋಶೆಯು ಇಸ್ರಾಯೇಲ್ಯರಿಗೆ ಕೋರಹ ಹಾಗೂ ಆತನ ಜೊತೆಯ ಬಂಡಾಯಗಾರರ ಗುಡಾರಗಳಿಂದ ತೊಲಗಿ ಹೋಗುವಂತೆ, ಮತ್ತು "ಇವರ ಸೊತ್ತಿನಲ್ಲಿ ಯಾವದನ್ನೂ ಮುಟ್ಟಬಾರದು; ಇವರ ದೋಷಗಳಿಗಾಗಿ ಉಂಟಾಗುವ ಶಿಕ್ಷೆ ನಿಮ್ಮನ್ನೂ ಕೊಚ್ಚಿಕೊಂಡು ಹೋದೀತು" ಎಂದು ಆಜ್ಞಾಪಿಸಿದನು (ಅರಣ್ಯಕಾಂಡ 16:26). ಯೆಶಾಯನು ಇಸ್ರಾಯೇಲ್ಯರಿಗೆ "ಬಾಬೆಲಿನಿಂದ ಹೊರಡಿರಿ"; "ತೊಲಗಿರಿ, ತೊಲಗಿರಿ, ಬಾಬೆಲಿನಿಂದಹೊರಡಿರಿ, ಅಶುದ್ಧವಾದ ಯಾವದನ್ನೂ ಮುಟ್ಟದಿರಿ" ಎಂದು ಅಪ್ಪಣೆ ಕೊಟ್ಟನು (ಯೆಶಾಯ 48:20; 52:11). ಯೆರೆಮೀಯನು ಅದನ್ನೇ ಹೇಳಿದನು: "ನೀವು ಬಾಬೆಲಿನೊಳಗಿಂದ ಓಡಿಹೋಗಿ ನಿಮ್ಮ ನಿಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಿರಿ; ಅದಕ್ಕೆ ಉಂಟಾಗುವ ದಂಡನೆಗೆ ಒಳಗಾಗಬೇಡಿರಿ" (ಯೆರೆಮೀಯ 51:6). ಹೊಸ ಒಡಂಬಡಿಕೆಯಲ್ಲಿ ಪೌಲನು ಪ್ರತ್ಯೇಕವಾಗಿ ಬರಬೇಕೆಂಬ ಕೂಗನ್ನು ಪ್ರತಿಧ್ವನಿಸಿದನು: "ಆದದರಿಂದ ಅನ್ಯಜನರ ಮಧ್ಯದಲ್ಲಿಂದ ಹೊರಟು ಬಂದು ಪ್ರತ್ಯೇಕವಾಗಿರಿ; ಅಶುದ್ಧವಾದ ಯಾವದನ್ನೂ ಮುಟ್ಟದಿರಿ ಎಂದು ಕರ್ತನು ಹೇಳುತ್ತಾನೆ" (2 ಕೊರಿಂಥ 6:17).

ಉಲ್ಲೇಖಿಸಲಾಗಿರುವ ಕೆಲವೊಂದು ಉದಾಹರಣೆಗಳಲ್ಲಿ, ಕರೆಯು ನಿರ್ದಿಷ್ಟವಾದ ಸ್ಥಳಗಳನ್ನು ಅಕ್ಷರಶಃ ಬಿಟ್ಟು ಬರಬೇಕೆಂಬುದಕ್ಕಾಗಿ ಕೊಡಲ್ಪಟ್ಟಿತ್ತು (ನೋಡಿರಿ ಆದಿಕಾಂಡ 12:1, 4). ಅನೇಕ ಸಾರಿ, ದೇವರ ಜನರಿಗೆ ಒಂದು ಸ್ಥಳವನ್ನು ಬಿಟ್ಟು ಬರುವಂತೆ ಕೊಡಲಾದ ಆದೇಶವು ಅದರೊಂದಿಗೆ ಸೇರಿಕೊಂಡು ಅವರೂ ನಾಶವಾಗಬಾರದು ಎಂಬುದಕ್ಕೋಸ್ಕರವೇ ಇರುತ್ತಿತ್ತು. ಲೋಟನ ವಿಷಯದಲ್ಲಿ ನೋಡುವದಾದರೆ, ಆತನು ಹಾಗೂ ಆತನ ಕುಟುಂಬದವರು ಓಡಿ ಹೋಗುವ ಹೊರತು, ಅವರು ಸೊದೋಮ್ ಮತ್ತು ಗೊಮೋರ ಪಟ್ಟಣಗಳಿಗಾದ ಗತಿಯಲ್ಲಿ ಪಾಲುಗಾರರಾಗುತ್ತಿದ್ದರು (ಆದಿಕಾಂಡ 19:12, 13). ಕೋರಹ

ಹಾಗೂ ಆತನ ಜೊತೆಯಲ್ಲಿ ಬಂಡಾಯವೆದ್ದವರ ಮೇಲೆ ದೇವರ ರೌದ್ರವು ಇಳಿದು ಬಂದ ವೇಳೆ, ಈ ಸಂಚುಕೋರರ ಗುಡಾರಗಳಲ್ಲಿ ಉಳಿದುಕೊಂಡವರು ಭೂಮಿಯಿಂದ ನುಂಗಿ ಹಾಕಲ್ಪಟ್ಟರು (ಅರಣ್ಯಕಾಂಡ 16:23-34).

ಈ ವಿಧವಾದ "ಬಿಟ್ಟು ಬರುವಿಕೆ" ಕುರಿತಾಗಿರುವ ಹೊಸ ಒಡಂಬಡಿಕೆಯ ಉದಾಹರಣೆಯನ್ನು ಯೆರೂಸಲೇಮಿನ ವಿಷಯವಾಗಿ ಯೇಸುವು ತನ್ನ ಶಿಷ್ಯರಿಗೆ ನುಡಿದ ಮಾತುಗಳಲ್ಲಿ ಕಾಣಬಹುದಾಗಿದೆ: "ಇದಲ್ಲದೆ ಹಾಳುಮಾಡುವ ಅಸಹ್ಯ ವಸ್ತುವು ನಿಲ್ಲಬಾರದ ಸ್ಥಳದಲ್ಲಿ ನಿಂತಿರುವದನ್ನು ನೀವು ಕಾಣುವಾಗ [ರೋಮನ್ ಸೈನ್ಯವು ಪಟ್ಟಣವನ್ನು ಸುತ್ತುವರೆದಿರುವದನ್ನು ಸೂಚಿಸುವ ಒಂದು ಅಂತ್ಯಕಾಲಿಕ ಉಲ್ಲೇಖ] ಯೂದಾಯದಲ್ಲಿರುವವರು ಬೆಟ್ಟಗಳಿಗೆ ಓಡಿಹೋಗಲಿ" (ಮಾರ್ಕ 13:14). ಸಭೆಯ ಇತಿಹಾಸಕಾರನಾದ Eusebiusನು ನಮಗೆ ಹೇಳುವದೇನೆಂದರೆ, ಯೆರೂಸಲೇಮು ಪತನಗೊಂಡ ವೇಳೆ, ಕ್ರೈಸ್ತ ಯೆಹೂದಿಗಳು ತಮ್ಮ ಪಟ್ಟಣಕ್ಕಾದ ಗತಿಯಿಂದ ತಪ್ಪಿಸಿಕೊಳ್ಳುವವರಾಗಿ Pellaಗೆ ಓಡಿ ಹೋದರು.[47]

ಹೇಗೂ, ಅನೇಕ ಸಾರಿ, "ಬಿಟ್ಟು ಬನ್ನಿರಿ" ಎಂಬ ಆಜ್ಞೆಯು ಸ್ಥಳದ ಪ್ರತಿಕೂಲ ಪ್ರಭಾವಕ್ಕೊಳಗಾಗಲಿ ನಿರಾಕರಿಸುವದು ಎಂದರ್ಥವಾಗಿರುತ್ತಿತ್ತು. ಯೆಶಾಯ ಹಾಗೂ ಯೆರೆಮೀಯರು ಬಾಬೆಲನ್ನು ಬಿಟ್ಟು ಬರುವಂತೆ ಮಾಡಿದ ಮನವಿಗಳಲ್ಲಿ ಇದೇ ವಿಷಯವು ಕಂಡು ಬರುತ್ತದೆ: ಬಾಬೆಲಿಗೆ ಸೆರೆಯಾಗಿ ಒಯ್ಯಲ್ಪಟ್ಟಿದ್ದವರಲ್ಲಿ ಕೆಲವರು ಅಲ್ಲಿಯೇ ಬೇರೂರುವದಕ್ಕೆ ಆರಂಭಿಸಿದ್ದರು. ಅವರು ಅನ್ಯಜನರ ರೀತಿಗಳಲ್ಲಿ ಪಾಲುಗಾರರಾಗುವದಕ್ಕೆ ಆರಂಭಿಸಿದ್ದರು. ಅವರ ತತ್ವಗಳು ಜಾರಿ ಹೋಗುತ್ತಿದ್ದವು; ಪ್ರಾಪಂಚಿಕತೆಯು ಒಳಗೆ ಕಾಲಿಡುತ್ತಲಿತ್ತು; ಅವರು "ಬದುಕುವವರಾಗಿ ಬದುಕಲು ಬಿಡುವದಕ್ಕೆ"[48] ಸಿದ್ಧರಾಗಿದ್ದರು. ಹೀಗಿರುವದರಿಂದ ಪ್ರವಾದಿಗಳು ಅವರಿಗೆ "ಬಿಟ್ಟು ಬನ್ನಿರಿ" ಎಂದು ಮೊರೆಯಿಟ್ಟರು - ಸರಳವಾಗಿ ಹೇಳುವದಾದರೆ, ಬಾಬೆಲಿನವರ ಜೀವನ ರೀತಿಯಿಂದ ಮಲೀನಗೊಳ್ಳದಿರಿ ಎಂದು ಹೇಳಿದರು.

ಪೌಲನು 2 ಕೊರಿಂಥ 6ನೇ ಅಧ್ಯಾಯದಲ್ಲಿ ಅದನ್ನೇ ಒತ್ತಿ ಹೇಳಿದನು. ಆತನು ಕೊರಿಂಥದಲ್ಲಿರುವ ಕ್ರೈಸ್ತರಿಗೆ ಇಜ್ಜೋಡಾಗುವ ನೆಂಟಸ್ತಿಕೆಗಳು ಅವರನ್ನು ತಾವು ತೊರೆದು ಬಂದಿದ್ದ ಅದೇ ಪಾಪಭರಿತ ಜೀವನಶೈಲಿಗಳಿಗೆ ಮರಳಿ ಎಳೆದುಕೊಂಡು ಹೋಗುವವು ಎಂದು ಬೇಡಿಕೊಂಡನು:

> ನೀವು ಕ್ರಿಸ್ತನಂಬಿಕೆಯಿಲ್ಲದವರೊಂದಿಗೆ ಸೇರಿ ಇಜ್ಜೋಡಾಗಬೇಡಿರಿ. ಧರ್ಮಕ್ಕೂ ಅಧರ್ಮಕ್ಕೂ ಜೊತೆಯೇನು? ಬೆಳಕಿಗೂ ಕತ್ತಲೆಗೂ ಐಕ್ಯವೇನು? ಕ್ರಿಸ್ತನಿಗೂ ಸೈತಾನನಿಗೂ ಒಡನಾಟವೇನು? ನಂಬುವವನಿಗೂ ನಂಬದೆ ಇರುವವನಿಗೂ ಪಾಲುಗಾರಿಕೆ ಏನು? ದೇವರ ಮಂದಿರಕ್ಕೂ ವಿಗ್ರಹಗಳಿಗೂ ಒಪ್ಪಿಗೆ ಏನು? ನಾವು ಜೀವಸ್ವರೂಪನಾದ ದೇವರ ಮಂದಿರವಾಗಿದ್ದೇವಲ್ಲಾ. ಇದರ ಸಂಬಂಧವಾಗಿ ದೇವರು ನಾನು ಅವರಲ್ಲಿ ವಾಸಿಸುತ್ತಾ ತಿರುಗಾಡುವೆನು, ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು ಎಂದು ಹೇಳಿದ್ದಾನೆ. ಆದದರಿಂದ ಅನ್ಯಜನರ ಮಧ್ಯದಲ್ಲಿಂದ ಹೊರಟು ಬಂದು ಪ್ರತ್ಯೇಕವಾಗಿರಿ; ಅಶುದ್ಧವಾದ ಯಾವದನ್ನೂ ಮುಟ್ಟದಿರಿ ಎಂದು ಕರ್ತನು ಹೇಳುತ್ತಾನೆ ... (2 ಕೊರಿಂಥ 6:14-17).

"ಲೋಕದಿಂದ ಪ್ರತ್ಯೇಕವಾಗಿರುವದು" ಅಥವಾ "ಲೋಕದಿಂದ ದೂರವಾಗಿರುವದು" ಎಂಬುದರ ಅರ್ಥವು ನಾವು ಮುಂದಿನ ಗಗನನೌಕೆಯಲ್ಲಿ ಅವಿತುಕೊಂಡಿರಬೇಕು ಅಥವಾ

ಮತವೊಂದರಲ್ಲಿ ಬಚ್ಚಿಟ್ಟುಕೊಂಡಿರಬೇಕು ಎಂಬುದಾಗಿರುವದಿಲ್ಲ. ಯೇಸುವು ತನ್ನ ಶಿಷ್ಯರು ಲೋಕ*ದಲ್ಲಿ* ಇರುವವರು, ಆದರೆ "ಲೋಕ*ದವ*ರಲ್ಲ" ಎಂಬುದಾಗಿ ಒತ್ತಿ ಹೇಳಿದನು (ಯೋಹಾನ 17:14-18; ಒತ್ತಿ ಹೇಳಿದ್ದು ನನ್ನದು). ಬದಲಾಗಿ, "ಪ್ರತ್ಯೇಕವಾಗಿರುವದು" ಎಂದರೆ, ನಮ್ಮ ಮೌಲ್ಯಗಳು ಹಾಗೂ ಮಾನದಂಡಗಳಾವವೆಂಬುದಾಗಿ ತಾಕೀತು ಮಾಡುವ ಹಾಗೆ ಲೋಕಕ್ಕೆ ಅವಕಾಶವನ್ನು ಕೊಡಬಾರದು ಎಂಬುದೆ. Barclayನು ಅಭಿಪ್ರಾಯ ಪಟ್ಟದ್ದೇನೆಂದರೆ, "ಇದು ಲೋಕದಿಂದ ನಿವೃತ್ತಿ ಪಡೆಯುವ ಕುರಿತ ಪ್ರಶ್ನೆಯಲ್ಲ; ಇದು ಲೋಕದೊಳಗೆ ವ್ಯತ್ಯಾಸವಾಗಿ ಜೀವಿಸುವ ಕುರಿತಾದ ಪ್ರಶ್ನೆಯಾಗಿದೆ."[49] Tenneyನು ಹೇಳಿದ್ದೇನೆಂದರೆ, "ದೇವರ ಕರೆಯ ಅರ್ಥವು ವಿಶ್ವಾಸಿಗಳು ದೊಡ್ಡಸ್ತಿಕೆಯಿಂದ ಬೇರೆಯವರೊಂದಿಗಿನ ಸಂಬಂಧವನ್ನು ನಿರಾಕರಿಸಬೇಕು ಎಂದಾಗಿರುವದಿಲ್ಲ, ಅಲ್ಲದೆ 'ನಾನು ನಿನಗಿಂತ ಪರಿಶುದ್ಧನು' ಎಂಬ ಮನೋಭಾವವನ್ನು ಆಳವಡಿಸಿಕೊಳ್ಳಬೇಕೆಂದಾಗಲಿ ಸಹ ಆಗಿರುವದಿಲ್ಲ. ಅವರು ವಿಭಿನ್ನರಾಗಿರಬೇಕು ಎಂಬುದಂತೂ ಆತನ ಉದ್ದೇಶವಾಗಿರುತ್ತದೆ."[50]

ಹೊಸ ಒಡಂಬಡಿಕೆಯಲ್ಲಿ ಯಾವದಾದರೂ ಸ್ಪಷ್ಟವಾಗಿ ಕಲಿಸಲ್ಪಟ್ಟಿರುವದಾದರೆ, ಅದು ಕ್ರೈಸ್ತರು ಒಂದು ಪ್ರತ್ಯೇಕವಾದ ಹಾಗೂ ಭಿನ್ನವಾದ ಜನರಾಗಿರಬೇಕು ಎಂಬುದೆ. ಹೊಸ ಒಡಂಬಡಿಕೆಯಲ್ಲಿ, ಪ್ರಕಟನೆ ಪುಸ್ತಕವೂ ಸೇರಿದಂತೆ, ಒಬ್ಬ ವಿಶ್ವಾಸಿಗೆ ಕೊಡಲಾಗಿರುವ ಅತ್ಯಂಥ ಸಾಮಾನ್ಯ ಬಿರುದು ಎಂದರೆ "ದೇವಮನುಷ್ಯನು," ಅದು ಒಂದು ಪರಿಶುದ್ಧ ಉದ್ದೇಶಕ್ಕಾಗಿ "ಮೀಸಲಾಗಿಡಲ್ಪಟ್ಟ" ಒಬ್ಬನನ್ನು ಸೂಚಿಸುತ್ತದೆ (5:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). "ದೇವಜನರು" ಎಂಬ ಬಿರುದು ಪ್ರಕಟನೆ ಪುಸ್ತಕದಲ್ಲಿ ಹದಿಮೂರು ಸಾರಿ ಕಾಣಿಸಿಕೊಳ್ಳುತ್ತದೆ. ಕ್ರೈಸ್ತರು ಲೋಕದೊಳಗಿಂದ ಹೊರಗೆ ಬಂದು ಕ್ರಿಸ್ತನೊಂದಿಗೆ ಒಂದು ಹೊಸ ಸಂಬಂಧವನ್ನಿಟ್ಟುಕೊಳ್ಳಲು ಕರೆಯಲ್ಪಟ್ಟಿದ್ದಾರೆ. ಯಾಕೋಬನು ಹೀಗೆ ಬರೆದನು, "... ಇಹಲೋಕಸ್ನೇಹವು ದೇವವೈರವೆಂದು ನಿಮಗೆ ತಿಳಿಯದೋ? ಲೋಕಕ್ಕೆ ಸ್ನೇಹಿತನಾಗಬೇಕೆಂದಿರುವವನು ತನ್ನನ್ನು ದೇವರಿಗೆ ವಿರೋಧಿಯನ್ನಾಗಿ ಮಾಡಿಕೊಳ್ಳುತ್ತಾನೆ" (ಯಾಕೋಬ 4:4). Tenneyನು ಹೀಗೆ ಬರೆದನು:

> ಒಬ್ಬ ಕ್ರೈಸ್ತನು ತನ್ನ ಆಸಕ್ತಿಗಳು, ಉಪಕಸುಬುಗಳು, ಮತ್ತು ಗುರಿಗಳಿಗೂ, ಮತ್ತು ಕ್ರೈಸ್ತೇತರರಿಗಿರುಂಥವುಗಳಿಗೂ ಭಿನ್ನನಾಗಿರುವ ಮೂಲಕ ಗುರುತಿಸಲ್ಪಡತಕ್ಕದ್ದು ...
>
> ... ಲೋಕವು ಒಬ್ಬ ಸೇವಕನೇ, ಹೊರತು ಯಜಮಾನನಲ್ಲ, ಒಂದು ಪರಿಸರವೇ, ಹೊರತು ಅನುಸರಿಸುವದಕ್ಕೆ ಇರುವ ಒಂದು ಮಾನದಂಡವಲ್ಲ; ಒಬ್ಬ ವೈರಿಯೇ, ಹೊರತು ಮಿತ್ರನಲ್ಲ. ಒಬ್ಬ ಕ್ರೈಸ್ತನು ಲೋಕದ ಆದರ್ಶಗಳಂತೆ ಹಾಗೂ ಬಳಕೆಗಳಂತೆ ನಡೆಯುವದರ ಬದಲಾಗಿ ಲೋಕಕ್ಕೆ ಸಾಕ್ಷಿಯಾಗಿರುವದಕ್ಕೆ ಅಪೇಕ್ಷಿಸಬೇಕು.[51]

ಪೌಲನು ಹೀಗೆ ಕರೆ ಕೊಟ್ಟನು, "ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ" (ರೋಮಾ 12:2).

ನಾವು ಲೋಕದ ಮೌಲ್ಯದ ವ್ಯವಸ್ಥೆಯನ್ನು, ಮತ್ತು ಆಕೆಯ ದೃಷ್ಟಿಕೋನವನ್ನು "ಬಿಟ್ಟು ಬರಬೇಕು." ನಾವು "ದುಸ್ಸಹವಾಸವು ಸದಾಚಾರವನ್ನು ಕೆಡಿಸುತ್ತದೆ" ಎಂಬುದನ್ನು ತಿಳಿದು ದೂರವಿರಬೇಕು (1 ಕೊರಿಂಥ 15:33). ನಾವು ಈ ಲೋಕದಲ್ಲಿ ವಿಫುಲವಾಗಿರುವಂಥ ಸುಳ್ಳು ಉಪದೇಶಗಳನ್ನು "ಬಿಟ್ಟು ಬರಬೇಕು" (ರೋಮಾ 16:17, 18; 2 ಯೋಹಾನ 9-11).

ಹೇಗೂ, "ಬಿಟ್ಟು ಬನ್ನಿರಿ" ಎಂಬುದು ಸಂಪೂರ್ಣ ನಕಾರಾತ್ಮಕವಾದ್ದೇನೂ ಅಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ನಾವು ದೇವರ *ಬಳಿಗೆ* ಬರುವದಕ್ಕಾಗಿ ಬಾಬೆಲನ್ನು

*ಬಿಟ್ಟು* ಬರಬೇಕು (ನೋಡಿರಿ ಯೆರೆಮೀಯ 3:22). ಕ್ರೈಸ್ತರು ಬಾಬೆಲಿಗೆ ಸೇರಿದವರಲ್ಲ, ಆದರೆ ದೇವರಿಗೆ ಸೇರಿದವರು. ಅವರು ತಮ್ಮನ್ನು ಮಿಥ್ಯತ್ವಕ್ಕೆ ಸಮರ್ಪಿಸಿಕೊಳ್ಳುವದರ ಬದಲಾಗಿ ಸತ್ಯಕ್ಕೆ ಸಮರ್ಪಿಸಿಕೊಳ್ಳಬೇಕು; ವಿಕೃತಿಗೆ ಅಲ್ಲ; ಆದರೆ ನಿರ್ಮಲತೆಗೆ ಸಮರ್ಪಿಸಿಕೊಳ್ಳಬೇಕು; ನಿರರ್ಥಕ ಅನುಕೂಲತೆಗಿಂತಲೂ ದೇವರ ಚಿತ್ತಕ್ಕೆ ಸಮರ್ಪಿತರಾಗಿರತಕ್ಕದ್ದು.[52]

ಕರ್ತನು ನಮಗೆ "ಅವಳನ್ನು ಬಿಟ್ಟು ಬನ್ನಿರಿ" ಎಂದು ಕೊಟ್ಟಿರುವ ಆದೇಶಕ್ಕೆ ನಾವು ಕಿವಿಗೊಡುವದಾದರೆ, ಆತನು ಹೀಗೆ ವಾಗ್ದಾನ ಮಾಡಿದ್ದಾನೆ, "ನಾನು ನಿಮ್ಮನ್ನು ಸೇರಿಸಿಕೊಂಡು ನಿಮಗೆ ತಂದೆಯಾಗಿರುವೆನು; ನೀವು ನನಗೆ ಕುಮಾರ ಕುಮಾರಿಯರು ಆಗಿರುವಿರಿ" (2 ಕೊರಿಂಥ 6:17, 18).

ಪ್ರತಿಯೊಬ್ಬ ವ್ಯಕ್ತಿಯು ಬಾಬೆಲಿನ ನಿವಾಸಿಯಾಗಿರುವೆನೋ ಅಥವಾ ಪರಲೋಕದ ಪ್ರಜೆಯಾಗಿರುವೆನೋ ಎಂಬುದನ್ನು ತಾನೇ ನಿರ್ಧರಿಸಿಕೊಳ್ಳತಕ್ಕದ್ದು.[53] ಬಿಟ್ಟು ಬರುವದು ಏಕೆ ಪ್ರಾಮುಖ್ಯವಾಗಿದೆ? ಇಂದು, ಲೋಕವು ಈಗಲೂ ತನ್ನ "ಕೈಚಳಕ"ವನ್ನು ತೋರಿಸುತ್ತದೆ: ಕ್ಷಣಿಕವಾದದ್ದನ್ನು ಶಾಶ್ವತವೆಂಬಂತೆ ಕಾಣಿಸುವ ಹಾಗೆ, ಸಾಂದರ್ಭಿಕವಾದದ್ದನ್ನು ಅತ್ಯಾವಶ್ಯಕವೆಂಬಂತೆ, ಮತ್ತು ಅಶ್ಲೀಲವಾದದ್ದನ್ನು ಹಾನಿಕಾರಕವಲ್ಲದ್ದೆಂಬಂತೆ ಕಾಣಿಸುವ ಹಾಗೆ ಮಾಡುತ್ತದೆ. ನಾವು ಒಪ್ಪಿಕೊಳ್ಳುವದಕ್ಕೆ ಬಯಸುವದಕ್ಕಿಂತಲೂ ಅಧಿಕವಾದ ಪ್ರಭಾವವನ್ನ ಲೋಕವು ನಮ್ಮ ಮೇಲೆ ಹೊಂದಿರುತ್ತದೆ: ಒಂದು ಕಾಲದಲ್ಲಿ ನಾವು ಪಾಪವನ್ನು ಕಂಡು ಆಘಾತಗೊಂಡ ಪ್ರಕಾರ ಈಗ ಆಘಾತಗೊಳ್ಳುವದಿಲ್ಲ; ನಾವು ಪಾಪಿಗಳನ್ನು ಎಚ್ಚರಿಸುವದರಲ್ಲಿ ಮುಚ್ಚುಮರೆಯಿಲ್ಲದೆ ಮಾತಾಡುವವರಾಗಿರುವದಿಲ್ಲ; ನಾವು "ಸಂಗತಿಗಳಿಗೆ" ಅಂಟಿಕೊಂಡಿದ್ದೇವೆ. ರೋಮ್ ನಗರವು ಎಷ್ಟು ನಿಶ್ಚಯವಾಗಿ ನಾಶನದ ಕಡೆಗೆ ಸಾಗುತ್ತಿತ್ತೋ, ಅಷ್ಟೇ ಖಚಿತವಾಗಿ "ಲೋಕವು ಅಳಿದು ಹೋಗುವದು" (1 ಯೋಹಾನ 2:17) ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಪ್ರಕಟನೆ 18ನೇ ಅಧ್ಯಾಯವು ನಾವೆಲ್ಲರೂ ಕಿವಿಗೊಡಬೇಕಾದಂಥ ಒಂದು ಸಂಗತಿಯನ್ನು ಪ್ರಕಟಿಸುತ್ತದೆ. Hendriksenನು ಹೀಗೆ ಒತ್ತಿ ಹೇಳಿದನು,

> ... ಸುಖದ-ಹುಚ್ಚೆರುವ, ದುರಹಂಕಾರದ ಲೋಕವು, ಅದರ ಎಲ್ಲಾ ಮೋಹಕ್ಕೊಳಪಡಿಸುವ ವಿಲಾಸಗಳು ಹಾಗೂ ಭೋಗಗಳೊಂದಿಗೆ, ಅದರ ಕ್ರೈಸ್ತವಿರೋಧಿ ತತ್ವಜ್ಞಾನ ಹಾಗೂ ಸಂಸ್ಕೃತಿಯ ಸಮೇತವಾಗಿ, ದೇವರನ್ನು ತೊರೆದು ಶರೀರದಾಸೆಗಳ ಹಾಗೂ ಮನಸ್ಸಿನ ಬಯಕೆಗಳ ಪ್ರಕಾರ ಜೀವಿಸಿದ ತುಂಬಿ ತುಳುಕುವ ಜನಸಮೂಹಗಳ ಸಮೇತವಾಗಿ, ನಾಶವಾಗುವದು.[54]

ಪ್ರಕಟನೆ ಪುಸ್ತಕದ ಮೊದಲನೆಯ ವಾಚಕರಿಗೆ ಅಗತ್ಯವಾಗಿದ್ದಷ್ಟೇ ನಿಶ್ಚಯವಾಗಿ ನಮ್ಮ ಮುಂದಿರುವ ವಾಕ್ಯಭಾಗದ ಎರಡರಷ್ಟು ಎಚ್ಚರಿಕೆಯ ಅಗತ್ಯವಿರುತ್ತದೆ: ನಾವು ದೇವರ ಕೃಪಾಕಟಾಕ್ಷವನ್ನು ಆನಂದಿಸಬೇಕಾದರೆ, "ನಾವು ಹೊರಗೆ ಬಂದು ಪ್ರತ್ಯೇಕವಾಗಿರತಕ್ಕದ್ದು." ನಾವು ದೇವರ ರೌದ್ರದಿಂದ ತಪ್ಪಿಸಿಕೊಳ್ಳಬೇಕೆಂದರೆ, ನಮ್ಮನ್ನು ಪಾಪದ ಬಲೆಯಲ್ಲಿ ಸಿಕ್ಕಿಕೊಳ್ಳುವಂತೆ ಆಮಿಷಕ್ಕೊಳಗಾಗಲು ಅವಕಾಶ ಕೊಡಬಾರದು. ನಾವು ಕರೆಯ ಕುರಿತು ಆಲೋಚಿಸುತ್ತಿರುವ ವೇಳೆ, ನಾವು ಕೀರ್ತನೆಗಾರನೊಂದಿಗೆ ಸೇರಿ ಹೀಗೆ ಮೊರೆಯಿಡಬಲ್ಲೆವಷ್ಟೇ, "ದೇವರೇ, ದೂರವಾಗಿರಬೇಡ. ನನ್ನ ದೇವರೇ, ಬೇಗ ಸಹಾಯಮಾಡು" (ಕೀರ್ತನ 71:12).

ಬಾಬೆಲಿನ ಮಾನದಂಡಗಳನ್ನು ಅಂಗೀಕರಿಸಿಕೊಳ್ಳಬೇಡಿರಿ. ಬಾಬೆಲ್/ರೋಮ್ ಇಂದು

ನಮ್ಮನ್ನು ಬಲೆಗೆ ಹಾಕಿಕೊಳ್ಳಲು ಪ್ರಯತ್ನಿಸುತ್ತಿರುವ ಲೋಕವನ್ನು ಪ್ರತಿನಿಧಿಸುತ್ತದೆ. ನಾವು ಆಕೆಯ ಮೌಲ್ಯ ವ್ಯವಸ್ಥೆಯನ್ನು ಸ್ವೀಕರಿಕೊಳ್ಳುವ ಧೈರ್ಯವನ್ನೂ ಮಾಡಕೂಡದು. ನಾವು ಕರ್ತನ ಬಳಿಗೆ ಓಡೋಣ ಮತ್ತು ಆತನನ್ನೇ ಅಂಟಿಕೊಂಡಿರೋಣ, ಹೀಗಾದರೆ ನಾವು ಸಹ "ತಕ್ಕಡಿಯಲ್ಲಿ ತೂಗಲ್ಪಟ್ಟು ಕಡಿಮೆಯಾಗಿ ಕಂಡು" ಬರುವದಿಲ್ಲ (ನೋಡಿರಿ ದಾನಿಯೇಲ 5:27; KJV).

ನೀವು ಯಾರೇ ಆಗಿದ್ದರೂ ಸರಿಯೇ, ಅಥವಾ ನಿಮ್ಮ ಆತ್ಮೀಕ ಸ್ಥಿತಿಯು ಹೇಗಿದ್ದರೂ ಸರಿಯೇ, ಪ್ರಕಟನೆ 18:4ನೇ ವಚನವು *ನಿಮ್ಮೊಂದಿಗೆ* ಮಾತಾಡುವದಾಗಿದೆ. ದೇವರು *ನಿಮ್ಮೊಂದಿಗೆ* ಮಾತಾಡುವವನಾಗಿ, "ಬಿಟ್ಟು ಬನ್ನಿರಿ! *ಈಗಲೇ* ಬಿಟ್ಟು ಬನ್ನಿರಿ!"

ನಮ್ಮ ವಾಕ್ಯಭಾಗದಲ್ಲಿರುವ "ಒಂದೇ ದಿನದಲ್ಲಿ" ಮತ್ತು "ಒಂದೇ ಗಳಿಗೆಯಲ್ಲಿ" ಎಂಬ ಪದಗಳನ್ನು ಅಕ್ಷರಶಃವಾಗಿ ಅರ್ಥೈಸಿಕೊಳ್ಳಕೂಡದು - ಆ ಪದಗಳು ರೋಮಿಗೆ ಅವಸಾನವು ಏಕಾಏಕಿಯಾಗಿ ಸಂಭವಿಸಲಿತ್ತೆಂಬುದನ್ನು ಸೂಚಿಸುತ್ತವಷ್ಟೇ - ಆದರೆ ಜೀವನದ ಬಗ್ಗೆ ಪರಿಚಿತವಿರುವವರಿಗೆ ದುರಂತವು ಅಷ್ಟೇ ತ್ವರಿತವಾಗಿ ಸಂಭವಿಸಬಲ್ಲದೆಂದು ಬಲ್ಲರು. ವಿನಾಶವು ಒಂದೇ ದಿನದಲ್ಲಿ ಬರಬಲ್ಲದೋ? ಪ್ರವಾಹದ ಕಾರಣದಿಂದ ಸಮಸ್ತವನ್ನೂ ಕಳೆದುಕೊಂಡವರನ್ನು ಕೇಳಿರಿ. ವಿನಾಶವು ಒಂದೇ ಗಳಿಗೆಯಲ್ಲಿ ಬರಬಲ್ಲದೋ? ಕರಾವಳಿ ಪ್ರದೇಶವನ್ನು ಛಿದ್ರಗೊಳಿಸಿದ ಇತ್ತೀಚಿನ ಸುಂಟರಗಾಳಿಯ ನಿಮಿತ್ತ ಎಲ್ಲವನ್ನೂ ಕಳೆದುಕೊಂಡವರನ್ನು ಕೇಳಿರಿ. ವಿನಾಶವು ಒಂದು ನಿಮಿಷದಲ್ಲಿ ಬರಬಲ್ಲದೋ? ಒಂದು ಭೂಕಂಪದಿಂದಾಗಿ ಮನೆಗಳು ಹಾಗೂ ಜೀವಿತಗಳು ಒಡೆದು ಹೋಗಿರುವವರನ್ನು ಕೇಳಿರಿ. ವಿನಾಶವು ಒಂದು *ಕ್ಷಣದಲ್ಲಿ* ಸಹ ಬರಬಲ್ಲದು. ಸ್ವಲ್ಪ ಕಾಲದ ಹಿಂದೆಯಷ್ಟೆ, ಸ್ಥಳೀಯ ಸುದ್ದಿವಾಚಕನು ಒಂದು ದುರಂತದ ಕುರಿತು ಹೇಳಿದನು: ಒಂದು ಟ್ರಕ್ ಚಾಲಕನು ಒಂದು ಸಿಗರೆಟನ್ನು ಹೊತ್ತಿಸಿಕೊಳ್ಳುವದಕ್ಕೋಸ್ಕರ "ಒಂದು ಕ್ಷಣವಷ್ಟೇ" ತನ್ನ ಗಮನವನ್ನು ಬೇರೆ ಕಡೆಗೆ ಕೊಟ್ಟಿದ್ದರಿಂದ, ರಸ್ತೆಯನ್ನು ಬಿಟ್ಟು ಪಕ್ಕಕ್ಕೆ ವಾಹನವನ್ನು ತಿರುಗಿಸಿದ್ದನು, ರಸ್ತೆಯ ತುದಿಯಲ್ಲಿ ನಿಲ್ಲಿಸಲಾಗಿದ್ದ ಎರಡು ಕಾರುಗಳಿಗೆ ಡಿಕ್ಕಿ ಹೊಡೆದು ಹೆದ್ದಾರಿಯ ಆರಕ್ಷಕನೊಬ್ಬನನ್ನು ಕೊಂದಿದ್ದನು.

ಅದು ಸತ್ಯವೆಂದು ನೀವು ಬಲ್ಲಿರಿ: ದುರಂತವು ಯಾವದೇ ಸಮಯದಲ್ಲಿ ಹಾಗೂ ಯಾವದೇ ಸ್ಥಳದಲ್ಲಿ ಬೇಕಾದರೂ ಸಂಭವಿಸಬಲ್ಲದು. "ನಿಮ್ಮ ಜೀವ ಮಾನವು ಎಂಥದ್ದು? ಅದು ಸ್ವಲ್ಪ ಹೊತ್ತು ಕಾಣಿಸಿ ಕೊಂಡು ಆಮೇಲೆ ಕಾಣದೆ ಹೋಗುವ ಹಬೆಯಂತಿದೆ" (ಯಾಕೋಬ 4:14; KJV). ಇದು ನಿಮ್ಮ ಭವಿಷ್ಯಸೂಚಕವಾಗಿ ಹೇಳಿದ್ದಲ್ಲ, ಆದರೆ ನಿಮ್ಮನ್ನು ಸಿದ್ಧಗೊಳ್ಳುವಂತೆ - ಈಗಲೇ - ಬೇಡಿಕೊಳ್ಳುವದಕ್ಕಾಗಿಯೇ ಆಗಿದೆ. "ಈಗಲೇ ಆ ಸುಪ್ರಸನ್ನತೆಯಕಾಲ; ಇದೇ ಆ ರಕ್ಷಣೆಯ ದಿನ" (2 ಕೊರಿಂಥ 6:2). "ನೀವು ಈಹೊತ್ತು ದೇವರ ಶಬ್ದಕ್ಕೆ ಕಿವಿಗೊಟ್ಟರೆ ನಿಮ್ಮ ಹೃದಯಗಳನ್ನು ಕಠಿನಮಾಡಿಕೊಳ್ಳಬೇಡಿರಿ" (ಇಬ್ರಿಯ 4:7). ನೀವು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಅಗತ್ಯವಿದ್ದರೆ, ಇಂದೇ ಮಾಡಿಸಿಕೊಳ್ಳಿರಿ. ನೀವು ತಪ್ಪು ಮಾಡಿದ ದೇವರ ಮಗುವಾಗಿ ಸರಿ ದಾರಿಗೆ ಬರುವ ಅಗತ್ಯವಿರುವದಾದರೆ, ಅದನ್ನು ಈಗಲೇ ಮಾಡಿರಿ. ನೀವು ಸಿದ್ಧರಾಗಿರುವದಾದರೆ, ನೀವು "ಭವಿಷ್ಯವನ್ನು ನೋಡಿ ಮುಗುಳ್ನಗಬಲ್ಲಿರಿ" (ನೋಡಿರಿ ಜ್ಞಾನೋಕ್ತಿ 31:25).

**ಸ್ವಾರ್ಥ (18:7)**

ಬಹುಶಃ ನಮ್ಮಲ್ಲಿ ಯಾರೂ ರೋಮ್ ನಗರಕ್ಕಿದ್ದ ಅತ್ಯಾಡಂಭರ ಹಾಗೂ ವ್ಯರ್ಥತ್ವವನ್ನು

ಎಂದಿಗೂ ಸಮೀಪಿಸುವದಿಲ್ಲ; ಆದಾಗ್ಯೂ ನಾವು ನಮ್ಮ ವಿಷಯದಲ್ಲಿ ಪ್ರಾಮಾಣಿಕರಾಗಿರುವದಾದರೆ, ದೇವರು ನಮಗೆ ಅನುಗ್ರಹಿಸಿರುವ ದೇವರ ಆಶೀರ್ವಾದಗಳ ಮೇಲೆ ಒಳ್ಳೇ ಮನೆವಾರ್ತೆಯವರಾಗಿರುವದಕ್ಕೆ ಕೆಲವು ಸಾರಿ ವಿಫಲರಾಗುತ್ತೇವೆ ಎಂಬುದನ್ನು ಒಪ್ಪಿಕೊಳ್ಳಲೇ ಬೇಕು. ಬೈಬಲ್ ನಮಗೆ ವ್ಯರ್ಥ ಮಾಡುವದರ ವಿರುದ್ಧವಾಗಿ ಎಚ್ಚರಿಸುತ್ತದೆ (ಲೂಕ 15:13); ಯೇಸುವು ಎಲ್ಲರೂ ತಿಂದು ಮಿಕ್ಕಿದ ಆಹಾರವನ್ನು ಸಂಗ್ರಹಿಸುವಂತೆ ಹೇಳಿದನು (ಮತ್ತಾಯ 14:20). ಯಾವದನ್ನು "ವ್ಯರ್ಥತ್ವ"ವೆಂದು ಕಾಣಬೇಕೋ ಎಂಬುದು ವಿಷಯಾಧಾರಿತವಾಗಿದ್ದು, ಅದು ಆಯಾ ವ್ಯಕ್ತಿಯು ಜೀವಿಸುವ ಸಮಾಜ ಹಾಗೂ ಆತನು ಹೇಗೆ ಬೆಳೆಸಲ್ಪಟ್ಟಿದ್ದಾನೆ ಎಂಬುದರ ಮೇಲೆ ಆಧಾರವಾಗಿರುತ್ತದೆ. ಒಬ್ಬನಿಗೆ "ತ್ಯಾಜ್ಯ" ಎಂದು ಅನ್ನಿಸುವಂಥದ್ದು ಮತ್ತೊಬ್ಬನಿಗೆ ಹಾಗಿರದೆ ಇರಬಹುದು (ನೋಡಿರಿ ಮತ್ತಾಯ 26:8). ಹೇಗೂ, ಬೈಬಲಿನಲ್ಲಿ ನಂಬಿಕೆಯಿರುವವರೆಲ್ಲಾ ವ್ಯರ್ಥಮಾಡುವಂಥದ್ದು ತಪ್ಪು ಎಂಬ ಸಾಮಾನ್ಯವಾದ ತತ್ವವನ್ನು ಒಪ್ಪಿಕೊಳ್ಳಬಹುದಾಗಿದೆ.

ನಿಮ್ಮ ಕೈಗಳಲ್ಲಿ ದೇವರು ಕೊಟ್ಟಿರುವದನ್ನೆಲ್ಲಾ ಕಾಳಜಿ ಮಾಡಿ ಕಾಪಾಡಿಕೊಳ್ಳುವದಕ್ಕೆ ಬೇಕಾದ ಮಾರ್ಗಸೂಚಿಗಳಿಗಾಗಿ, ತನ್ನ ಯಜಮಾನನಿಗೆ ಸೇರಿದ್ದನ್ನು ದುಂದುವೆಚ್ಚ ಮಾಡಿದ್ದರ ಲೆಕ್ಕವನ್ನು ಒಪ್ಪಿಸುವಂತೆ ಕರೆಯಲ್ಪಟ್ಟ ಮನೆವಾರ್ತೆಯವನ ಕುರಿತಾದ ಸಾಮ್ಯವನ್ನು ಪರಿಗಣಿಸಿರಿ (ಲೂಕ 16:1). ಯೇಸುವು ಹೀಗೆ ಹೇಳಿದನು,

> ಹೀಗಿರುವದರಿಂದ ಅನ್ಯಾಯದ ಧನದ ವಿಷಯದಲ್ಲಿ ನೀವು ನಂಬಿಗಸ್ತರಲ್ಲದವರಾದರೆ ನಿಜವಾದ ಧನವನ್ನು ನಿಮ್ಮ ವಶಕ್ಕೆ ಯಾರು ಕೊಟ್ಟಾರು? ಮತ್ತೊಬ್ಬನ ಸೊತ್ತಿನ ವಿಷಯದಲ್ಲಿ ನೀವು ನಂಬಿಗಸ್ತರಲ್ಲದವರಾದರೆ ನಿಮ್ಮದನ್ನು ನಿಮಗೆ ಯಾರು ಕೊಟ್ಟಾರು? ಯಾವ ಆಳಾದರೂ ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು; ಅವನು ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ಪ್ರೀತಿಸುವನು, ಇಲ್ಲವೆ ಒಬ್ಬನನ್ನು ಹೊಂದಿಕೊಂಡು ಮತ್ತೊಬ್ಬನನ್ನು ತಾತ್ಸಾರಮಾಡುವನು. ನೀವು ದೇವರನ್ನೂ ಧನವನ್ನೂ ಕೂಡ ಸೇವಿಸಲಾರಿರಿ (ಲೂಕ 16:11-13).

ಮತ್ತಾಯ 16:26 ಸಹ ಇದಕ್ಕೆ ಸಂಬಂಧಿಸಿದ್ದಾಗಿದೆ: "ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು? ಅಥವಾ ಒಬ್ಬನು ತನ್ನ ಪ್ರಾಣಕ್ಕೆ ಏನು ಈಡು ಕೊಟ್ಟಾನು?"

ರೋಮ್ ಇಂದು ನಮ್ಮ ಜಗತ್ತಿನಲ್ಲಿ ಆಕೆಗೆ ತದ್ರೂಪವಾದದ್ದನ್ನು ಹೊಂದಿದ್ದಾಳೋ? ವ್ಯರ್ಥತ್ವದ ಜೊತೆಗೆ, ಮಾನವ ಜೀವಕ್ಕೆ ಯಾವದೇ ಗೌರವವನ್ನು ಕೊಡದವರನ್ನು ಈಗಲೂ ನಮ್ಮಲ್ಲಿ ಹೊಂದಿದ್ದೇವೋ? ಈಗಲೂ ಕೇವಲ ಹಣ ಸಂಪಾದನೆಯ ಚಿಂತೆಯೊಂದನ್ನೇ ಹೊಂದಿರುವ, ಏನೂ ಕೊಡದವರು ಹಾಗೂ ತಮ್ಮ ಜೀವನ ಶೈಲಿಗಳು ಬೇರೆಯವರ ಮೇಲೆ ಹೇಗೆ ಪರಿಣಾಮ ಬೀರುತ್ತವೆಂಬುದರ ಚಿಂತೆಯೇ ಇಲ್ಲದವರು ಇದ್ದಾರೋ? ನಾವು "ದುರ್ಬಲರನ್ನು ದುರುಪಯೋಗಪಡಿಸಿಕೊಂಡು, ಮಾದಕದ್ರವ್ಯಗಳ ವ್ಯವಹಾರ, ಕಾಮಪ್ರಚೋದಕಗಳಲ್ಲಿ ಕಳ್ಳಸಾಗಾಣೆ ಮಾಡುವದರ ಮೂಲಕ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸಿಕೊಳ್ಳುವವರನ್ನು"[55] ಕುರಿತು ಯೋಚಿಸಬಹುದು. ಬಳಿಕ, ಯುದ್ಧಗಳನ್ನು ಸುದೀರ್ಘವಾಗಿ ನಡೆಯುಂತೆಯೂ ಸಾವಿರಾರು ಜನರ ಸಾವಿನಲ್ಲಿ ಫಲಿತಗೊಳ್ಳುವಂತಹ ಆಯುಧಗಳ ವ್ಯವಹಾರಗಳನ್ನು ಮಾಡಿ ಐಶ್ವರ್ಯವನ್ನು ಮಾಡಿಕೊಳ್ಳುವವರು ಇದ್ದಾರೆ. ವೇಶ್ಯಾವಾಟಿಕೆ, ಜೂಜಾಟ, ಮತ್ತು ಇತರ ಅನೈತಿಕ ಉದ್ಯಮಗಳನ್ನು ಪಟ್ಟಿಗೆ ಸೇರಿಸಬಹುದಾಗಿದೆ. ಅಮೆರಿಕದಲ್ಲಿ, ಮದ್ಯ ಹಾಗೂ ತಂಬಾಕುಗಳ ಉದ್ಯಮಗಳನ್ನು ಸಹ

ಸೇರ್ಪಡೆಗೊಳಿಸಬಹುದು.

ಈ ಸತ್ಯವನ್ನು ಮನದಟ್ಟು ಮಾಡಿಕೊಳ್ಳೋಣ: ನಾವು ಎಂದಾದರೂ ಬೇರೆಯವರ ಬದಲಾಗಿ ಪ್ರಮುಖವಾಗಿ ನಮ್ಮ ಬಗ್ಗೆಯೇ ಯೋಚಿಸಿಕೊಳ್ಳುವ ಅಪರಾಧ ಮಾಡಿದ್ದೇವೋ? ಪ್ರಶ್ನೆಯನ್ನು ಕೇಳುವ ಉದ್ದೇಶವು ಅದಕ್ಕೆ ಉತ್ತರವನ್ನು ಕೊಡುವದಕ್ಕಾಗಿಯೇ ಆಗಿದೆ. ನಾವು ಕಾದಾಡುವ ಅತ್ಯಂಥ ದೊಡ್ಡ ಯುದ್ಧಗಳಲ್ಲೊಂದೆಂದರೆ "ಸ್ವಾರ್ಥ ಚಿಂತೆ" (2 ತಿಮೊಥೆ 3:2). Henry Ward Beecherನು ಸ್ವಾರ್ಥವನ್ನು "ಬೇರೆಯವರಲ್ಲಿರುವ ಅದನ್ನು ಯಾವನೂ ಕ್ಷಮಿಸದಂಥ ಹಾಗೂ ತನ್ನಲ್ಲಿ ಅದನ್ನು ಹೊಂದಿರದೆ ಯಾವನೊಬ್ಬನೂ ಇಲ್ಲದಿರುವಂಥ ಹೇಸಿಗೆಕರವಾದ ದುರ್ಗುಣ"[56] ಎಂದು ಕರೆದನು.

ಪೌಲನು ಫಿಲಿಪ್ಪಿ 2:3, 4ರಲ್ಲಿ ಅಂತಿಮವಾದ ಕರೆಯನ್ನು ಕೊಟ್ಟನು: "ಪಕ್ಷಪಾತದಿಂದಾಗಲಿ ... ಯಾವದನ್ನೂ ಮಾಡದೆ ಪ್ರತಿಯೊಬ್ಬನು ದೀನಭಾವದಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಠರೆಂದು ಎಣಿಸಲಿ. ನಿಮ್ಮಲ್ಲಿ ಪ್ರತಿಯೊಬ್ಬನು ಸ್ವಹಿತವನ್ನು ಮಾತ್ರ ನೋಡದೆ ಪರಹಿತವನ್ನು ಸಹ ನೋಡಲಿ." ಆತನು ಸ್ವಾರ್ಥರಹಿತ ಪ್ರೀತಿಗೆ ಪರಿಪೂರ್ಣ ಮಾದರಿಯಾಗಿ ಯೇಸುವನ್ನು ಜ್ಞಾಪಿಸುತ್ತಾನೆ (ವಚನಗಳು 5-8). ಯೋಹಾನನು ಹೀಗೆ ಬರೆದನು, "ಈ ಲೋಕದ ಸಂಪತ್ತುಳ್ಳ ಯಾವನಾದರೂ ಕೊರತೆಯಲ್ಲಿ ಬಿದ್ದಿರುವ ತನ್ನ ಸಹೋದರನನ್ನು ನೋಡಿ ಕರುಣಿಸದೆ ಬಿಟ್ಟರೆ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರುವದುಂಟೇ?" (1 ಯೋಹಾನ 3:17). ರೋಮ್ ನಗರಿಯು ಕೇವಲ ತನ್ನ ಬಗ್ಗೆ ಮಾತ್ರವೇ ಯೋಚಿಸಿಕೊಂಡಳು ಮತ್ತು ಬೇರೆಯವರ ಕಷ್ಟಗಳನ್ನು ನಿರ್ಲಕ್ಷ್ಯ ಮಾಡಿದಳು. ಯೇಸುವಿನ ಹಿಂಬಾಲಕರಾಗಿ, ಆಕೆಯ ಮಾದರಿಯನ್ನು ಅನುಸರಿಸುವ ಧೈರ್ಯವನ್ನು ಮಾಡದಿರೋಣ.

---

## ಅಡಿಟಿಪ್ಪಣಿಗಳು

[1]Daniel Russell, *Preaching the Apocalypse* (New York: Abingdon Press, 1935), 206. [2]Bruce M. Metzger, *Breaking the Code: Understanding the Book of Revelation* (Nashville: Abingdon Press, 1993), 85. [3]Russell, 206. [4]G. B. Caird, *A Commentary on the Revelation of St. John the Divine*, Harper's New Testament Commentaries, ed. Henry Chadwick (London: Adam & Charles Black, 1966), 226. [5]Metzger, 87. [6]J. W. Roberts, *The Revelation to John (The Apocalypse)*, The Living Word Commentary, ed. Everett Ferguson (Austin, Tex.: Sweet Publishing Co., 1974), 146. [7]William Barclay, *The Revelation of John,* vol. 2, rev. ed., The Daily Study Bible Series (Philadelphia: Westminster Press, 1976), 151. [8]Roberts, 146. [9]Merrill C. Tenney, *The Book of Revelation,* Proclaiming the New Testament (Grand Rapids, Mich.: Baker Book House, 1963), 90. [10]Caird, 223.

[11]Robert H. Mounce, *The Book of Revelation,* The New International Commentary on the New Testament, ed. F. F. Bruce (Grand Rapids, Mich.: Wm. B. Eerdmans Publishing Co., 1977), 324. [12]Leon Morris, *Revelation*, rev. ed., The Tyndale New Testament Commentaries, ed. Leon Morris (Grand Rapids, Mich.: Wm. B. Eerdmans Publishing Co., 1987), 210. [13]William Hendriksen, *More Than Conquerors* (Grand Rapids, Mich.: Baker Book House, 1954), 208. [14]Barclay, 152. [15]Michael Wilcock, *The Message of Revelation: I Saw Heaven Opened*, The Bible Speaks Today, ed. John R. W. Stott (Downers Grove, Ill.: Intervarsity Press, 1975), 166. [16]Mounce, 324. [17]Morris, 209. [18]Ibid., 210. [19]Ibid. [20]Thomas Fuller, "The Holy State and the Profane State" (1642). Quoted in Lewis Copeland, ed., *Popular Quotations for All Uses*, rev. ed.

(Garden City, N.Y.: Doubleday & Co., 1961), 414.

[21]Barclay, 145. [22]I. T. Beckwith, *The Apocalypse of John* (N.p.: Macmillan Co., 1919; reprint, Grand Rapids, Mich.: Baker Book House, 1967), 715. [23]Caird, 223. [24]Beckwith, 713. [25]Warren W. Wiersbe, *The Bible Exposition Commentary,* vol. 2 (Wheaton, Ill.: Victor Books, 1989), 615. [26]Barclay, 155. [27]G. R. Beasley-Murray, *The Book of Revelation*, The New Century Bible Commentary, ed. Matthew Black (Grand Rapids, Mich.: Wm. B. Eerdmans Publishing Co., 1974), 266. [28]Frank Pack, *Revelation,* Part 2 (Austin, Tex.: R. B. Sweet Co., 1965), 37. [29]Henry B. Swete, *The Apocalypse of St. John*, 3d ed. (London: Macmillan Co., 1909; reprint, Grand Rapids, Mich.: Wm. B. Eerdmans Publishing Co., 1954), 235. [30]Martin Franzmann, *The Revelation to John* (St. Louis: Concordia Publishing House, 1976), 122.

[31]Wiersbe, 615. ಕೆಲವು ಅಂದಾಜುಗಳು ರೋಮ್ ನಗರ ಅರ್ಧದಷ್ಟು ಜನಸಂಖ್ಯೆಯವರು ಗುಲಾಮರೇ ಆಗಿದ್ದರೆಂದು ಹೇಳುವಷ್ಟರ ಮಟ್ಟಿಗೆ ದೂರ ಸಾಗುತ್ತವೆ. [32]Edgar Allan Poe, "To Helen" (1831), st. 2. Quoted in John Bartlett, *Bartlett's Familiar Quotations*, 16th ed., ed. Justin Kaplan (Boston: Little, Brown, and Co., 1992), 451. [33]E. A. Judge, "Rome," *Baker Encyclopedia of Bible Places*, ed. John J. Bimson (Grand Rapids, Mich.: Baker Books, 1995), 268. [34]Mounce*,* 329. See Talmud *Kiddushin* 49. ಸುಖಭೋಗ ಹಾಗೂ ಸ್ವೇಚ್ಛಾಚಾರದ ಕುರಿತಾಗಿ ಹೆಚ್ಚುವರಿ ಮಾಹಿತಿಯು Barclay, 154–64ದಲ್ಲಿ ಕೊಡಲ್ಪಟ್ಟಿದೆ. [35]Copeland, 293ದಲ್ಲಿ ಉಲ್ಲೇಖಿಸಲ್ಪಟ್ಟಿದೆ. Titus Liviusನು ಕ್ರಿ.ಪೂ. 59ರಿಂದ ಕ್ರಿ.ಶ. 17ರ ವರೆಗೂ ಜೀವಿಸಿದ್ದನು. [36]Russell, 211. [37]Caird, 231. [38]George Eldon Ladd, *A Commentary on the Revelation of John* (Grand Rapids, Mich.: Wm. B. Eerdmans Publishing Co., 1972), 238–43. [39]Homer Hailey, *Revelation: An Introduction and Commentary* (Grand Rapids, Mich.: Baker Book House, 1979), 372. [40]Mounce, 335.

[41]Metzger, 87. [42]Jim McGuiggan, *The Book of Revelation*, Looking Into The Bible Series (Lubbock, Tex.: International Biblical Resources, 1976), 249. [43]Wiersbe, 614–16. [44]Owen L. Crouch, *Expository Preaching and Teaching: Revelation* (Joplin, Mo.: College Press Publishing Co., 1985), 305. [45]Many commentaries make special application to the United States. See Hailey, 366, 371–72. [46]Copeland, 243ದಲ್ಲಿ ಉಲ್ಲೇಖಿಸಲ್ಪಟ್ಟಿದೆ. [47]Eusebius *Ecclesiastical History* 3.5. [48]ಈ ಪರಿಚ್ಛೇದದ ಬಹುಪಾಲು ಭಾಗವು McGuiggan, 266 ಕೃತಿಯಿಂದ ಭಾವಾನುವಾದಗೊಳಿಸಲ್ಪಟ್ಟಿರುತ್ತದೆ. [49]Barclay, 152. [50]Tenney, 93.

[51]Ibid., 91–92. [52]Ibid., 93. [53]ಈ ವಾಕ್ಯವು Wiersbe, 616 ಬಳಸಿದ ಪದಗುಚ್ಛದ ಮೇಲೆ ಆಧಾರವಾಗಿರುತ್ತದೆ. [54]Hendriksen, 213. [55]Philip E. Hughes, *The Book of the Revelation: A Commentary* (Grand Rapids, Mich.: Wm. B. Eerdmans Publishing Co., 1990), 189. [56]Quoted in Herbert V. Prochnow, *A Dictionary of Wit, Wisdom, & Satire* (New York: Popular Library, 1964), 242.